ಮೂಲಭೂತ

ಪುಸ್ತಕ ಮಾಲೆ

# ಅರ್ಥಶಾಸ್ತ್ರ ಪರಿಚಯ

ಡಾ|| ಎಂ.ಸಿ. ಕೊಡ್ಲಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮೂಲಭೂತ ಶೈಕ್ಷಣಿಕ ಪುಸ್ತಕಮಾಲೆ

# ಅರ್ಥಶಾಸ್ತ್ರ ಪರಿಚಯ

ಡಾ. ಎಂ. ಸಿ. ಕೊಡ್ಲಿ ಅವರು 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಪುಣೆಯ ಗೋಖಲೆ ಇನ್ಸ್ಟಿಟ್ಯೂಟ್‌ನಲ್ಲಿ ಸಂಶೋಧಕರಾಗಿ ವೃತ್ತಿ ಜೀವನ ಆರಂಭಿಸಿದರು. 1965ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಸಂಶೋಧನಾ ಸಹಾಯಕರಾಗಿ ನೇಮಕ ಹೊಂದಿದ ಅವರು ಅದೇ ವಿಭಾಗದ ಪ್ರಾಧ್ಯಾಪಕರಾಗಿ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದಾರೆ. ಮೂವತ್ತು ವರ್ಷಗಳ ಬೋಧನ ಅನುಭವವಿರುವ ಇವರು ಮೂವತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಕಾನ್ಫರೆನ್ಸ್‌ಗಳಲ್ಲೂ ಭಾಗವಹಿಸಿದ್ದಾರೆ.

ಮೂಲಭೂತ ಶೈಕ್ಷಣಿಕ ಪುಸ್ತಕ ಮಾಲೆ

# ಅರ್ಥಶಾಸ್ತ್ರ ಪರಿಚಯ

ಡಾ. ಎಂ. ಸಿ. ಕೊಡ್ಲಿ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

ARTHA SASTRA PARICHAYA : a study of Economic Introduction by Dr. M. C. Kodli published by Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore-560 018.

© ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರಥಮ ಮುದ್ರಣ : ೧೯೯೫

ಬೆಲೆ : ರೂ 19 (ಹತ್ತೊಂಬತ್ತು ರೂ.ಗಳು)

ಮುದ್ರಣ :

**ಇಳಾ ಪ್ರಿಂಟರ್ಸ್**

೧೫೪, ೪ನೇ ಮುಖ್ಯರಸ್ತೆ, ೮ನೇ ಕ್ರಾಸ್

ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

ದೂರವಾಣಿ : ೬೭೩೧೫೯

# ಮುನ್ನುಡಿ

''ಭಾರತೀಯ ಶಾಲಾ ಬಾಲಕನ ಬುದ್ಧಿ, ದೇಹ ಮನಸ್ಸುಗಳನ್ನು ಇಂಗ್ಲಿಷಿನ ಅಮಾನುಷ ಹೊರೆಯಿಂದ ರಕ್ಷಿಸಬೇಕಾಗಿದೆ'' ಎಂದು ಡಾ: ರಾಮಮನೋಹರ ಲೋಹಿಯಾ ಅವರು ಹೇಳಿದ್ದಾರೆ. ಕರ್ನಾಟಕ ಸರ್ಕಾರ ಕನ್ನಡವನ್ನು ಆಡಳಿತ ಭಾಷೆ ಮಾಡಿರುವುದರ ಜೊತೆಗೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡ ಮಾಧ್ಯಮದಲ್ಲಿ ಬೋಧಿಸಬೇಕೆಂಬ ಧ್ಯೇಯವನ್ನು ಹೊಂದಿದೆ. ಗ್ರಾಮೀಣ ಪ್ರದೇಶದಿಂದ ಬಂದ ವಿದ್ಯಾರ್ಥಿಗಳಿಗಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಚ್. ಡಿ. ದೇವೇಗೌಡರು ಹಲವು ಯೋಜನೆಗಳನ್ನು ರೂಪಿಸಿದ್ದಾರೆ. ಕನ್ನಡ ನಾಡಿನ ವಿದ್ಯಾರ್ಥಿಗಳು ಅದರಲ್ಲೂ ಗ್ರಾಮೀಣ ಪ್ರದೇಶದಿಂದ ಬಂದವರು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡುವುದರಿಂದ ಜ್ಞಾನಾರ್ಜನೆಯ ಜೊತೆಗೆ ಚಿಂತನ ಶಕ್ತಿಯ ವಿಕಸನವೂ ಆಗುತ್ತದೆ. ಈಗಾಗಲೇ ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಅನೇಕ ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಕಲೆ ಹಾಗೂ ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ ಮೂಲಭೂತ ಶಿಕ್ಷಣಕ್ಕೆ ಒತ್ತು ಕೊಡುವ ದೃಷ್ಟಿಯಿಂದ ಮೂಲಭೂತ ಶಿಕ್ಷಣ ಮಾಲೆಯನ್ನು ಪ್ರಾಧಿಕಾರ ಆರಂಭಿಸಿದೆ. ಕನ್ನಡದಲ್ಲಿ ದೊರೆಯುವ ಪಠ್ಯ ಪುಸ್ತಕಗಳಿಗೆ ಪೂರಕವಾಗಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಹೆಚ್ಚಿನ ಓದು ಸಾಮಗ್ರಿಯನ್ನು ಒದಗಿಸಲು ಈ ಮಾಲೆಯು ನೆರವಾಗುತ್ತದೆ. ಈ ಮಾಲೆಯ ಕೃತಿಗಳು ಪಠ್ಯ ಪುಸ್ತಕಗಳಲ್ಲದಿದ್ದರೂ ಆ ವಿಷಯಗಳ ಆಳ ಹರವುಗಳ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ; ಕನ್ನಡದಲ್ಲಿ ಆಕರ ಗ್ರಂಥಗಳ ಕೊರತೆಯನ್ನು ನಿವಾರಿಸುವುದೇ ಈ ಮಾಲೆಯ ಉದ್ದೇಶ.

ಈ ಮಾಲೆಯಲ್ಲಿ ಈಗಾಗಲೇ ಅನೇಕ ಕೃತಿಗಳು ಪ್ರಕಟವಾಗಿದ್ದು ಅವು ಸಾರ್ವತ್ರಿಕವಾಗಿ ಮನ್ನಣೆಗಳಿಸಿವೆ. ಈ ಕಾರ್ಯಕ್ರಮದಂತೆ "ಅರ್ಥಶಾಸ್ತ್ರ ಪರಿಚಯ" ಎಂಬ ಪುಸ್ತಕವನ್ನು ಡಾ. ಎಂ. ಸಿ. ಕೊಡ್ಲಿ ಅವರು ಪ್ರೀತಿಯಿಂದ ಬರೆದುಕೊಟ್ಟಿದ್ದಾರೆ. ಇಳಾ ಪ್ರಿಂಟರ್ಸ್ ಅವರು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ಪ್ರಾಧಿಕಾರದ ಪರವಾಗಿ ಧನ್ಯವಾದಗಳು.

ಈ ಮಾಲೆಯ ನಿರ್ವಹಣೆಯ ಕಾರ್ಯದಲ್ಲಿ ಸಹಕರಿಸುತ್ತಿರುವ ಮೂಲಭೂತ ಶಿಕ್ಷಣ ಮಾಲೆಯ ಉಪಸಮಿತಿಯ ಸದಸ್ಯರಿಗೂ ಪ್ರಾಧಿಕಾರದ ಸದಸ್ಯರಿಗೂ ಕೃತಜ್ಞತೆಗಳು. ಈ ಮಾಲೆಯ ಬಗ್ಗೆ ಸಹೃದಯ ಕನ್ನಡ ಬಂಧುಗಳ ಸಲಹೆ, ವಿಮರ್ಶೆಗಳಿಗೆ ಸದಾ ಸ್ವಾಗತ.

**ನೆಲಮನೆ ದೇವೇಗೌಡ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

# ಪರಿವಿಡಿ


| | | |
|---|---|---|
| ೧. | ಅರ್ಥಶಾಸ್ತ್ರದ ಸ್ವರೂಪ | ೧ |
| ೨. | ಬಯಕೆಗಳು ಹಾಗೂ ಅವುಗಳ ತೃಪ್ತಿ | ೬ |
| ೩. | ಉತ್ಪಾದನಾ ಸಂಸ್ಥೆ | ೨೩ |
| ೪. | ಮೌಲ್ಯ ಸಮಸ್ಯೆ | ೩೧ |
| ೫. | ವಿತರಣಾ ಸಮಸ್ಯೆ | ೪೯ |
| ೬. | ಹಣ | ೬೪ |
| ೭. | ಅಂತರ ರಾಷ್ಟ್ರೀಯ ವ್ಯಾಪಾರ | ೭೫ |
| ೮. | ಆರ್ಥಿಕ ಅಭಿವೃದ್ಧಿ ಹಾಗೂ ಬೆಳವಣಿಗೆಯ ಸಮಸ್ಯೆಗಳು | ೮೨ |
| ೯. | ರಾಷ್ಟ್ರೀಯ ಆದಾಯ ಮತ್ತು ಉತ್ಪನ್ನ | ೯೩ |
| ೧೦. | ಸರಕಾರದ ಹಸ್ತಕ್ಷೇಪ | ೯೮ |

# ೧. ಅರ್ಥಶಾಸ್ತ್ರದ ಸ್ವರೂಪ

ಯಾವುದೇ ಸಮಾಜವು ಆರ್ಥಿಕ ರಂಗದಲ್ಲಿ ಎರಡು ಮುಖ್ಯ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ. ಅವು ಯಾವುವೆಂದರೆ

೧) ಯಾವ ವಸ್ತುಗಳನ್ನು ಉತ್ಪಾದಿಸಬೇಕು ಮತ್ತು ಅವುಗಳನ್ನು ಯಾವ ಪ್ರಮಾಣದಲ್ಲಿ ಉತ್ಪಾದಿಸಬೇಕು?

೨) ಅವುಗಳನ್ನು ಹೇಗೆ ಹಂಚಬೇಕು?

ಈ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಸಮಾಜ ವಿವಿಧ ರೀತಿಯ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಅವು ಯಾವುವೆಂದರೆ :

## *೧.೧ ಸಂಪ್ರದಾಯ ವ್ಯವಸ್ಥೆ*

ಸಂಪ್ರದಾಯ ಆರ್ಥಿಕ ವ್ಯವಸ್ಥೆಯಲ್ಲಿ ಯಾವನು ಯಾವ ಉದ್ಯೋಗ ಮಾಡಬೇಕೆಂಬುದನ್ನು ಸಂಪ್ರದಾಯದ ಮುಖಾಂತರ ನಿರ್ಧರಿಸಲಾಗುತ್ತಿತ್ತು. ರೈತನ ಮಗನು ರೈತ, ನೇಕಾರನ ಮಗನು ನೇಕಾರನಾಗಿಯೇ ಈ ವ್ಯವಸ್ಥೆಯಲ್ಲಿ ಮುಂದುವರಿಯಬೇಕಾಗಿತ್ತು. ಈ ರೀತಿಯ ವ್ಯವಸ್ಥೆ ಹಿಂದಿನ ಕಾಲದಲ್ಲಿ ಎಷ್ಟೋ ವರುಷಗಳವರೆಗೆ ಪ್ರಚಲಿತದಲ್ಲಿತ್ತು. ಈ ರೀತಿಯ ವ್ಯವಸ್ಥೆಯಿಂದ ಆಗಿನ ಸಮಾಜ ತನಗೆ ಬೇಕಾದ ವಸ್ತುಗಳ ಹಾಗೂ ಸೇವೆಗಳ ಉತ್ಪಾದನೆಯನ್ನು ಮಾಡಿಕೊಂಡಿತ್ತು.

## *೧.೨ ಪ್ರಭುತ್ವ ಪದ್ಧತಿ*

ಈ ರೀತಿಯ ವ್ಯವಸ್ಥೆಯಲ್ಲಿ ಯಾವ ಕೆಲಸಕ್ಕಾಗಿ ಎಷ್ಟು ಜನರನ್ನು ಉಪಯೋಗಿಸಬೇಕೆಂಬುದನ್ನು ಆಜ್ಞೆಯ ಮೂಲಕ ಒಬ್ಬ ಮುಖಂಡ ಅಥವಾ

ರಾಜ ನಿರ್ಧರಿಸುತ್ತಿದ್ದು, ಇಜಿಪ್ತಿನ ದೊರೆಗಳು ದೊಡ್ಡ ಪ್ರಮಾಣದಲ್ಲಿ ಜನರನ್ನು ಉಪಯೋಗಿಸಿ ಪಿರಾಮಿಡ್ಡುಗಳನ್ನು ನಿರ್ಮಿಸಿದರು. ಅದೇ ರೀತಿಯಾಗಿ ಚೀನದ ದೊರೆ ಲಕ್ಷಗಟ್ಟಲೆ ಶ್ರಮಿಕರನ್ನು ವರ್ಷಗಟ್ಟಲೆ ಉಪಯೋಗಿಸಿ ಚೀನದ ಸುತ್ತ ಗೋಡೆಯನ್ನು ನಿರ್ಮಿಸಿದ.

## *೧.೩ ಮಾರುಕಟ್ಟೆಯ ವ್ಯವಸ್ಥೆ*

ಮಾರುಕಟ್ಟೆಯ ವ್ಯವಸ್ಥೆಯ ಪ್ರಕಾರ ಯಾವ ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು ಮತ್ತು ಅವುಗಳನ್ನು ಹೇಗೆ ಹಂಚಬೇಕೆಂಬುದನ್ನು ಮಾರುಕಟ್ಟೆಯೇ ನಿರ್ಧರಿಸುತ್ತದೆ. ಈ ವ್ಯವಸ್ಥೆಯನ್ನು ಅರ್ಥಶಾಸ್ತ್ರದ ಪಿತಾಮಹನಾದ ಆಡಮ್ ಸ್ಮಿಥ ಕಾಣದ ಕೈ ಯೆಂದು ಕರೆದನು. ಯಾವದೇ ಒಂದು ವಸ್ತುವಿಗೆ ಬೇಡಿಕೆ ಹೆಚ್ಚಾದಾಗ ಅದರ ಬೆಲೆ ಮಾರುಕಟ್ಟೆಯಲ್ಲಿ ಏರುತ್ತದೆ. ಬೆಲೆ ಏರಿದಾಗ ಆ ವಸ್ತುವನ್ನು ಉತ್ಪಾದಿಸಲು ಹೆಚ್ಚಿನ ಉತ್ಪಾದನಾ ಸಾಧನಗಳು ಆ ಕಡೆಗೆ ಹೋಗುತ್ತವೆ. ಬೇಡಿಕೆಗಿಂತ ಪೂರೈಕೆ ಹೆಚ್ಚಾದಾಗ ವಸ್ತುವಿನ ಬೆಲೆ ಕುಗ್ಗುವದರಿಂದ ಕೆಲವೊಂದು ಉತ್ಪಾದನಾ ಸಾಧನಗಳು ಆ ವಸ್ತುವಿನ ಉತ್ಪಾದನೆಯನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತವೆ. ಈ ರೀತಿಯಾಗಿ ಮಾರುಕಟ್ಟೆ ವಸ್ತುವಿನ ಉತ್ಪಾದನೆಯನ್ನು ನಿರ್ಧರಿಸುತ್ತದೆ. ಆರ್ಥಿಕವಾಗಿ ಮುಂದುವರಿದ ಸಮಾಜಗಳಲ್ಲಿ ಈ ಮಾರುಕಟ್ಟೆಯ ವ್ಯವಸ್ಥೆಯನ್ನು ನಾವು ಕಾಣುತ್ತೇವೆ.

ಸಂಪ್ರದಾಯಿಕ ವ್ಯವಸ್ಥೆ ಮತ್ತು ಪ್ರಭುತ್ವದ ವ್ಯವಸ್ಥೆಯಲ್ಲಿ ಅರ್ಥಶಾಸ್ತ್ರ ವಿಶ್ಲೇಷಣೆಗೆ ಅವಕಾಶವಿಲ್ಲ. ಮಾರುಕಟ್ಟೆ ವ್ಯವಸ್ಥೆಯಲ್ಲಿ ಮಾತ್ರ ಅರ್ಥಶಾಸ್ತ್ರ ವಿಶ್ಲೇಷಣೆಗೆ ಅವಕಾಶವಿರುವದರಿಂದ ಆ ಪದ್ಧತಿಯನ್ನು ನಾವು ಕೂಲಂಕಷವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ಅರ್ಥಶಾಸ್ತ್ರವು ಒಂದು ಸಾಮಾಜಿಕ ಶಾಸ್ತ್ರ. ಸಾಮಾಜಿಕ ಶಾಸ್ತ್ರವೆಂದರೆ ಸಮಾಜದಲ್ಲಿಯ ಮಾನವನ ನಡತೆಯನ್ನು ಅಭ್ಯಸಿಸುವ ಶಾಸ್ತ್ರ. ಮಾನವನ

ರಾಜಕೀಯ ಚಟುವಟಿಕೆಗಳನ್ನು ರಾಜ್ಯಶಾಸ್ತ್ರ ಅಭ್ಯಸಿಸುತ್ತದೆ. ಸಮಾಜಶಾಸ್ತ್ರ ಮಾನವನ ಸಾಮಾಜಿಕ ಚಟುವಟಿಕೆಗಳನ್ನು ಅಭ್ಯಸಿಸುತ್ತದೆ. ಅರ್ಥಶಾಸ್ತ್ರವು ಐಶ್ವರ್ಯವನ್ನು ಉತ್ಪಾದಿಸುವ, ವಿತರಿಸುವ ಮತ್ತು ಅದರ ಉಪಭೋಗಕ್ಕೆ ಸಂಬಂಧಿಸಿದಂತೆ ಮಾನವನ ನಡತೆಯನ್ನು ಅಭ್ಯಸಿಸುತ್ತದೆ.

ಆರ್ಥಿಕ ಚಟುವಟಿಕೆಗಳಿಗೆ ಮಾನವನ ಬಯಕೆಗಳು ಮೂಲ. ಮಾನವನ ಬಯಕೆಗಳು ಅಮಿತವಾಗಿದ್ದು ಅವುಗಳನ್ನು ಮಿತವಾದ ಸಾಧನಗಳಿಂದ ಅವನು ಹೇಗೆ ತೃಪ್ತಿಪಡಿಸುತ್ತಾನೆಂಬುದನ್ನು ಅರ್ಥಶಾಸ್ತ್ರ ವಿವೇಚಿಸುತ್ತದೆ.

### *೧.೪ ಅರ್ಥಶಾಸ್ತ್ರದ ವ್ಯಾಖ್ಯೆಗಳು*

ಆಧುನಿಕ ಅರ್ಥಶಾಸ್ತ್ರದ ಪಿತಾಮಹನೆನಿಸಿದ ಆಡಂ ಸ್ಮಿಥ 1776ರಲ್ಲಿ ಪ್ರಕಟಿಸಿದ ರಾಷ್ಟ್ರಗಳ ಸಂಪತ್ತು ಎಂಬ ಗ್ರಂಥದಲ್ಲಿ ಅರ್ಥಶಾಸ್ತ್ರವು ಸಂಪತ್ತನ್ನು ಅಭ್ಯಸಿಸುವ ಶಾಸ್ತ್ರವೆಂದು ವಿವರಿಸಿದನು. ಮಾನವನು ಸಂಪತ್ತನ್ನು ಹೇಗೆ ಉತ್ಪಾದಿಸುತ್ತಾನೆ. ಅದನ್ನು ಹೇಗೆ ಉಪಯೋಗಿಸುತ್ತಾನೆ. ಹೇಗೆ ವಿನಿಮಯ ಮಾಡುತ್ತಾನೆ ಮತ್ತು ಹೇಗೆ ಹಂಚುತ್ತಾನೆ ಎಂಬುದನ್ನು ಅರ್ಥಶಾಸ್ತ್ರವು ಅಭ್ಯಸಿಸುತ್ತದೆಯೆಂದು ಆಡಂ ಸ್ಮಿಥ ಅಭಿಪ್ರಾಯ ಪಟ್ಟನು.

ಅರ್ಥಶಾಸ್ತ್ರದ ಈ ವಿವರಣೆ ಆಗಿನ ಕಾಲದ ಅನೇಕ ಆಂಗ್ಲ ಪಂಡಿತರಿಗೆ ಸರಿ ಎನಿಸಲಿಲ್ಲ. ಕಾರ್ಲೈಲ್, ಡಿಕೆನ್ಸ ಎಂಬ ದಾರ್ಶನಿಕರು ಅರ್ಥಶಾಸ್ತ್ರದ ಈ ವಿವರಣೆಯನ್ನು ಕಟುವಾಗಿ ಟೀಕಿಸಿದರು. ಅರ್ಥಶಾಸ್ತ್ರವು ಸಂಪತ್ತೆಂಬ ಪಿಶಾಚಿಯನ್ನು ಪೂಜಿಸುವ ಶಾಸ್ತ್ರವೆಂದು ಹೀಯಾಳಿಸಿದರು. ಆಡಂ ಸ್ಮಿಥ ಸಂಪತ್ತಿಗೆ ಪ್ರಾಧಾನ್ಯತೆಯನ್ನು ಕೊಟ್ಟು ಆ ಸಂಪತ್ತನ್ನು ಉಪಯೋಗಿಸುವ ಮಾನವನನ್ನೆ ಮರೆತಿದ್ದಾನೆಂದು ಅವರು ವಾದಿಸಿದರು.

ಆದರೆ ಈ ಟೀಕಾಕಾರರ ವಾದವು ಅಷ್ಟು ಸಮಂಜಸವಾಗಿರಲಿಲ್ಲ. ಯಾಕೆಂದರೆ ಅವರು ಸಂಪತ್ತು ಎಂಬ ಪದಕ್ಕೆ ಕೇವಲ ಹಣವೆಂಬ ಸಂಕುಚಿತ

ಅರ್ಥವನ್ನು ಕಲ್ಪಿಸಿಕೊಂಡು ಅರ್ಥಶಾಸ್ತ್ರದ ಬಗ್ಗೆ ತಪ್ಪು ತಿಳಿವಳಿಕೆ ಮಾಡಿಕೊಂಡಿದ್ದಾರೆ. ಆದರೆ ವಿಶಾಲವಾದ ಅರ್ಥದಲ್ಲಿ ಸಂಪತ್ತು ಎಂಬ ಪದದಲ್ಲಿ ಆಹಾರ, ಬಟ್ಟೆ, ವಸತಿ ಮತ್ತು ಇನ್ನೂ ಅನೇಕ ಜೀವನಾವಶ್ಯಕ ವಸ್ತುಗಳು ಹಾಗೂ ಸೇವೆಗಳು ಸಮಾವೇಶವಾಗಿರುತ್ತವೆ.

ಇಂಗ್ಲಂಡಿನ ಇನ್ನೊಬ್ಬ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಮಾರ್ಶಲ 19ನೆಯ ಶತಮಾನದ ಕೊನೆಯಲ್ಲಿ ಪ್ರಕಟಿಸಿದ ತಮ್ಮ 'ಅರ್ಥಶಾಸ್ತ್ರದ ತತ್ವಗಳು' ಎಂಬ ಪುಸ್ತಕದಲ್ಲಿ ಅರ್ಥಶಾಸ್ತ್ರದ ವ್ಯಾಖ್ಯೆಯನ್ನು ಈ ಕೆಳಗಿನಂತೆ ಕೊಟ್ಟಿದ್ದಾನೆ.

"ಅರ್ಥಶಾಸ್ತ್ರದಲ್ಲಿ ನಾವು ನಿಜವಾಗಿಯೂ ಅಭ್ಯಸಿಸುವದು ಸಂಪತ್ತನ್ನಲ್ಲ ಆದರೆ ಮಾನವನನ್ನು. ಅರ್ಥಶಾಸ್ತ್ರದ ಅಭ್ಯಾಸದಲ್ಲಿ ಸಂಪತ್ತು ಮುಖ್ಯವಾದರೂ ಅದು ಮಾನವನ ಯೋಗಕ್ಷೇಮಕ್ಕೆ ಅಥವಾ ಕಲ್ಯಾಣಕ್ಕೆ ಆಧೀನವಾಗಿರುವದರಿಂದ ಮಾನವನ ಯೋಗಕ್ಷೇಮವೇ ಇಲ್ಲಿ ಮುಖ್ಯವಾಗಿದೆ. ಅರ್ಥಶಾಸ್ತ್ರವು ವ್ಯಕ್ತಿಯ ದೈನಂದಿನ ವ್ಯವಹಾರಿಕ ಜೀವನದ ಚಟುವಟಿಕೆಗಳನ್ನು ವಿವೇಚಿಸುತ್ತದೆ. ವ್ಯಕ್ತಿಯು ಸಂಪತ್ತನ್ನು ಹೇಗೆ ಗಳಿಸುತ್ತಾನೆ ಮತ್ತು ಅದನ್ನು ಹೇಗೆ ವ್ಯಯ ಮಾಡುತ್ತಾನೆ ಎಂಬುದನ್ನು ಅದು ಪರಿಶೀಲಿಸುತ್ತದೆ. ಈ ರೀತಿಯಾಗಿ ಅರ್ಥಶಾಸ್ತ್ರವು ಒಂದು ಕಡೆ ಸಂಪತ್ತನ್ನು ಅಭ್ಯಸಿಸುವ ಶಾಸ್ತ್ರವಾದರೆ ಇನ್ನೊಂದು ಕಡೆ ವ್ಯಕ್ತಿಯನ್ನು ಅಭ್ಯಸಿಸುವ ಶಾಸ್ತ್ರವಾಗಿದೆ."

ಮೇಲಿನ ಅರ್ಥಶಾಸ್ತ್ರದ ವ್ಯಾಖ್ಯೆಯಲ್ಲಿ ಮಾರ್ಶಲ್ಲರು ಸಂಪತ್ತಿಗಿಂತಲೂ ಸಂಪತ್ತನ್ನು ಉಪಯೋಗಿಸುವ ಮಾನವನಿಗೆ ಹೆಚ್ಚು ಮಹತ್ವವನ್ನು ಕೊಟ್ಟರು. ಸಂಪತ್ತು ಮಾನವನ ಕಲ್ಯಾಣಕ್ಕೆ ಅವಶ್ಯವಿರುವದರಿಂದ ಸಂಪತ್ತಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅರ್ಥಶಾಸ್ತ್ರವು ಅಭ್ಯಸಿಸುತ್ತದೆಯೆಂದು ಅವರು ಹೇಳಿದರು.

ಮುಂದೆ 1932ರಲ್ಲಿ ಪ್ರೊಫೆಸರ್ ರಾಬಿನ್ಸನು 'ಅರ್ಥಶಾಸ್ತ್ರದ ಸ್ವರೂಪ ಮತ್ತು ಮಹತ್ವ' ಎಂಬ ತಮ್ಮ ಗ್ರಂಥದಲ್ಲಿ ಅರ್ಥಶಾಸ್ತ್ರದ ಕೊರತೆಯ ವ್ಯಾಖ್ಯೆಯನ್ನು ಕೆಳಗಿನಂತೆ ಕೊಟ್ಟಿದ್ದಾನೆ.

"ಕೊರತೆಯಲ್ಲಿರುವ ಆದರೆ ವಿವಿಧ ಉಪಯೋಗಗಳನ್ನು ಹೊಂದಿರುವ ಸಾಧನ ಸಂಪನ್ಮೂಲಗಳಿಗೂ ಮತ್ತು ಮಾನವನ ಬಯಕೆಗಳಿಗೂ ಇರುವ ಸಂಬಂಧವನ್ನು ಅಧ್ಯಯನ ಮಾಡುವ ವಿಜ್ಞಾನವೇ ಅರ್ಥಶಾಸ್ತ್ರ."

ಈ ವ್ಯಾಖ್ಯೆಯ ಪ್ರಕಾರ ಮಾನವನ ಇಷ್ಟಗಳು ಅನೇಕ. ಆದರೆ ಅವನ ಆದಾಯ ಕಡಿಮೆ ಇರುವದರಿಂದ ಮಾನವನಿಗೆ ತನ್ನ ಎಲ್ಲ ಇಷ್ಟಗಳನ್ನು ತೃಪ್ತಿಪಡಿಸಲು ಸಾಧ್ಯವಾಗುವದಿಲ್ಲ. ಆದ್ದರಿಂದ ಅವನು ಕೊರತೆಯಲ್ಲಿರುವ ವಸ್ತುಗಳನ್ನು ಮಿತವ್ಯಯದಿಂದ ಉಪಯೋಗಿಸಬೇಕಾಗುತ್ತದೆ. ಮಿತವ್ಯಯವನ್ನು ಸಾಧಿಸಲು ಮಾನವನು ತನ್ನ ಹೆಚ್ಚು ಅಗತ್ಯದ ಬಯಕೆಗಳನ್ನು ಮಾತ್ರ ತೃಪ್ತಿಪಡಿಸಿ, ನಂತರ ಕಡಿಮೆ ಅಗತ್ಯದ ಬಯಕೆಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ಮಾನವನಿಗೆ ಆಹಾರ, ಬಟ್ಟೆ, ವಸತಿ ಮುಂತಾದವುಗಳು ಅಗತ್ಯದ ಬೇಡಿಕೆಗಳಾಗಿವೆ. ಈ ಅಗತ್ಯದ ಬೇಡಿಕೆಗಳನ್ನು ಪೂರೈಸಿದ ನಂತರ ಸುಖಕರ (ಐಷಾರಾಮಿ) ವಸ್ತುಗಳ ಕಡೆಗೆ ಅವನ ಗಮನ ಹೋಗುತ್ತದೆ. ಹೀಗೆ ನಿಸರ್ಗದಲ್ಲಿ ಮಿತ ಪ್ರಮಾಣದಲ್ಲಿ ಸಿಗುವ ಸಾಧನ ಸಾಮಗ್ರಿಗಳಿಂದ ಮಾನವನು ತನ್ನ ಅನಂತ ಬಯಕೆಗಳನ್ನು ಹೇಗೆ ತೃಪ್ತಿ ಪಡಿಸಿ ಕೊಳ್ಳಬೇಕೆಂಬುದನ್ನು ವಿವೇಚಿಸುವದೇ ಅರ್ಥಶಾಸ್ತ್ರದ ಅಭ್ಯಾಸ ವಸ್ತುವಾಗಿದೆಯೆಂದು ಪ್ರೊಫೆಸರ್ ರಾಬಿನ್ಸ್ ಹೇಳುತ್ತಾನೆ.

ಮಿತವಾಗಿ ದೊರೆಯುವ ವಸ್ತುಗಳನ್ನು ನಾವು ಬೆಲೆ ಕೊಟ್ಟು ಪಡೆಯಬೇಕಾಗುತ್ತದೆ. ನಮ್ಮ ಆದಾಯವೂ ಮಿತವಾಗಿರುವದರಿಂದ ನಾವು ಮಿತವ್ಯಯವನ್ನು ಸಾಧಿಸಬೇಕಾಗುತ್ತದೆ. ಸಾಧನ ಸಾಮಗ್ರಿಗಳು ವಿಪುಲವಾಗಿ ಸಿಗುತ್ತಿದ್ದರೆ ಮಿತಯ್ಯಯದ ಸಮಸ್ಯೆಯೇ ಇರುತ್ತಿರಲಿಲ್ಲ ಮತ್ತು ಅರ್ಥಶಾಸ್ತ್ರವೆಂಬ ಶಾಸ್ತ್ರವೇ ಇರುತ್ತಿರಲಿಲ್ಲ.

●

## ೨. ಬಯಕೆಗಳು ಹಾಗೂ ಅವುಗಳ ತೃಪ್ತಿ

ಅರ್ಥಶಾಸ್ತ್ರವು ಮಾನವನ ಬಯಕೆಗಳನ್ನು ಮತ್ತು ಅವುಗಳನ್ನು ತೃಪ್ತಿ ಪಡಿಸಲು ಅವನು ಮಾಡುವ ಪ್ರಯತ್ನವನ್ನು ಚರ್ಚಿಸುತ್ತದೆ. ಮಾನವನ ಬಯಕೆಗಳು ಅನೇಕ. ಅವನು ಒಂದು ಬಯಕೆಯನ್ನು ಪೂರೈಸುವಷ್ಟರಲ್ಲಿ ಮತ್ತೊಂದು ಬಯಕೆ ಹುಟ್ಟಿಕೊಳ್ಳುತ್ತದೆ. ಹಸಿದ ಒಬ್ಬ ಮನುಷ್ಯ ಮೊದಲು ಅನ್ನವನ್ನು ಬಯಸುತ್ತಾನೆ. ಅದೇ ಮನುಷ್ಯ ಶ್ರೀಮಂತನಾದಾಗ ತನಗೆ ಓಡಾಡಲು ಕಾರು ಬೇಕೆಂದು ಅಪೇಕ್ಷಿಸುತ್ತಾನೆ. ಆದ್ದರಿಂದ ಮಾನವನ ಬಯಕೆಗಳಿಗೆ ಕೊನೆಯೆಂಬುದಿಲ್ಲ.

ಮಾನವನ ಬಯಕೆಗಳು ಅನೇಕವಿದ್ದರೂ ಅವು ಅವನಿಗೆ ಕೊಡುವ ತೃಪ್ತಿ ಮಾತ್ರ ಸೀಮಿತವಾಗಿರತ್ತದೆ. ನಾವು ಒಂದು ಲೋಟ ಕಾಫಿ ಕುಡಿದಾಗ ಅದು ನಮಗೆ ತೃಪ್ತಿಕೊಡುತ್ತದೆ. ಆದರೆ ಅದೇ ಕಾಫಿಯನ್ನು ನಾವು ಎರಡನೆಯ ಲೋಟ ಕುಡಿದಾಗ ಅಷ್ಟೊಂದು ತೃಪ್ತಿ ಸಿಗಲಾರದು. ಮೂರನೆಯ ಕಪ್ ಬೇಡವೇ ಬೇಡವೆಂದೆನಿಸುತ್ತದೆ. ಇದನ್ನೇ ನಾವು ಇಳಿಯುವ ಅಂಚಿನ ತೃಪ್ತಿಗುಣವೆಂದು ಕರೆಯುತ್ತೇವೆ.

ಬಯಕೆಗಳು ಸ್ಪರ್ಧಾತ್ಮಕವಾಗಿರಬಹುದು ಅಥವಾ ಪೂರಕವಾಗಿರಬಹುದು. ನಾವು ನಮ್ಮ ಹಸಿವನ್ನು ಚಪಾತಿ, ಜೋಳದ ರೊಟ್ಟಿ ಅಥವಾ ರಾಗಿಯ ಮುದ್ದೆಯಿಂದ ನೀಗಿಸಬಹುದು. ಇವೆಲ್ಲವುಗಳು ಹಸಿವನ್ನು ನೀಗಿಸುವ ಬೇರೆ ಬೇರೆ ವಸ್ತುಗಳು. ಅದೇ ರೀತಿಯಾಗಿ ನಮಗೆ ಮನರಂಜನೆ ಬೇಕೆಂದಾಗ ನಾವು ಸಿನಿಮಾ ನೋಡಬಹುದು ಅಥವಾ ಒಳ್ಳೆಯ ಸಂಗೀತ ಕೇಳಬಹುದು. ಅಂದರೆ

ಸಿನಿಮಾ ಹಾಗೂ ಸಂಗೀತ ಸ್ಪರ್ಧಾತ್ಮಕ ವಸ್ತುಗಳಾಗಿರುತ್ತವೆ. ಆದರೆ ಒಂದು ವಸ್ತುವನ್ನು ನಾವು ಉಪಯೋಗಿಸುವಾಗ ನಮಗೆ ಮತ್ತೊಂದು ವಸ್ತುವಿನ ಅಗತ್ಯತೆ ಇದ್ದರೆ ಆ ವಸ್ತುಗಳು ಪೂರಕ ವಸ್ತುಗಳಾಗುತ್ತವೆ. ನಾವು ಮೋಟಾರ ಗಾಡಿಯನ್ನು ಉಪಯೋಗಿಸಬೇಕಾದರೆ ನಮಗೆ ಪೆಟ್ರೋಲಿನ ಅವಶ್ಯಕತೆ ಬೀಳುತ್ತದೆ. ಆದ್ದರಿಂದ ಮೋಟಾರಗಾಡಿ ಮತ್ತು ಪೆಟ್ರೋಲ ಪೂರಕ ವಸ್ತುಗಳಾಗುತ್ತವೆ.

## ತೃಪ್ತಿಗುಣ ಹಾಗೂ ಐಶ್ವರ್ಯ

ಇಷ್ಟವನ್ನು ನೀಗಿಸುವ ಶಕ್ತಿಯೇ ತೃಪ್ತಿಗುಣ. ಆದರೆ ತೃಪ್ತಿಗುಣ ಹೊಂದಿದ ವಸ್ತುವು ನಿಜವಾಗಿಯೂ ಉಪಯುಕ್ತ ವಸ್ತುವೆಂದು ತಿಳಿಯಲಾಗದು. ಸಿಗರೇಟು ಸೇದುವದರಿಂದ ಸೇದುವ ಮನುಷ್ಯನಿಗೆ ತೃಪ್ತಿಸಿಗುತ್ತದೆ. ಆದರೆ ಸಿಗರೇಟು ನಿಜವಾಗಿಯೂ ಉಪಯುಕ್ತವಾದ ವಸ್ತುವಲ್ಲ. ತಂಬಾಕು ಸೇದುವವನಿಗೆ ಅದು ತೃಪ್ತಿಕೊಡಬಹುದು. ಆದರೆ ಅವನ ಆರೋಗ್ಯಕ್ಕೆ ಅದು ಹಾನಿಯನ್ನು ತರುತ್ತದೆ.

ತೃಪ್ತಿಗುಣ ಹೊಂದಿದ ಎಲ್ಲ ವಸ್ತುಗಳೂ ಐಶ್ವರ್ಯವಲ್ಲ. ಸ್ವಚ್ಛ ಹವೆ ಮತ್ತು ಸೂರ್ಯನ ಬೆಳಕು ಜೀವನಕ್ಕೆ ಅವಶ್ಯ. ಆದರೆ ಅವುಗಳ ಪೂರೈಕೆಯಲ್ಲಿ ಯಾವ ಆರ್ಥಿಕ ಚಟುವಟಿಕೆ ಇಲ್ಲದ್ದರಿಂದ ಅವು ಪುಕ್ಕಟೆ ವಸ್ತುಗಳಾಗಿರುತ್ತವೆ. ಆದರೆ ಹವೆಯ ಕೊರತೆ ಇದ್ದಂತಹ ಜಾಗೆಯಲ್ಲಿ, ವಿಶೇಷ ವ್ಯವಸ್ಥೆಯ ಮುಖಾಂತರ ಹವೆಯನ್ನು ಪೂರೈಸುವ ಪ್ರಸಂಗದಲ್ಲಿ ಅದು ಪುಕ್ಕಟೆ ವಸ್ತು ಆಗಲಾರದು. ಆದದ್ದರಿಂದ ತೃಪ್ತಿಗುಣ ಮತ್ತು ಅಭಾವಗುಣ ಹೊಂದಿದ ಅಥವಾ ಬೆಲೆಯನ್ನು ಹೊಂದಿದ ಯಾವದೇ ವಸ್ತುವನ್ನು ಐಶ್ವರ್ಯವೆಂದು ನಾವು ಕರೆಯಬಹುದು.

## ಐಶ್ವರ್ಯದ ಉತ್ಪಾದನೆ

ಉತ್ಪಾದನೆಯೆಂದರೆ ತೃಪ್ತಿಗುಣವನ್ನು ನಿರ್ಮಿಸುವದು. ಗಿಡವನ್ನು ಬೆಳೆಯುವವನು ಕಟ್ಟಿಗೆಯ ನಿರ್ಮಾಣದಿಂದ ತೃಪ್ತಿಗುಣವನ್ನು ಉತ್ಪಾದಿಸುತ್ತಾನೆ. ಆ ಕಟ್ಟಿಗೆಯನ್ನು ಒಂದು ಜಾಗೆಯಿಂದ ಮತ್ತೊಂದು ಸ್ಥಳಕ್ಕೆ ಒಯ್ಯುವ ಸಾರಿಗೆಯ

ಗುತ್ತಿಗೆದಾರ, ಆ ಕಟ್ಟಿಗೆಗೆ ಸ್ಥಳದ ತೃಪ್ತಿಗುಣವನ್ನು ಕೂಡಿಸುತ್ತಾನೆ. ಆ ಕಟ್ಟಿಗೆಯನ್ನು ಉಪಯೋಗಿಸಿ ಮೇಜು ಅಥವಾ ಕುರ್ಚಿಯನ್ನು ತಯಾರಿಸುವ ಬಡಗಿ ಆ ಕಟ್ಟಿಗೆಗೆ ಆಕಾರ ತೃಪ್ತಿಗುಣ ಕೊಡುತ್ತಾನೆ.

ತೃಪ್ತಿಗುಣ ಕೇವಲ ವಸ್ತುಗಳಲ್ಲಿ ಇರುತ್ತದೆಯೆಂದು ಭಾವಿಸಲಾಗದು. ಆಟಗಾರ ಅಥವಾ ಸಂಗೀತಗಾರ ಅಥವಾ ನಟ ತನ್ನ ಸೇವೆಯಿಂದ ತೃಪ್ತಿಗುಣ ಕೊಡುತ್ತಾನೆ.

ಒಬ್ಬ ಉತ್ಪಾದಕನು ತಾನು ಉತ್ಪಾದಿಸಿದ ವಸ್ತು ತನ್ನ ಕೈಬಿಟ್ಟು ಉಪಭೋಗಿಯ ಕೈ ಸೇರಿದಾಗ ಮಾತ್ರ ಉತ್ಪಾದನೆ ಪೂರ್ತಿಯಾಗಿದೆಯೆಂದು ನಾವು ಭಾವಿಸಬಹುದು. ಲೂಧಿಯಾನಾದಲ್ಲಿ ಉತ್ಪಾದಿಸಿದ ಒಂದು ಸ್ವೆಟರ್ ಬೆಂಗಳೂರಿನಲ್ಲಿರುವ ಒಬ್ಬ ಉಪಭೋಗಿಯ ಕೈ ಸೇರಿದಾಗ ಮಾತ್ರ ಆ ವಸ್ತುವಿನ ಉತ್ಪಾಧನೆ ಪೂರ್ತಿಗೊಂಡಂತೆ. ಲೂಧಿಯಾನಾದಿಂದ ಬೆಂಗಳೂರಿಗೆ ಆ ವಸ್ತುವನ್ನು ಸಾಗಾಣಿಕೆ ಮಾಡುವದು ಮತ್ತು ಅದನ್ನು ಮಾರುವದು ಆ ವಸ್ತುವಿನ ಉತ್ಪಾದನೆಯ ಮುಖ್ಯ ಅಂಗಗಳಾಗಿವೆ.

### *೨.೧ ಪರಿಶ್ರಮದ ಉತ್ಪಾದಕತೆ*

ಪರಿಶ್ರಮವನ್ನು ಉತ್ಪಾದನಾ ಶ್ರಮ ಮತ್ತು ಅನುತ್ಪಾದನಾ ಪರಿಶ್ರಮವೆಂದು ಕೆಲವೊಂದು ಸಂದರ್ಭದಲ್ಲಿ ವಿಂಗಡಿಸಲಾಗುತ್ತದೆ. ೧೮ನೆಯ ಶತಮಾನದಲ್ಲಿಯ ಫ್ರಾನ್ಸ್ ದೇಶದ ನಿಸರ್ಗ ಪಂಥ ವಾದಿಗಳು ಬೇಸಾಯ ಮತ್ತು ಅದಕ್ಕೆ ಸಂಬಂಧ ಪಟ್ಟ ಉದ್ಯೋಗಗಳು ಮಾತ್ರ ಉತ್ಪಾದನೆಯನ್ನು ಮಾಡುತ್ತವೆ, ಮಿಕ್ಕುಳಿದ ಉದ್ದಿಮೆಗಳು ಉತ್ಪಾದನೆಯನ್ನು ಮಾಡುವದಿಲ್ಲವೆಂದು ಹೇಳುತ್ತಿದ್ದರು. ಅವರ ಪ್ರಕಾರ ಉದ್ದಿಮೆಗಳು ಸ್ವಂತವಾಗಿ ಏನನ್ನೂ ಹೊಸದಾಗಿ ತಯಾರಿಸುವದಿಲ್ಲ. ಅವು ಕಚ್ಚಾ ವಸ್ತುಗಳನ್ನು ತೆಗೆದುಕೊಂಡು ಅವುಗಳ ಆಕಾರವನ್ನು ಮಾತ್ರ ಬದಲಿಸುವದರಿಂದ ಉದ್ದಿಮೆಗಳು ಹೊಸದನ್ನು ಏನೂ ನಿರ್ಮಿಸುವದಿಲ್ಲವೆಂದು ಅವರು ಭಾವಿಸಿದ್ದರು. ಆದರೆ ಅದನ್ನು ಈಗ ಯಾರೂ ಒಪ್ಪುವದಿಲ್ಲ.

ಯಾಕೆಂದರೆ ಕಚ್ಚಾವಸ್ತುವಿನಿಂದ ಪೂರ್ಣವಸ್ತುಗಳನ್ನು ನಿರ್ಮಿಸುವದು ನಿಸರ್ಗದಿಂದ ವಸ್ತುಗಳನ್ನು ಬೆಳೆದಷ್ಟೇ ಉತ್ಪಾದನಾ ಕ್ರಮವಾಗಿದೆಯೆಂದು ಈಗ ಭಾವಿಸಲಾಗಿದೆ. ಆದ್ದರಿಂದ ಯಾವ ಶ್ರಮವು ತೃಪ್ತಿಗುಣವನ್ನು ನಿರ್ಮಿಸುತ್ತದೆಯೋ ಅದು ಉತ್ಪಾದನಾ ಶ್ರಮ ಮತ್ತು ಯಾವ ಶ್ರಮವು ತೃಪ್ತಿಗುಣವನ್ನು ನಿರ್ಮಿಸುವದಿಲ್ಲವೋ ಅದು ಅನುತ್ಪಾದನಾ ಶ್ರಮವೆಂದು ಹೇಳಬಹುದು. ನಿರುಪಯೋಗಿ ವಸ್ತುವನ್ನು ಉತ್ಪಾದಿಸುವ ಶ್ರಮ ಅನುತ್ಪಾದಕ ಶ್ರಮವಾಗುತ್ತದೆ.

**ಪರಿಶ್ರಮದ ಉತ್ಪಾದಕತೆಯನ್ನು ನಿರ್ಧರಿಸುವ ಅಂಶಗಳು**

ಪರಿಶ್ರಮದ ಉತ್ಪಾದಕತೆಯ ಮೇಲೆ ಪರಿಣಾಮ ಬೀರು ಅಂಶಗಳನ್ನು ನಾವಿಲ್ಲಿ ಗಮನಿಸಬಹುದು.

೧) ಒಬ್ಬ ಶ್ರಮಿಕನ ಉತ್ಪಾದಕತೆ ಅವನ ದೈಹಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ಆರೋಗ್ಯವಂತ ವ್ಯಕ್ತಿಯ ಉತ್ಪಾದಕತೆ ಹೆಚ್ಚಿಗೆ ಇರುತ್ತದೆ. ಶ್ರಮಿಕನ ದೈಹಿಕ ಪರಿಸ್ಥಿತಿ ಅವನ ಆನುವಂಶಿಕತೆಯನ್ನು ಅವಲಂಬಿಸಿದೆ. ಕೆಲವೊಂದು ವಂಶದ ಜನರು ಬಹಳ ಶಕ್ತಿಯುತರಾಗಿರುತ್ತಾರೆ. ಹೀಗಾಗಿ ಅವರು ಹೆಚ್ಚು ಗಟ್ಟಿಯಾಗಿರುತ್ತಾರೆ. ನಮ್ಮ ದೇಶದಲ್ಲಿ ಪಂಜಾಬಿಗಳು ಬಹಳ ಶಕ್ತಿಯುತರಾದ ಜನರೆಂದು ತಿಳಿಯಲಾಗುತ್ತದೆ. ಆದ್ದರಿಂದ ಅವರ ಕಾರ್ಯಕ್ಷಮತೆ ಹೆಚ್ಚಿಗಿರುತ್ತದೆ.

೨) ಶಿಕ್ಷಣದ ಮಟ್ಟವೂ ಔದ್ಯಮಿಕ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ನಾಗರಿಕ ಸಮಾಜ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತದೆ.

೩) ಕೆಲಸದ ಜಾಗೆಯ ಪರಿಸರವೂ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುತ್ತದೆ. ಕಾರ್ಖಾನೆ ಸ್ವಚ್ಛವಿದ್ದು ಗಾಳಿ ಬೆಳಕು ಸಾಕಷ್ಟಿದ್ದರೆ, ಮತ್ತು ಕೆಲಸದ ಮಧ್ಯದಲ್ಲಿ ಶ್ರಮಿಕರಿಗೆ ವಿಶ್ರಾಂತಿ ಸಿಕ್ಕರೆ ಅವು ಉತ್ಪಾದನೆಯ ಮೇಲೆ ಒಳ್ಳೆಯ ಪರಿಣಾಮ ಬೀರುತ್ತವೆ.

೪) ಕಾರ್ಯಕ್ಷಮತೆ ಕೆಲಸದ ಅವಧಿಯನ್ನೂ ಅವಲಂಬಿಸಿದೆ. ಶ್ರಮಿಕರ ಕೆಲಸದ ಅವಧಿ ಹೆಚ್ಚಿಗಿದ್ದಾಗ ಅವರ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ತೀರ ಹೆಚ್ಚಿನ ಕೆಲಸದ ಅವಧಿ ಶ್ರಮಿಕರ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುವದರಿಂದ ಈಗಿನ ಕಾಲದಲ್ಲಿ ಎಂಟು ತಾಸಿನಕ್ಕಿಂತ ಹೆಚ್ಚಿನ ಕೆಲಸದ ಅವಧಿಯನ್ನು ಕಾರ್ಖಾನೆಗಳಲ್ಲಿ ನಿಗದಿಪಡಿಸಲಾಗುವದಿಲ್ಲ.

೫) ಶ್ರಮಿಕರ ಕಾರ್ಯಕ್ಷಮತೆ ಅವರಿಗೆ ಕೊಡಲಾಗುವ ಕೂಲಿಯನ್ನೂ ಅವಲಂಬಿಸಿದೆ. ಹೆಚ್ಚಿನ ಕೂಲಿ ಸಿಗುವ ಕೆಲಸಗಾರರು ಹೆಚ್ಚು ಕಾರ್ಯಕ್ಷಮತೆಯುಳ್ಳವರಾಗಿರುತ್ತಾರೆ. ಕಡಿಮೆ ಕೂಲಿ ಸಿಗುವ ಶ್ರಮಿಕರು ಕಡಿಮೆ ಕಾರ್ಯಕ್ಷಮತೆಯನ್ನು ಹೊಂದಿದವರಾಗಿರುತ್ತಾರೆ.

೬) ಕಾರ್ಯಕ್ಷಮತೆ ಕೇವಲ ನೈಸರ್ಗಿಕ ಅಂಶಗಳಿಂದ ನಿರ್ಧರಿಸಲ್ಪಡದೆ ಮಾನವನಿಂದ ಸುಧಾರಿಸಲು ಸಾಧ್ಯವಾಗುವ ಅಂಶಗಳಿಂದಲೂ ನಿರ್ಧರಿಸಲ್ಪಡುತ್ತವೆ. ಆದ್ದರಿಂದ ಅದು ಕೇವಲ ಶ್ರಮಿಕನ ವೈಯಕ್ತಿಕ ವಿಷಯವಾಗಿರದೆ ಉದ್ದಿಮೆ ಯಾವ ರೀತಿಯಾಗಿ ವ್ಯವಸ್ಥಿತವಾಗಿದೆ ಮತ್ತು ಯಾವ ರೀತಿಯಾಗಿ ಪ್ರತಿಫಲ ಸಿಗುತ್ತದೆಯೆಂಬ ಅಂಶಗಳಿಂದಲೂ ನಿರ್ಧರಿಸಲ್ಪಡುತ್ತದೆ.

### *೨.೨ ಉತ್ಪಾದನಾ ಘಟಕಗಳು*

ನಾವಿಲ್ಲಿಯವರೆಗೆ ಮಾನವನ ಶ್ರಮವನ್ನು ಒಂದು ಉತ್ಪಾದನಾ ಘಟಕವೆಂದು ಚರ್ಚಿಸಿದ್ದಾಯಿತು. ಆದರೆ ನಿಸರ್ಗದ ಸಹಾಯವಿಲ್ಲದೆ ಮಾನವನ ಶ್ರಮವು ಅಷ್ಟು ಫಲಕಾರಿಯಾಗದು. ಮಾನವನ ಇಚ್ಛೆಗಳನ್ನು ಪೂರೈಸುವಲ್ಲಿ ಮೊದಲಿನಿಂದಲೂ ನಿಸರ್ಗ ಬಹು ಮುಖ್ಯ ಪಾತ್ರವನ್ನು ವಹಿಸಿದೆ. ಅದರ ಜೊತೆಗೆ ಮಾನವನು ಆತನು ನಿರ್ಮಿಸಿದ ಉತ್ಪಾದನಾ ಘಟಕಗಳನ್ನು ಬಳಸಿ ಉತ್ಪಾದನೆಯನ್ನು ಹೆಚ್ಚಿಸಬಹುದೆಂದು ತೀರ ಹಿಂದಿನ ಕಾಲದಲ್ಲಿಯೇ ಕಂಡುಕೊಂಡನು. ಆದ್ದರಿಂದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ ಇವು ನಾಲ್ಕು ವಿಧದ ಉತ್ಪಾದನಾ ಘಟಕಗಳು.

## ಭೂಮಿ

'ಭೂಮಿ' ಎಂಬ ಪದಕ್ಕೆ ಅರ್ಥಶಾಸ್ತ್ರದಲ್ಲಿ ಬಹು ವಿಶಾಲವಾದ ಅರ್ಥವಿದೆ. ನಿಸರ್ಗದ ಎಲ್ಲ ಕೊಡುಗೆಗಳನ್ನು ಭೂಮಿಯಲ್ಲಿ ಕೂಡಿಸಿಕೊಳ್ಳಲಾಗುತ್ತದೆ. ಆದ್ದರಿಂದ ಇದರಲ್ಲಿ ಆಡು ಭಾಷೆಯ ಭೂಮಿಯ ಹೊರತಾಗಿ ಅದರಲ್ಲಿಯ ಖನಿಜ ಸಂಪತ್ತು ಅದರ ಮೇಲಿನ ಸಸ್ಯ ಸಂಪತ್ತು, ಹವಾಮಾನ ಮತ್ತು ನೈಸರ್ಗಿಕ ಶಕ್ತಿಗಳಾದ ಬೆಳಕು ಮುಂತಾದವುಗಳನ್ನು ಕೂಡಿಸಿಕೊಳ್ಳಲಾಗುತ್ತದೆ. ಮಾನವನು ವೈಜ್ಞಾನಿಕವಾಗಿ ಮುಂದುವರಿದ ಈಗಿನ ಕಾಲದಲ್ಲಿಯೂ ಸಹಿತ ಉದ್ದಿಮೆ ರಂಗ ಮತ್ತು ಬೇಸಾಯ ರಂಗಗಳ ಉತ್ಪಾದನೆಯಲ್ಲಿ ನಿಸರ್ಗದ ಕೊಡುಗೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿವೆ.

ಶ್ರಮಿಕರ ಸಂಖ್ಯೆಯನ್ನು ನಾವು ಹೆಚ್ಚಿಸಬಹುದಾದರೂ ಸಾಮಾನ್ಯವಾಗಿ ಭೂಮಿಯ ಪೂರೈಕೆಯನ್ನು ಹೆಚ್ಚಿಸಲು ಸಾಧ್ಯವಾಗಲಾರದು. ಅದೂ ಅಲ್ಲದೆ ಒಂದು ಭೂಮಿಯ ಉತ್ಪನ್ನವನ್ನು ಅಳತೆ ಮೀರಿ ಹೆಚ್ಚಿಸಲೂ ಸಾಧ್ಯವಿಲ್ಲ. ಆದ್ದರಿಂದ ೧೮ನೆಯ ಶತಮಾನದ ಕೊನೆಯಲ್ಲಿ ದಿ. ಆರ್ ಮಾಲ್ಥಸ್‌ನೆಂಬ ಅರ್ಥಶಾಸ್ತ್ರಜ್ಞನು ಜನಸಂಖ್ಯೆ ಬೆಳೆಯುವ ಗತಿಯು, ಭೂಮಿಯ ಫಲವತ್ತತೆಯ ಬೆಳವಣಿಗೆಯ ಗತಿಗಿಂತ ಹೆಚ್ಚಾಗಿದ್ದು, ಜನರು ಆಹಾರದ ಕೊರತೆಯಿಂದ ನಿಸರ್ಗದ ವಿಕೋಪಕ್ಕೆ ಬಲಿಯಾಗುತ್ತಾರೆಂದು ನಿರಾಶಾದಾಯಕವಾದ ಒಂದು ಸಿದ್ಧಾಂತವನ್ನು ಪ್ರತಿಪಾದಿಸಿದ್ದನು. ಆದರೆ ವೈಜ್ಞಾನಿಕ ಪ್ರಗತಿಯಿಂದಾಗಿ ಮಾನವನು ಭೂಮಿಯ ಫಲವತ್ತತೆಯನ್ನು ಹೆಚ್ಚಿಸುತ್ತಾ ಹೋಗಿದ್ದು ಮಾಲ್ಥಸನು ಪ್ರತಿಪಾದಿಸಿದ ಸಿದ್ಧಾತ ನಿಜವಾಗಿಲ್ಲ.

## ಬಂಡವಾಳದ ಉತ್ಪತ್ತಿ

ಮಾನವ ನಿರ್ಮಿತ ಉತ್ಪಾದನಾ ಸಾಧನಗಳನ್ನು ಬಂಡವಾಳವೆಂದು ಕರೆಯಲಾಗುತ್ತದೆ. ಜನಸಾಮಾನ್ಯನು ಹಣವನ್ನು ಬಂಡವಾಳವೆಂದು ತಿಳಿಯುತ್ತಾನೆ. ಹಣವನ್ನು ಬಂಡವಾಳವೆಂದು ತಿಳಿದರೂ ಎಲ್ಲ ಬಂಡವಾಳ ಹಣದ ರೂಪವನ್ನು ತೆಗೆದುಕೊಳ್ಳುವದಿಲ್ಲ. ಒಬ್ಬ ಉದ್ದಿಮೆದಾರ, ತನ್ನಲ್ಲಿಯ

ಮತ್ತು ಬ್ಯಾಂಕಿನಲ್ಲಿಯ ತನ್ನ ಹಣವನ್ನಲ್ಲದೆ ತನ್ನಲ್ಲಿಯ ಸರಕುಗಳನ್ನು ಮತ್ತು ಯಂತ್ರೋಪಕರಣಗಳನ್ನು ಬಂಡವಾಳವೆಂದು ತಿಳಿಯುತ್ತಾನೆ.

ಬಂಡವಾಳವೆಂಬ ಪದವನ್ನು ನಾವಿಲ್ಲಿ ಸಾಮಾನ್ಯವಾಗಿ ಸಾಮಾಜಿಕ ದೃಷ್ಟಿಯಲ್ಲಿ ಉಪಯೋಗಿಸುತ್ತೇವೆ. ಬಂಡವಾಳವೆಂದರೆ ಐಶ್ವರ್ಯವನ್ನು ಉತ್ಪಾದಿಸಲು ತೆಗೆದಿಡಲಾದ ಐಶ್ವರ್ಯವೆಂದು ಹೇಳಬಹುದು. ಈ ಅರ್ಥದಲ್ಲಿ ಬಂಡವಾಳ ನಾನಾ ರೂಪವನ್ನೂ ತಾಳಬಹುದು. ರೈತನು ಮುಂದಿನ ವರುಷ ಬಿತ್ತಲು ಬೀಜಕ್ಕಾಗಿ ತೆಗೆದಿಟ್ಟ ಅವನ ಉತ್ಪನ್ನದ ಭಾಗ ಬಂಡವಾಳ ವಾಗುತ್ತದೆ. ಅದೆ ರೀತಿಯಾಗಿ ಒಬ್ಬ ಉದ್ದಿಮೆದಾರನ ಯಂತ್ರೋಪ ಕರಣಗಳು, ಕಾರ್ಖಾನೆಯ ಬಿಲ್ಡಿಂಗ್, ಕೂಲಿಕಾರನಿಗೆ ಅವನು ಕೊಡುವ ಕೂಲಿಯ ಹಣ ಮುಂತಾದವುಗಳು ಅವನ ಬಂಡವಾಳವಾಗುತ್ತವೆ.

**ಬಂಡವಾಳದ ಸ್ವರೂಪ**

ಬಂಡವಾಳ ಕೆಲವೊಂದು ವಿಷಯಗಳಲ್ಲಿ ಭೂಮಿಯನ್ನು ಹೋಲುತ್ತದೆ ಮತ್ತು ಕೆಲವೊಂದು ವಿಷಯಗಳಲ್ಲಿ ಅದರಿಂದ ಭಿನ್ನವಾಗಿರುತ್ತದೆ. ಶ್ರಮಕ್ಕೆ ಹೋಲಿಸಲಾಗಿ ಇವೆರಡೂ ನಿಷ್ಕ್ರಿಯ ಉತ್ಪಾದನಾ ಸಾಧನಗಳಾಗಿವೆ. ಅದೂ ಅಲ್ಲದೆ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಉಪಯೋಗಿಸಿದ ಬಂಡವಾಳ ಕೆಲವು ವರುಷಗಳ ನಂತರ ಭೂಮಿಯ ಅಂಗವಾಗಿ, ನಿಸರ್ಗದ ಕೊಡುಗೆ ಯಾವದು ಮತ್ತು ಮಾನವ ನಿರ್ಮಿತ ಸುಧಾರಣೆ ಯಾವದು ಎಂಬುದನ್ನು ವಿಂಗಡಿಸಲು ಸಾಧ್ಯವಾಗದೆ ಹೋಗಬಹುದು. ಆದರೆ ಭೂಮಿ ಮತ್ತು ಬಂಡವಾಳಗಳ ನಡುವಿನ ನಿಜವಾದ ಅಂತರವೆಂದರೆ ನಿಸರ್ಗದತ್ತವಾದದ್ದು ಭೂಮಿ, ಮಾನುವ ನಿರ್ಮಿತವಾದದ್ದು ಬಂಡವಾಳವೆಂದು ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಭೂಮಿಯ ಮೊತ್ತ ಇದ್ದಷ್ಟೇ ಇರುತ್ತದೆ. ಆದರೆ ಬಂಡವಾಳದ ಮೊತ್ತವನ್ನು ಹೆಚ್ಚಿಸಬಹುದು. ನಿಸರ್ಗದತ್ತವಾದ ಭೂಮಿಯ ಗುಣಗಳು ನಾಶವಾಗುವದಿಲ್ಲ. ಬದಲಾಗಿ ಸುಧಾರಣೆ ಹೊಂದಬಹುದು. ಆದರೆ ಬಂಡವಾಳ ಕ್ರಮೇಣ ನಾಶವಾಗುತ್ತದೆ.

### ೨.೩ ಬಂಡವಾಳ ಶೇಖರಣೆ

ನಾವು ನಮ್ಮ ಎಲ್ಲ ಆದಾಯವನ್ನು ಖರ್ಚು ಮಾಡಿದರೆ ಉಳಿತಾಯ ಶೂನ್ಯವಾಗಿರುತ್ತದೆ ಮತ್ತು ಬಂಡವಾಳ ಶೇಖರಣೆ ಆಗುವದಿಲ್ಲ. ಆದ್ದರಿಂದ ಬಂಡವಾಳ ಶೇಖರಣೆಯಾಗಬೇಕಾದರೆ ಒಂದು ಸಮಾಜ ತನ್ನ ಆದಾಯದ ಎಲ್ಲ ಭಾಗವನ್ನೂ ತನ್ನ ಸಾಮಾನ್ಯ ಅವಶ್ಯಕತೆಗಳಿಗಾಗಿ ವೆಚ್ಚ ಮಾಡದೆ ಕೆಲವೊಂದು ಭಾಗವನ್ನು ಉಳಿತಾಯ ಮಾಡಿದರೆ ಅದನ್ನು ಬಂಡವಾಳ ಜೋಡಣೆಗೆ ಉಪಯೋಗಿಸಬಹುದು. ಸಮಾಜದಲ್ಲಿ ಉಳಿತಾಯ ಮಾಡುವ ವ್ಯಕ್ತಿಯೇ ಬೇರೆಯಾಗಿರಬಹುದು ಮತ್ತು ಅದನ್ನು ಬಂಡವಾಳವಾಗಿ ಉಪಯೋಗಿಸುವ ವ್ಯಕ್ತಿಯೇ ಬೇರೆಯಾಗಿರಬಹುದು. ನಮ್ಮ ಉಳಿತಾಯವನ್ನು ನಾವು ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟರೆ ಒಬ್ಬ ಉದ್ದಿಮೆದಾರ ಬ್ಯಾಂಕಿನಿಂದ ಸಾಲ ಪಡೆದು ಅದನ್ನು ಬಂಡವಾಳವಾಗಿ ಉಪಯೋಗಿಸಬಹುದು.

ಒಂದು ಸಮಾಜದ ಉಳಿತಾಯ ಮಾಡುವ ಶಕ್ತಿ ಅದರ ಉತ್ಪಾದನೆಯ ಶಕ್ತಿಯನ್ನು ಅವಲಂಬಿಸಿದೆ. ಸಮಾಜದ ಉತ್ಪಾದನಾ ಶಕ್ತಿ ಕಡಿಮೆಯಿದ್ದಾಗ ಎಲ್ಲ ಉತ್ಪಾದನೆಯು ಸಮಾಜದ ಅವಶ್ಯಕತೆಗಳನ್ನು ಪೂರೈಸುವಲ್ಲಿ ವ್ಯಯವಾಗುವದರಿಂದ ಆ ಸಮಾಜಕ್ಕೆ ಉಳಿತಾಯ ಮಾಡಲು ಸಾಧ್ಯ ವಾಗುವದಿಲ್ಲ. ಆದರೆ ವ್ಯವಸ್ಥಿತವಾದ ಒಂದು ಸಮಾಜ ತನ್ನ ಉತ್ಪಾದನೆಯನ್ನು ಹೆಚ್ಚಿಸಿ ತನ್ನ ಜನರಿಗೆ ಒಳ್ಳೆಯ ಗುಣಮಟ್ಟದ ಜೀವನವನ್ನು ಒದಗಿಸುವದರ ಜೊತೆಗೆ ಉಳಿತಾಯವನ್ನು ಮಾಡಲೂ ಸಾಧ್ಯವಾಗುತ್ತದೆ.

ಬಂಡವಾಳ ಶೇಖರಣೆಯು ಶೇಖರಣಾ ಶಕ್ತಿಯನ್ನಷ್ಟೇ ಅವಲಂಬಿಸದೆ ಉಳಿತಾಯ ಮಾಡುವ ಮನೋಭಾವದ ಮೇಲೆಯೂ ಅವಲಂಬಿತವಾಗಿದೆ. ಒಂದೇ ಮಟ್ಟದ ಆದಾಯವಿದ್ದ ಎರಡು ವ್ಯಕ್ತಿಗಳಲ್ಲಿ ಒಬ್ಬನು ಉಳಿತಾಯ ಮಾಡಬಹುದು, ಮತ್ತೊಬ್ಬನು ಉಳಿತಾಯ ಮಾಡದೇ ಎಲ್ಲ ಆದಾಯವನ್ನೂ ಖರ್ಚುಮಾಡಬಹುದು. ಕೆಲವು ಜನರಿಗೆ ಉಳಿತಾಯ ಮಾಡುವುದು ಸಹಜ

ಪ್ರವೃತ್ತಿಯಾದರೆ ಮತ್ತೆ ಕೆಲವರಿಗೆ ಅದು ಕಷ್ಟಕರವಾಗಬಹುದು. ಹೆಚ್ಚಿಗೆ ಆದಾಯವಿದ್ದ ಜನರಿಗೆ ತಮ್ಮ ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಂಡ ನಂತರವೂ ಕೆಲವೊಂದು ಆದಾಯದ ಭಾಗವನ್ನು ಉಳಿತಾಯ ಮಾಡಲು ಸಾಧ್ಯವಾಗುತ್ತದೆ. ಕಡಿಮೆ ಆದಾಯವಿದ್ದ ಜನರು ಉಳಿತಾಯವನ್ನು ಒಂದು ಯೋಜನೆಯ ಪ್ರಕಾರ ಮಾಡಬೇಕಾಗುತ್ತದೆ. ಹೆಚ್ಚಿಗೆ ಆದಾಯವಿದ್ದ ಜನರು ಬಡ್ಡಿಯ ದರ ಕಡಿಮೆ ಇದ್ದರೂ ಉಳಿತಾಯ ಮಾಡಬಹುದು. ಆದರೆ ಕಡಿಮೆ ಆದಾಯವಿದ್ದ ಮನುಷ್ಯ ಬಹಳ ಕಷ್ಟದಿಂದ ಉಳಿತಾಯ ಮಾಡುತ್ತಾನೆ. ಅಂತಹ ಸಂದರ್ಭದಲ್ಲಿ ಬಡ್ಡಿಯ ದರ ಹೆಚ್ಚಿಗಿದ್ದರೆ ಅವನು ಹೆಚ್ಚಿನ ಮೊತ್ತವನ್ನು ಉಳಿತಾಯ ಮಾಡಬಹುದು.

ಬಂಡವಾಳ ಶೇಖರಣೆಗೆ ಸಂಬಂಧಿಸಿದ ಇನ್ನೆರಡು ಸಂಗತಿಗಳನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಅವು ಯಾವವೆಂದರೆ, ಮೊದಲನೆಯದಾಗಿ ಸರಕಾರ ಅಸಹಾಯಕವಾಗಿದ್ದು ಕಾಯ್ದೆ ಸುವ್ಯವಸ್ಥೆಯನ್ನು ದೇಶದಲ್ಲಿ ತರಲು ಅಸಮರ್ಥವಾದಾಗ ಉಳಿತಾಯಕ್ಕೆ ಉತ್ತೇಜನ ಸಿಗಲಾರದು. ಯಾಕೆಂದರೆ ಮನುಷ್ಯನಿಗೆ ತನ್ನ ಪ್ರಯತ್ನದ ಪ್ರತಿಫಲ ಸಿಗದೆ ಹೋದರೆ ಆ ಪ್ರಯತ್ನವನ್ನು ಅವನು ಮಾಡಲಾರ. ಎರಡನೆಯ ಸಂಗತಿಯೆಂದರೆ ಬಂಡವಾಳ ಜೋಡಣೆಯ ಅವಕಾಶಗಳು. ಹಿಂದುಳಿದ ದೇಶಗಳಲ್ಲಿ ಹಣಕಾಸಿನ ಸಂಸ್ಥೆಗಳಾದ ಬ್ಯಾಂಕು ಮುಂತಾದವುಗಳು ಇಲ್ಲದಿದ್ದಾಗ ಉಳಿತಾಯ ಪ್ರವೃತ್ತಿ ಕಡಿಮೆಯಾಗಿರುತ್ತದೆ. ಆದರೆ ಉದ್ದಿಮೆಗಳು ಬೆಳೆಯುತ್ತಾ ಹೋದಂತೆ, ಬಂಡವಾಳ ಜೋಡಣೆಯ ಅವಕಾಶಗಳು ಹೆಚ್ಚಿ ಜನರು ಉಳಿತಾಯ ಮಾಡುವ ಪ್ರವೃತ್ತಿ ಹೆಚ್ಚುತ್ತಾ ಹೋಗುತ್ತದೆ.

### *೨.೪ ವಿಶಿಷ್ಟತೆಯ ಲಾಭಗಳು*

**ಶ್ರಮವಿಭಜನೆ :** ಆರ್ಥಿಕ ಅಭಿವೃದ್ಧಿಯ ಮೊದಲ ಹಂತಗಳಲ್ಲಿ ಮಾನವನು ಅನೇಕ ಕೆಲಸಗಳನ್ನು ತಾನೇ ಮಾಡಿಕೊಳ್ಳುತ್ತಿದ್ದನು. ಹಿಂದಿನ ಕಾಲದ ಒಂದು ಕುಟುಂಬ ತನಗೆ ಬೇಕಾದ ಮನೆಯನ್ನು ತಾನೇ ಕಟ್ಟಿಕೊಳ್ಳುತ್ತಿತ್ತು. ತನಗೆ ಬೇಕಾದ

ಆಹಾರವನ್ನು ತಾನೇ ಬೆಳೆಯುತ್ತಿತ್ತು. ಮತ್ತು ತನಗೆ ಬೇಕಾದ ಬಟ್ಟೆಯನ್ನು ತಾನೇ ತಯಾರು ಮಾಡಿಕೊಳ್ಳುತ್ತಿತ್ತು. ಆದರೆ ಈಗಿನ ಕಾಲದ ಜನರು ತಮಗೆ ಬೇಕಾದ ಎಲ್ಲ ವಸ್ತುಗಳನ್ನು ಹಾಗೂ ಸೇವೆಗಳನ್ನು ತಾವೇ ಉತ್ಪಾದಿಸಿ ಕೊಳ್ಳುವದಿಲ್ಲ. ನಮ್ಮ ಬೇಡಿಕೆಗಳು ಅನೇಕವಿದ್ದು ಅವುಗಳನ್ನು ತೃಪ್ತಿಗೊಳಿಸಲು ನಾವು ಬೇರೆ ಜನರ ಸೇವೆಯನ್ನು ಪಡೆಯಬೇಕಾಗುತ್ತದೆ. ಮೇಲಾಗಿ ಒಂದು ವಸ್ತುವಿನ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಶ್ರಮಿಕ ಭಾಗವಹಿಸುವದಿಲ್ಲ. ವಸ್ತುವಿನ ಉತ್ಪಾದನೆಯ ವಿವಿಧ ಹಂತಗಳಲ್ಲಿ ಬೇರೆ ಬೇರೆ ಜನರು ಕೆಲಸ ಮಾಡುತ್ತಿರುತ್ತಾರೆ. ಹೀಗಾಗಿ ಈಗಿನ ಜನರು ಒಂದು ವಸ್ತುವಿನ ಉತ್ಪಾದನೆಯ ಒಂದು ಹಂತದಲ್ಲಿ ಮಾತ್ರ ಪಾಲ್ಗೊಂಡು ಅದರಲ್ಲಿ ಪ್ರಾವೀಣ್ಯ ಪಡೆಯುತ್ತಾರೆ. ಇದನ್ನೇ ಅರ್ಥಶಾಸ್ತ್ರದಲ್ಲಿ ಶ್ರಮ ವಿಭಜನೆಯೆಂದು ಕರೆಯಲಾಗುತ್ತದೆ. ಆದರೆ ಈ ಶ್ರಮ ವಿಭಜನೆಯ ಲಾಭ ಪಡೆಯಬೇಕಾದರೆ ಮಾರುಕಟ್ಟೆ ದೊಡ್ಡದಿರ ಬೇಕಾಗುತ್ತದೆ. ಉದಾ. ಕುರ್ಚಿಯನ್ನು ತಯಾರ ಮಾಡುವ ಒಬ್ಬ ಬಡಗಿ ಆ ಕುರ್ಚಿಯ ಎಲ್ಲ ಅಂಗಗಳನ್ನು ತಾನೇ ತಯಾರ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಕುರ್ಚಿಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ ಒಂದು ಕಾರ್ಖಾನೆ ಕೆಲ ಬಡಗಿಗಳನ್ನು ಕುರ್ಚಿಯ ಕಾಲುಗಳನ್ನು ತಯಾರಿಸಲು, ಮತ್ತೆ ಕೆಲವರನ್ನು ಕೈಗಳನ್ನು ತಯಾರಿಸಲು ಮತ್ತೆ ಕೆಲವರನ್ನು ಅವುಗಳ ಜೋಡಣೆ ಮಾಡಲು, ಹೊಳಪು ತರಿಸಲು ಹಚ್ಚಬಹುದು. ಇದರಿಂದಾಗಿ ಉತ್ಪಾದನೆಯಲ್ಲಿ ಹೆಚ್ಚಳವಾಗುವದಲ್ಲದೆ ಬಡಿಗರು ಕುರ್ಚಿಯ ಒಂದು ಅಂಗವನ್ನು ಉತ್ಪಾದಿಸುವಲ್ಲಿ ಪ್ರಾವೀಣ್ಯ ಪಡೆಯುತ್ತಾರೆ.

ಇನ್ನೊಂದು ರೀತಿಯ ಶ್ರಮವಿಭಜನೆಯನ್ನು ನಾವು ನೋಡಬಹುದು. ದೇಶದ ಒಂದು ಭಾಗದಲ್ಲಿ ಒಂದು ಉದ್ದಿಮೆ ತಳ ಊರಿರುತ್ತದೆ. ಕಾಶ್ಮೀರದಲ್ಲಿ ಉಣ್ಣೆಯ ಶಾಲುಗಳ ಉದ್ದಿಮೆ, ಪಂಜಾಬದಲ್ಲಿ ಆಟದ ಸಾಮಾನುಗಳನ್ನು ತಯಾರಿಸುವ ಉದ್ದಿಮೆ ಇದಕ್ಕೆ ಉದಾಹರಣೆಗಳು. ಉದ್ದಿಮೆಗಳ ಈ ರೀತಿಯ ಸ್ಥಳೀಕರಣದಿಂದ ಕೆಲವೊಂದು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ.

## ೨.೫ ಪ್ರಾವೀಣ್ಯದ ಲಾಭಗಳು

ಪ್ರಾವೀಣ್ಯದ ಲಾಭಗಳನ್ನು ನಾವು ಒಂದು ಉದ್ದಿಮೆಯ ದೃಷ್ಟಿಯಿಂದ ಮತ್ತು ಒಬ್ಬ ಶ್ರಮಿಕನ ದೃಷ್ಟಿಯಿಂದ ನೋಡಬಹುದು. ಉದ್ದಿಮೆಯ ಲಾಭಗಳನ್ನು ನಾವು ಮೊದಲು ನೋಡೋಣ.

೧) ಶ್ರಮ ವಿಭಜನೆಯಿಂದಾಗುವ ಮೊದಲ ಲಾಭವೆಂದರೆ ಉತ್ಪಾದನೆಯ ಹೆಚ್ಚಳ, ಮತ್ತು ಉತ್ಪಾದನಾ ವೆಚ್ಚದಲ್ಲಿ ಕಡಿತ. ಬಟ್ಟೆ ತಯಾರಿಸುವ ಕಾರ್ಖಾನೆಯಲ್ಲಿ ಶ್ರಮ ವಿಭಜನೆಯ ಪೂರ್ವದಲ್ಲಿ 10 ಜನ ಕೂಲಿಕಾರರು ಒಂದು ವಾರಕ್ಕೆ 10 ಕೋಟು ಹೊಲಿಯುತ್ತಿದ್ದರೆಂದು ನಾವು ಭಾವಿಸೋಣ. ಅದೇ ಕಾರ್ಖಾನೆಯಲ್ಲಿ ಶ್ರಮ ವಿಭಜನೆಯ ನಂತರ ಕೆಲವರು ಕೇವಲ ಬಟ್ಟೆಯನ್ನು ಕತ್ತರಿಸುವದು ಮತ್ತೆ ಕೆಲವರು ಹೊಲಿಯುವದು ಮತ್ತೊಬ್ಬ ಗುಂಡಿ ಹಚ್ಚುವದು ಹೀಗೆ ಕೋಟು ಹೊಲಿಯುವ ವಿವಿಧ ಹಂತಗಳನ್ನು ತಮ್ಮಲ್ಲಿ ಹಂಚಿಕೊಳ್ಳುವದರಿಂದ ಒಂದು ವಾರಕ್ಕೆ 10ಜನ ಕೂಲಿಕಾರರು 15 ಕೋಟುಗಳನ್ನು ಹೊಲಿಯುತ್ತಾರೆ.

೨) ಶ್ರಮ ವಿಭಜನೆಯಿಂದ ಒಬ್ಬ ಶ್ರಮಿಕನು ತಾನು ಒಂದು ಕೆಲಸ ಮುಗಿಸಿ ಮತ್ತೊಂದು ಕೆಲಸ ಕೈಕೊಳ್ಳುವಲ್ಲಿ ವೇಳೆಯ ವ್ಯಯವಾಗುವದನ್ನು ಉಳಿಸ ಬಹುದು. ಆ ಶ್ರಮಿಕನು ಈಗ ಒಂದೇ ಕೆಲಸವನ್ನು ಮಾಡುವದರಿಂದ ಅದರಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆಯುತ್ತಾನೆ.

೩) ಶ್ರಮ ವಿಭಜನೆಯಿಂದ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಅನುಕೂಲವಾಗುತ್ತದೆ. ವಸ್ತುವಿನ ಉತ್ಪಾದನೆಯ ಕೆಲವೊಂದು ಹಂತಗಳನ್ನು ಯಂತ್ರಕ್ಕೆ ಬಿಟ್ಟುಕೊಟ್ಟರೆ ಉತ್ಪಾದನೆ ಹೆಚ್ಚಾಗುತ್ತದೆ ಮತ್ತು ಉತ್ಪಾದನೆಯ ವೆಚ್ಚ ಕಡಿಮೆಯಾಗುತ್ತದೆ.

೪) ಉತ್ಪಾದನಾ ಸಾಧನಗಳ ಹಾಗೂ ಉಪಕರಣಗಳ ಬಳಕೆಯಲ್ಲಿ ಮಿತವ್ಯಯವಾಗುತ್ತದೆ. ಎಲ್ಲ ಕೆಲಸಗಾರರೂ ವಸ್ತುವಿನ ಉತ್ಪಾದನೆಯ ಎಲ್ಲ

ಹಂತಗಳಲ್ಲಿ ಭಾಗವಹಿಸಿದರೆ ಅವರೆಲ್ಲರಿಗೂ ಒಂದು ಸೆಟ್ ಉಪಕರಣಗಳನ್ನು ಕೊಡಬೇಕಾಗುತ್ತದೆ. ಆದರೆ ಅವರೆಲ್ಲ ಬೇರೆ ಬೇರೆ ಹಂತಗಳಲ್ಲಿ ಭಾಗವಹಿಸಿದರೆ ಆ ಹಂತಕ್ಕೆ ಬೇಕಾಗುವ ಉಪಕರಣಗಳನ್ನು ಮಾತ್ರ ಅವರಿಗೆ ಕೊಡಬೇಕಾಗುತ್ತದೆ. ಹೀಗಾಗಿ ಉಪಕರಣಗಳ ಉಪಯೋಗದಲ್ಲಿಯೂ ಮಿತವ್ಯಯವನ್ನು ನಾವು ಶ್ರಮ ವಿಭಜನೆಯಿಂದ ಕಂಡುಕೊಳ್ಳಬಹುದು.

ಶ್ರಮ ವಿಭಜನೆಯಿಂದ ಶ್ರಮಿಕನಿಗೂ ಕೆಲವೊಂದು ಲಾಭಗಳು ದೊರಕುತ್ತವೆ. ಅವು ಯಾವುವೆಂದರೆ:

೧) ಒಬ್ಬ ಶ್ರಮಿಕ ಒಂದು ವಸ್ತುವಿನ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಭಾಗವಹಿಸಬೇಕಾದರೆ, ಬಹಳ ದಿವಸಗಳವರೆಗೆ ಆ ಶ್ರಮಿಕನು ಉತ್ಪಾದನೆಯ ತರಬೇತಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಅವನು ಆ ವಸ್ತುವಿನ ಉತ್ಪಾದನೆಯ ಒಂದು ಹಂತದಲ್ಲಿ ಮಾತ್ರ ಭಾಗವಹಿಸುವಾಗ ಅವನ ತರಬೇತಿಯ ಅವಧಿ ಕಡಿಮೆಯಾಗುತ್ತದೆ.

೨) ಶ್ರಮ ವಿಭಜನೆಯಿಂದಾಗಿ ಯಂತ್ರೋಪಕರಣಗಳನ್ನು ಬಳಸಲು ಸಾಧ್ಯವಾಗುವದರಿಂದ ಕಠಿಣ ಪರಿಶ್ರಮದ ಕೆಲಸಗಳನ್ನು ಯಂತ್ರಗಳಿಗೆ ವಹಿಸಿಕೊಡಲು ಸಾಧ್ಯವಾಗುತ್ತದೆ. ಇದರಿಂದಾಗಿ ಕಠಿಣ ಪರಿಶ್ರಮದ ಕೆಲಸಗಳನ್ನು ಶ್ರಮಿಕನು ಮಾಡುವದು ಅವಶ್ಯವಿರುವದಿಲ್ಲ.

### ೨.೬ *ಪ್ರಾವೀಣ್ಯದ ಮಿತಿಗಳು*

ಶ್ರಮ ವಿಭಜನೆಯ ಲಾಭ ಪಡೆಯಬೇಕಾದರೆ ಬೇಡಿಕೆಯು ಹೆಚ್ಚಿಗಿರಬೇಕು. ಮಾರುಕಟ್ಟೆ ದೊಡ್ಡದಿದ್ದಷ್ಟೂ ಶ್ರಮ ವಿಭಜನೆಯ ಲಾಭ ಪಡೆಯಬಹುದು. ಒಬ್ಬ ಸಿಂಪಿಗ (ದರ್ಜಿ) ಕೋಟು ಹೊಲಿಯುವಲ್ಲಿ ಪ್ರಾವೀಣ್ಯ ಪಡೆದನೆಂದರೆ ಅವನಿಗೆ ಸಾಕಷ್ಟು ಗಿರಾಕಿಗಳು ಸಿಗಬೇಕು. ಇಲ್ಲದೆ ಹೋದರೆ ಅವನ ತಜ್ಞತೆಯ ಉಪಯೋಗವಾಗುವದಿಲ್ಲ.

ಬೇಡಿಕೆ ಹೆಚ್ಚಗಿರಬೇಕಲ್ಲದೆ ವರುಷವಿಡೀ ಆ ಬೇಡಿಕೆ ಮುಂದುವರಿಯಬೇಕು. ಬೇಡಿಕೆಯಲ್ಲಿ ಪರಿಳಿತವಾದಾಗ ತಜ್ಞತೆಯ ಉಪಯೋಗ ಪೂರ್ಣವಾಗಿ ಆಗುವದಿಲ್ಲ.

## ೨.೭ ಉದ್ದಿಮೆಯ ಕೇಂದ್ರೀಕರಣ

ಶ್ರಮ ವಿಭಜನೆಯು ಕೇವಲ ವ್ಯಕ್ತಿಗಳಿಗೆ ಸೀಮಿತವಾಗಿರದೆ, ಜಿಲ್ಲೆಗಳಿಗೆ ಹಾಗೂ ರಾಜ್ಯಗಳಿಗೂ ಅನ್ವಯವಾಗಬಹುದು. ನಮ್ಮ ದೇಶದ ಕೆಲವೊಂದು ಭಾಗಗಳಲ್ಲಿ ಕೆಲವೊಂದು ಉದ್ದಿಮೆಗಳು ಕೇಂದ್ರೀಕೃತವಾಗಿರುವದನ್ನು ನಾವು ಕಾಣಬಹುದು. ಕರ್ನಾಟಕದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ರೇಷ್ಮೆ ಉದ್ದಿಮೆ, ಕಾಶ್ಮೀರದಲ್ಲಿ ಶಾಲುಗಳ ಉದ್ದಿಮೆ ಕೇಂದ್ರಿಕೃತವಾಗಿರುವದನ್ನು ನಾವು ಕಾಣಬಹುದು.

ಈ ರೀತಿಯ ಭೌಗೋಲಿಕ ಶ್ರಮ ವಿಭಜನೆಯು ಆ ಪ್ರದೇಶದ ಪ್ರಾಕೃತಿಕ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಆರ್ಥಿಕ ಅಭಿವೃದ್ಧಿಯಾದಂತೆ ಆ ಭಾಗದಲ್ಲಿ ಸಾರಿಗೆ ಮತ್ತು ಸಂಪರ್ಕ ಸಾಧನಗಳ ಬೆಳವಣಿಗೆಯೂ ಸಹ ಈ ಶ್ರಮ ವಿಭಜನೆಗೆ ಕಾರಣವಾಗಬಹುದು. ನೈಸರ್ಗಿಕ ಸಂಪತ್ತುಗಳಾದ ಖನಿಜ, ಶಕ್ತಿ ಮತ್ತು ನೀರು ಮುಂತಾದವುಗಳು ಉದ್ದಿಮೆಯ ಕೇಂದ್ರೀಕರಣದ ಮೇಲೆ ಪ್ರಭಾವ ಬೀರುತ್ತವೆ. ಕೆಲವೊಂದು ಉದ್ದಿಮೆಗಳಿಗೆ ವಿಶೇಷವಾದ ಹವಾಮಾನ ಬೇಕಾಗುತ್ತದೆ. ಇಂತಹ ಉದ್ದಿಮೆಗಳು ಹವಾಮಾನ ಅನುಕೂಲವಿದ್ದ ಪ್ರದೇಶಗಳಲ್ಲಿ ಕೇಂದ್ರೀಕೃತ ವಾಗುತ್ತವೆ.

ಒಂದು ಪ್ರದೇಶದಲ್ಲಿ ಒಂದು ಉದ್ದಿಮೆ ಕೇಂದ್ರೀಕೃತವಾದಾಗ ಅದು ಹೊಸ, ಹೊಸ ಘಟಕಗಳನ್ನು ಆಕರ್ಷಿಸುತ್ತದೆ. ಯಾಕೆಂದರೆ ಆ ಉದ್ದಿಮೆಗೆ ಬೇಕಾದ ಸೌಕರ್ಯಗಳು ಆ ಪ್ರದೇಶದಲ್ಲಿ ಈಗಾಗಲೆ ನಿರ್ಮಾಣವಾಗಿರುವದರಿಂದ, ಹೊಸದಾಗಿ ಉದ್ದಿಮೆ ಪ್ರಾರಂಭಿಸುವವನು ಆ ಪ್ರದೇಶಕ್ಕೆ ಆಕರ್ಷಿಸಲ್ಪಡುತ್ತಾನೆ. ಹೀಗಾಗಿ ಆ ಪ್ರದೇಶದಲ್ಲಿ ಆ ಉದ್ದಿಮೆ ಬೆಳೆಯುತ್ತಾ ಹೋಗುತ್ತದೆ. ಅದೇ

ರೀತಿಯಾಗಿ ಆ ಉದ್ದಿಮೆಗೆ ಬೇಕಾದ ತಂತ್ರಜ್ಞಾನ ಹೊಂದಿದ ಶ್ರಮಿಕರೂ ಆ ಭಾಗದಲ್ಲಿ ಬಂದು ನೆಲೆಸುವದರಿಂದ ಹೊಸದಾಗಿ ಉದ್ದಿಮೆ ಪ್ರಾರಂಭಿಸುವವನಿಗೆ ಶ್ರಮಿಕರ ಕೊರತೆಯಾಗಲಾರದು.

ಆದರೆ ಒಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡ ಒಂದು ಉದ್ದಿಮೆ, ಮುಂದೆ ಆ ಉದ್ದಿಮೆ ಕೇಂದ್ರೀಕೃತಗೊಳ್ಳಲು ಕಾರಣವಾದ ವಿಶೇಷ ಸೌಲಭ್ಯಗಳಿಗೆ ಅಲ್ಲಿ ಕೊರತೆಯಾದಾಗಲೂ ಅಲ್ಲಿಯೇ ಮುಂದುವರಿಯುತ್ತದೆ. ಉದಾ : ಒಂದು ಪ್ರದೇಶದಲ್ಲಿ ಸಿಗುವ ಮಣ್ಣಿನ ವಿಶೇಷ ಗುಣದಿಂದಾಗಿ ಆ ಪ್ರದೇಶದಲ್ಲಿ ಕುಂಬಾರಿಕೆ ಉದ್ದಿಮೆ ಕೇಂದ್ರೀಕೃತಗೊಂಡಿದೆಯೆಂದು ತಿಳಿಯೋಣ. ಮುಂದೆ ಆ ಮಣ್ಣಿನ ಅಭಾವ ಅಲ್ಲಿ ಆದಾಗಲೂ ಸಹಿತ ಆ ಉದ್ದಿಮೆ ಬೇರೆ ಪ್ರದೇಶದಿಂದ ಮಣ್ಣು ತರಿಸಿ ಕುಂಬಾರಿಕೆಯನ್ನು ಇದ್ದ ಸ್ಥಳದಲ್ಲಿಯೇ ಮುಂದುವರಿಸ ಬಹುದು.

### *೨.೮ ಏರಿಕೆ ಪ್ರತಿಫಲ*

ನಾವೀಗ ಅರ್ಥಶಾಸ್ತ್ರದ ಒಂದು ನಿಯಮವಾದ ಏರಿಕೆ ಪ್ರತಿಫಲ, ಅಥವಾ ಇಳಿಕೆ ವೆಚ್ಚದ ನಿಯಮವನ್ನು ತಿಳಿದುಕೊಳ್ಳುವ ಹಂತವನ್ನು ಮುಟ್ಟಿದ್ದೇವೆ. ಈ ನಿಯಮದ ಪ್ರಕಾರ ಒಂದು ವಸ್ತುವಿನ ಉತ್ಪಾದನೆಯ ಮಟ್ಟ ಹೆಚ್ಚಿದಾಗ ಆ ವಸ್ತುವಿನ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಒಂದು ಉದ್ದಿಮೆ ತನ್ನ ಉತ್ಪಾದನೆಯ ಗರಿಷ್ಠ ಮಟ್ಟವನ್ನು ಮುಟ್ಟುವ ಪೂರ್ವದಲ್ಲಿ ಸ್ಥಿರ ವೆಚ್ಚ ಕಡಿಮೆ ವಸ್ತುಗಳಲ್ಲಿ ಹಂಚಿ ಹೋಗುವದರಿಂದ ಪ್ರತಿ ವಸ್ತುವಿನ ಸ್ಥಿರ ವೆಚ್ಚ ಹೆಚ್ಚಿಗಿರುತ್ತದೆ. ಮುಂದೆ ಉತ್ಪಾದನೆ ಹೆಚ್ಚಿದಂತೆ ಪ್ರತಿ ವಸ್ತುವಿನ ಸ್ಥಿರವೆಚ್ಚ ಕಡಿಮೆಯಾಗುತ್ತಾ ಹೋಗುತ್ತದೆ.

### ಇಳಿಕೆ ಪ್ರತಿಫಲ

ಕೆಲವೊಂದು ಪ್ರಸಂಗಗಳಲ್ಲಿ ಉತ್ಪಾದನೆ ಹೆಚ್ಚಿದಂತೆ ಪ್ರತಿವಸ್ತುವಿನ ಉತ್ಪಾದನಾ ವೆಚ್ಚ ಹೆಚ್ಚುತ್ತದೆ. ಒಬ್ಬ ರೈತ ಒಬ್ಬ ಕೂಲಿಯವನನ್ನು

ಉಪಯೋಗಿಸಿ ಒಂದು ವಾರಕ್ಕೆ ಒಂದು ಟನ್ ಕಾಯಿಪಲ್ಲೆ ಬೆಳೆಯುತ್ತಾನೆಂದು ತಿಳಿಯೋಣ. ಆ ರೈತ ಮತ್ತೊಬ್ಬ ಕೂಲಿಕಾರನನ್ನು ಉಪಯೋಗಿಸಿದರೆ ಕಾಯಿಪಲ್ಲೆ ಉತ್ಪಾದನೆ ೨ ಟನ್ ಆಗುವ ಬದಲು ಕೇವಲ ೧.೫ಟನ್ ಆಗಬಹುದು. ಈ ರೀತಿಯ ಇಳಿಕೆಯ ಪ್ರತಿಫಲ ನಿಯಮ ಬೇಸಾಯ ರಂಗದಲ್ಲಿ ಸರ್ವಸಾಮಾನ್ಯವೆಂದು ತಿಳಿಯಲಾಗುತ್ತದೆ. ಕೆಲವೊಂದು ಮಟ್ಟದವರೆಗೆ ಏರಿಕೆಯ ಪ್ರಪತಿಫಲವಿರಬಹುದು. ಆದರೆ ಆ ಮಟ್ಟವನ್ನು ದಾಟಿದ ನಂತರ ಇಳಿಕೆ ಪ್ರತಿಫಲ ಅನ್ವಯವಾಗುತ್ತದೆ.

### *೨.೯ ಉದ್ಯಮ ಸಾಹಸತ್ವ ಮತ್ತು ಗಂಡಾಂತರ ಎದುರಿಸುವದು*

ಜನರು ತಮಗೆ ಬೇಕಾದ ಎಲ್ಲ ವಸ್ತುಗಳನ್ನು ತಾವೇ ಉತ್ಪಾದಿಸುವಾಗ ವಸ್ತುಗಳ ವಿನಿಮಯದ ಅವಶ್ಯಕತೆ ಇರಲಿಲ್ಲ. ಆದರೆ ಶ್ರಮ ವಿಭಜನೆ ಬೆಳೆಯುತ್ತಾ ಹೋದಂತೆ ವಸ್ತುಗಳ ವ್ಯಾಪಾರ ಅವಶ್ಯವಾಯಿತು. ಒಂದೇ ವಸ್ತುವನ್ನು ಉತ್ಪಾದಿಸುವಲ್ಲಿ ಪ್ರಾವೀಣ್ಯ ಪಡೆಯಬೇಕಾದರೆ ಆ ವಸ್ತುಗಳನ್ನು ಬೇರೆಯವರಿಗೆ ಮಾರುವ ಒಂದು ವ್ಯವಸ್ಥೆ ಅವಶ್ಯವಾಯಿತು. ಪ್ರಾವೀಣ್ಯದ ಮೊದಲ ಹಂತಗಳಲ್ಲಿ ಒಬ್ಬ ಉತ್ಪಾದಕ ತನ್ನ ವಸ್ತುಗಳನ್ನು ತಾನೇ ಮಾರುತ್ತಿದ್ದ. ಮುಂದೆ ಆರ್ಥಿಕ ವ್ಯವಸ್ಥೆ ಸಂಕೀರ್ಣವಾದಂತೆ ವ್ಯಾಪಾರಿ ಮಧ್ಯವರ್ತಿಗಳು ಹುಟ್ಟಿಕೊಂಡರು. ಮಧ್ಯವರ್ತಿಗಳು ಹುಟ್ಟಿಕೊಂಡ ನಂತರ ಉತ್ಪಾದಕನು ಕೇವಲ ಉತ್ಪಾದನೆಗೆ ಮಾತ್ರ ತನ್ನ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಯಿತು. ಮುಂದೆ ಈ ಮಧ್ಯವರ್ತಿ ವ್ಯಾಪಾರಿ ಉತ್ಪಾದನೆಗೂ ಕೈಹಾಕಿದ. ತನ್ನಲ್ಲಿಯ ಬಂಡವಾಳವನ್ನು ಹಾಕಿ ಕೆಲವೊಂದು ಶ್ರಮಿಕರನ್ನು ಕೂಲಿಯಿಂದ ನೇಮಿಸಿಕೊಂಡು ಉತ್ಪಾದನೆಯನ್ನು ಅವನು ಪ್ರಾರಂಭಿಸಿದ. ಮೊದಲು ನೇಕಾರರಿಂದ ಸೀರೆ, ಧೋತರಗಳನ್ನು ಖರೀದಿಸಿ ವ್ಯಾಪಾರ ಮಾಡುವ ವ್ಯಾಪಾರಿ ತಾನೇ ನೇಕಾರರನ್ನು ನೇಮಿಸಿಕೊಂಡು ಸೀರೆ ಧೋತರಗಳನ್ನು ಉತ್ಪಾದಿಸಲು ಪ್ರಾರಂಭಿಸಿದ.

ಕಚ್ಚಾವಸ್ತುಗಳ ಮೂಲ ದೂರವಿದ್ದಷ್ಟೂ ಮತ್ತು ವಸ್ತುಗಳಿಗೆ ಮಾರುಕಟ್ಟೆ ದೂರವಿದ್ದಷ್ಟೂ ಮಧ್ಯವರ್ತಿ ವ್ಯಾಪಾರಿಗೆ ಮಹತ್ವ ಬರತೊಡಗಿತು. ಅವನು

ಕೇವಲ ಉದ್ದಿಮೆ ನಡೆಸುವವನಾಗಿ ಉಳಿಯಲಿಲ್ಲ. ಅವನು ಉಪಭೋಗಿಗಳ ಬೇಡಿಕೆಗಳನ್ನು ಮೊದಲೆ ಅಭ್ಯಸಿಸಿ ಆ ಬೇಡಿಕೆಗಳನ್ನು ಪೂರೈಸಲು ಉತ್ಪಾದನೆಯನ್ನು ಕೈಕೊಳ್ಳಲು ಪ್ರಾರಂಭಿಸಿದನು. ಅವನ ಮುಂದಾಲೋಚನೆ ಹೆಚ್ಚಿಗಿದ್ದಷ್ಟೂ ಅವನು ಹೆಚ್ಚಿನ ಲಾಭ ಗಳಿಸತೊಡಗಿದನು. ಆದರೆ ಅವನೂ ಕೆಲವೊಂದು ಸಾರಿ ನಷ್ಟವನ್ನು ಅನುಭವಿಸಬೇಕಾಗುತ್ತಿತ್ತು.

ಆದ್ದರಿಂದ ಉದ್ದಿಮೆಯ ಸಂಘಟನೆ ಉದ್ದಿಮೆಯ ಮುಂದಾಳು ಅಥವಾ ಉದ್ಯಮ ಸಾಹಸಿಯ ಮೇಲೆ ಅವಲಂಬಿತವಾಗುತ್ತದೆ. ಈ ಉದ್ಯಮ ಸಾಹಸಿ ಉದ್ಯಮ ವ್ಯವಸ್ಥಾಪಕನಿಗಿಂತ ಭಿನ್ನವಾಗಿರುತ್ತಾನೆ. ವ್ಯವಸ್ಥಾಪಕನು ಉದ್ಯಮದ ಮೇಲ್ವಿಚಾರಣೆಯನ್ನು ಮಾಡುವವನು. ಆದರೆ ಉದ್ಯಮ ಸಾಹಸಿ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರುತ್ತಾನೆ. ಈ ಉದ್ಯಮ ಸಾಹಸಿ ಬಂಡವಾಳ ಪೂರೈಸುವ ಬಂಡವಾಳದಾರನಿಗಿಂತಲೂ ಭಿನ್ನವಾಗಿರುತ್ತಾನೆ. ನಿಜ ಜೀವನದಲ್ಲಿ ಬಂಡವಾಳದಾರ ಹಾಗೂ ಉದ್ಯಮ ಸಾಹಸಿಯ ನಡುವೆ ಅಂತರವನ್ನು ಕಂಡುಕೊಳ್ಳುವದು ಕಠಿಣವಾಗುತ್ತದೆ. ಯಾಕೆಂದರೆ ಬಂಡವಾಳ ತೊಡಗಿಸಿದ ಬಂಡವಾಳದಾರ ಉತ್ಪಾದನೆಯ ಕೆಲವೊಂದು ಗಂಡಾಂತರಗಳಲ್ಲಿ ಪಾಲುಗೊಳ್ಳುತ್ತಾನೆ. ಅದೇ ರೀತಿಯಾಗಿ ಉದ್ಯಮ ಸಾಹಸಿ ಕೆಲವೊಂದು ಬಂಡವಾಳವನ್ನು ಉದ್ದಿಮೆಯಲ್ಲಿ ಹಾಕಿರಬಹುದು.

**ಗಂಡಾಂತರ ಎದುರಿಸುವದು ಹಾಗೂ ಸಟ್ಟಾ ವ್ಯಾಪಾರ**

ಉದ್ದಿಮೆ ಅನೇಕ ಗಂಡಾಂತರಗಳನ್ನು ಎದುರಿಸಬೇಕಾಗುತ್ತದೆ. ಒಂದು ವಸ್ತುವಿನ ಬೆಲೆಯಲ್ಲಿ ಏರಿಳಿತಗಳಾಗುವ ಗಂಡಾಂತರ ಇದ್ದೇ ಇರುತ್ತದೆ. ಇದರ ಜೊತೆಗೆ, ಹೊಸ ವಸ್ತುವನ್ನು ಉತ್ಪಾದಿಸುವಾಗ, ಅದರ ಬೇಡಿಕೆಯನ್ನು ಮೊದಲೆ ಲೆಕ್ಕಹಾಕಿ, ಉದ್ಯಮ ಸಾಹಸಿ, ಅದರ ಉತ್ಪಾದನೆಯನ್ನು ಕೈಗೊಳ್ಳುತ್ತಾನೆ. ಕೆಲವೊಂದು ಪ್ರಸಂಗಗಳಲ್ಲಿ ಅವನು ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಕೆಲವು ವ್ಯಾಪಾರಿಗಳು ಸಟ್ಟಾ ವ್ಯಾಪಾರವನ್ನು ಮಾಡುತ್ತಾರೆ. ಒಬ್ಬ ವ್ಯಾಪಾರಿ ಅರಳೆಯ ಬೆಲೆ ಏರಬಹುದೆಂದು ಊಹಿಸಿ ಅರಳೆಯನ್ನು ಖರೀದಿಸುತ್ತಾನೆ. ಮುಂದೆ

ಅದರ ಬೆಲೆ ಏರಿದಾಗ ಅವನು ಲಾಭ ಪಡೆಯುತ್ತಾನೆ. ಒಂದು ವೇಳೆ ಬೆಲೆಗಳು ಇಳಿದರೆ ಅವನು ನಷ್ಟವನ್ನು ಅನುಭವಿಸುತ್ತಾನೆ.

### *೨.೧೦ ವಿಮೆ ಹಾಗೂ ಒಪ್ಪಂದ*

ವ್ಯಾಪಾರ ಹಾಗೂ ಉದ್ದಿಮೆಯಲ್ಲಿಯ ಕೆಲವೊಂದು ಗಂಡಾಂತರಗಳನ್ನು ವಿಮೆಯ ಮೂಲಕ ವಿಮಾ ಕಂಪನಿಗೆ ವರ್ಗಾವಣೆ ಮಾಡಬಹುದು. ಕಾರ್ಖಾನೆಗೆ ಬೆಂಕಿಹತ್ತಿ ನಷ್ಟವಾಗಬಾರದೆಂದು ಕಾರ್ಖಾನೆಯ ಮಾಲಿಕ ಬೆಂಕಿ ವಿಮೆಯನ್ನು ತೆಗೆದುಕೊಂಡು ವಿಮೆ ಕಂಪನಿಗೆ ಕಂತುಗಳನ್ನು ತುಂಬುತ್ತಾನೆ. ವಿಮಾ ಕಂಪನಿಯು ಕಂತುಗಳನ್ನು ನಿರ್ಧರಿಸುವಾಗ ಒಂದು ವರುಷದಲ್ಲಿ ಪ್ರತಿಶತ ಎಷ್ಟು ಕಾರ್ಖಾನೆಗಳಿಗೆ ಬೆಂಕಿ ತಗಲುತ್ತದೆ ಎಂಬುದನ್ನು ಲೆಕ್ಕ ಹಾಕಿರುತ್ತದೆ. ಎಲ್ಲ ಕಾರ್ಖಾನೆಗಳಿಂದ ಕಂತು ತೆಗೆದುಕೊಂಡು ಯಾವಾಗಲೊ ಒಂದು ಕಾರ್ಖಾನೆಗೆ ಬೆಂಕಿ ತಗಲಿದಾಗ ಅದರ ನಷ್ಟವನ್ನು ವಿಮಾ ಕಂಪನಿ ಭರಿಸುತ್ತದೆ.

ಆದರೆ ಕೆಲವೊಂದು ಗಂಡಾಂತರಗಳನ್ನು ಲೆಕ್ಕ ಹಾಕಲು ಬರುವದಿಲ್ಲ. ಒಬ್ಬ ಅರಳೆ ವ್ಯಾಪಾರಿ ಬಟ್ಟೆ ಕಾರ್ಖಾನೆಗೆ ಅರಳೆಯನ್ನು ಪೂರೈಸುತ್ತಾನೆಂದು ಭಾವಿಸೋಣ. ಮುಂದಿನ ಮೂರು ತಿಂಗಳುಗಳಲ್ಲಿ ಬೆಲೆಗಳು ಏರಬಹುದೆಂದು ಅವನು ಈಗ ಹೆಚ್ಚಿನ ಅರಳೆಯನ್ನು ಖರೀದಿಸಿದರೆ, ಬೆಲೆಗಳು ನಿಜವಾಗಿ ಏರಿದರೆ ಅವನು ಲಾಭವನ್ನು ಪಡೆಯುತ್ತಾನೆ. ಆದರೆ ಬೆಲೆಗಳು ಇಳಿದರೆ ನಷ್ಟವನ್ನು ಅನುಭವಿಸುತ್ತಾನೆ. ಅರಳೆ ವ್ಯಾಪಾರಿ ಬೆಲೆಗಳು ಇಳಿದು ತನಗೆ ನಷ್ಟವಾಗದಂತೆ ವಿಮೆ ಪಾಲಿಸಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವನು ಬಟ್ಟೆ ಕಾರ್ಖಾನೆಯ ಜೊತೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ನಿಗದಿತ ಬೆಲೆಗೆ ಅರಳೆಯನ್ನು ಕಾರ್ಖಾನೆಗೆ ಪೂರೈಸಲು ಅವನು ಒಪ್ಪಿಕೊಳ್ಳುತ್ತಾನೆ. ತಾನು ಗಂಡಾಂತರವನ್ನು ನಿವಾರಿಸಲು ಅರಳೆ ಬೆಳೆಯುವ ರೈತರ ಜೊತೆ ಈ ವ್ಯಾಪಾರಿ ನಿಗದಿತ ಬೆಲೆಗೆ ಅರಳೆಯನ್ನು ತನಗೆ ಪೂರೈಸುವಂತೆ ಒಪ್ಪಂದ ಮಾಡಿ ಕೊಳ್ಳಬಹುದು.

●

# ೩. ಉತ್ಪಾದನಾ ಸಂಸ್ಥೆ

ನಾವಿಲ್ಲಿ ಒಂದು ಉದ್ದಿಮೆಯ ವ್ಯವಸ್ಥೆಯ ವಿವಿಧ ರೀತಿಯ ಸಂಸ್ಥೆಗಳನ್ನು ಸಮೀಕ್ಷಿಸೋಣ. ಒಂದು ಉದ್ದಿಮೆಯ ಸಣ್ಣ ಸಂಸ್ಥೆಯನ್ನೊಳಗೊಂಡು, ಅದರ ವಿವಿಧ ರಚನೆಗಳನ್ನು ಕಂಡುಕೊಂಡು, ಸಂಸ್ಥೆಗಳ ಸಂಯೋಜನೆಯಿಂದ ಮತ್ತು ಏಕಸ್ವಾಮ್ಯತೆಯಿಂದ ಪೈಪೋಟಿಯ ಮೇಲಾಗುವ ಪರಿಣಾಮಗಳನ್ನು ನೋಡೋಣ.

## *೩.೧ ಚಿಕ್ಕ ಘಟಕ*

ಉದ್ದಿಮೆಯ ಅತಿ ಹಳೆಯ ಸಂಸ್ಥೆಯೆಂದರೆ ಒಬ್ಬ ವ್ಯಕ್ತಿ ನಡೆಸುವ ಉದ್ದಿಮೆ. ಪೈಪೋಟಿ ಸಾಕಷ್ಟು ಇರುವ ಈಗಿನ ಕಾಲದಲ್ಲಿ ಚಿಕ್ಕ ಘಟಕಗಳು ಕೆಲವೊಂದು ಉದ್ದಿಮೆಗಳಲ್ಲಿರುವದನ್ನು ನಾವು ನೋಡುತ್ತೇವೆ. ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ ಸಾಕಷ್ಟು ಲಾಭಗಳಿರುವದರಿಂದ ಮತ್ತು ಘಟಕಗಳು ಸಂಯೋಜನೆಗೊಳ್ಳುವದರಿಂದ ಚಿಕ್ಕ ಘಟಕಗಳು ಮಾಯವಾಗಬಹುದೆಂದು ಹಿಂದಿನ ಅರ್ಥಶಾಸ್ತ್ರಜ್ಞರು ಭಾವಿಸಿದ್ದರು. ಆದರೆ ಚಿಕ್ಕ ಘಟಕಗಳು ಈಗಲೂ ಉದ್ದಿಮೆ ರಂಗದಲ್ಲಿ ಇರುವದನ್ನು ನಾವು ನೋಡುತ್ತೇವೆ. ಕೆಲವೊಂದು ಉದ್ದಿಮೆಗಳಲ್ಲಿ - ಹಡಗು ನಿರ್ಮಾಣ, ಕಬ್ಬಿಣ ಮತ್ತು ಉಕ್ಕು ತಯಾರಿಕೆ ಮುಂತಾದವುಗಳಲ್ಲಿ - ದೊಡ್ಡ ಪ್ರಮಾಣದ ಉತ್ಪಾದನೆ ಮಾತ್ರ ಸಾಧ್ಯ. ಆದರೆ ಉಪಭೋಗಿ ವಸ್ತುಗಳ ಉತ್ಪಾದನೆಯ ಉದ್ದಿಮೆಗಳಲ್ಲಿ ಚಿಕ್ಕ ಘಟಕಗಳು ಕಾರ್ಯಮಾಡಬಹುದು.

## ಚಿಕ್ಕ ಘಟಕದ ಅನುಕೂಲಗಳು

೧) ಚಿಕ್ಕ ಘಟಕದಲ್ಲಿ ಮಾಲೀಕನು ತನ್ನ ಘಟಕದಲ್ಲಿ ನಡೆದ ಕಾರ್ಯದ ಮೇಲ್ವಿಚಾರಣೆಯನ್ನು ಸ್ವತಃ ತಾನೇ ನೋಡಿಕೊಳ್ಳಬಹುದು. ದೊಡ್ಡ ಕಂಪನಿಯ ವ್ಯವಸ್ಥಾಪಕನಿಗೆ ಇದು ಸಾಧ್ಯವಿಲ್ಲ.

೨) ಸ್ಥಳೀಯ ಬೇಡಿಕೆ ಹೊಂದಿದ ಉದ್ದಿಮೆಗಳಲ್ಲಿ ಈ ವೈಯಕ್ತಿಕ ಅಂಶ ಬಹಳ ಮಹತ್ವವನ್ನು ಪಡೆದಿದೆ. ಚಿಕ್ಕ ಘಟಕದ ಮಾಲೀಕನು ತನ್ನ ಭಾಗದಲ್ಲಿ ತನ್ನ ವಸ್ತುಗಳ ಅಥವಾ ಸೇವೆಗಳ ಗುಣಮಟ್ಟವನ್ನು ಕಾಯ್ದುಕೊಂಡು ಒಳ್ಳೆಯ ಹೆಸರನ್ನು ಪಡೆದರೆ, ದೊಡ್ಡ ಘಟಕಕ್ಕೆ ಅವನನ್ನು ಅಲ್ಲಿಂದ ಓಡಿಸುವದು ಅಷ್ಟು ಸುಲಭ ಸಾಧ್ಯವಲ್ಲ.

೩) ಸೀಮಿತ ಬೇಡಿಕೆ ಹೊಂದಿದ ವಸ್ತುಗಳ ಉತ್ಪಾದನೆಯಲ್ಲಿ ಚಿಕ್ಕ ಘಟಕಕ್ಕೆ ಅನುಕೂಲತೆಗಳು ಹೆಚ್ಚು. ಆದ್ದರಿಂದ ಕೈಮಗ್ಗದ ಬಟ್ಟೆ ಉತ್ಪಾದನೆಯಲ್ಲಿ ಚಿಕ್ಕ ಘಟಕಗಳಿರುವದನ್ನು ನಾವು ನೋಡುತ್ತೇವೆ.

೪) ಅಭಿರುಚಿಯ ಬದಲಾವಣೆಯಿಂದಾಗಿ ವಸ್ತುವಿನ ಬೇಡಿಕೆಯಲ್ಲಿ ಏರಿಳಿತಗಳಾಗುವ ಉದ್ದಿಮೆಗಳಲ್ಲಿ ಚಿಕ್ಕ ಘಟಕವು ದೊಡ್ಡ ಘಟಕಕ್ಕಿಂತ ಅನುಕೂಲಕರ ಪರಿಸ್ಥಿತಿಯಲ್ಲಿರುತ್ತದೆ. ಚಿಕ್ಕ ಘಟಕ ಉಪಭೋಗಿಗಳ ಅಭಿರುಚಿಗೆ ತಕ್ಕಂತೆ ವಸ್ತುಗಳ ಉತ್ಪಾದನೆಯಲ್ಲಿ ಮಾರ್ಪಾಡು ಮಾಡಬಹುದು. ಆದರೆ ದೊಡ್ಡ ಘಟಕಕ್ಕೆ ಇದು ಸಾಧ್ಯವಾಗಲಾರದು.

ಯಶಸ್ವಿ ನಿರ್ವಹಣೆಯಿಂದಾಗಿ ಒಂದು ಚಿಕ್ಕ ಘಟಕ ಬೆಳೆದು ಒಬ್ಬನಿಂದ ನಿರ್ವಹಣೆ ಸಾಧ್ಯವಾಗದಷ್ಟು ದೊಡ್ಡದಾಗಬಹುದು. ಅಂತಹ ಪ್ರಸಂಗದಲ್ಲಿ ಆ ಘಟಕ ಪಾಲುಗಾರಿಕೆ ಘಟಕವಾಗಿ ಅಥವಾ ಕೂಡು ಬಂಡವಾಳ ಘಟಕವಾಗಿ ಪರಿವರ್ತನೆ ಹೊಂದಬಹುದು.

## ೩.೨ ಕೂಡು ಬಂಡವಾಳ ಘಟಕ

ಕೂಡು ಬಂಡವಾಳ ಘಟಕ ಆರ್ಥಿಕ ರಚನೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದೆ. ತೀರ ಕಡಿಮೆ ಮೊತ್ತದ ಹಣವನ್ನು ಅನೇಕ ಜನರಿಂದ ಕೂಡಿಸಿ ದೊಡ್ಡ ಪ್ರಮಾಣದ ಬಂಡವಾಳ ಹೂಡಿ ದೊಡ್ಡ ಪ್ರಮಾಣದ ಉದ್ದಿಮೆಯನ್ನು ಪ್ರಾರಂಭಿಸಲು ಇದೊಂದು ಸಾಧನವಾಗಿದೆ. ಕೂಡು ಬಂಡವಾಳ ಘಟಕ ಅಭಿವೃದ್ಧಿಯ ಹಂತದಲ್ಲಿ ಸದಸ್ಯರ ಜವಾಬ್ದಾರಿ ಅನಿಯಮಿತವಿತ್ತು. ಅಂದರೆ ಒಬ್ಬ ಸದಸ್ಯನು ಒಂದು ಸಾವಿರ ರೂಪಾಯಿಗಳನ್ನು ತೊಡಗಿಸಿ ಒಂದು ನೂರು ಶೇರುಗಳನ್ನು ಖರೀದಿಸಿದ್ದನೆಂದು ತಿಳಿಯೋಣ. ಅವನ ಜವಾಬ್ದಾರಿ ಅನಿಯಮಿತವಿದ್ದಾಗ ಆ ಕಂಪನಿಯು ನಷ್ಟದಲ್ಲಿ ಬಂದಾಗ ಅವನು ತನ್ನ ಶೇರಿನ ಹಣವನ್ನು ಕಳೆದುಕೊಳ್ಳುವದಲ್ಲದೆ ಅವನ ಉಳಿದ ಆಸ್ತಿಯ ಮೇಲೂ ಕಂಪನಿಗೆ ಸಾಲ ಕೊಟ್ಟವರ ಹಕ್ಕು ಇರುತ್ತದೆ. ಇದು ಕೂಡು ಬಂಡವಾಳ ಕಂಪನಿಗಳಲ್ಲಿ ಹಣತೊಡಗಿಸುವ ಜನರಿಗೆ ತೊಂದರೆದಾಯಕವಾಗ ಹತ್ತಿದ್ದರಿಂದ ನಿಯಮಿತ ಜವಾಬ್ದಾರಿ ಪದ್ಧತಿ ಜಾರಿಯಲ್ಲಿ ಬಂದಿತು. ನಿಯಮಿತ ಜವಾಬ್ದಾರಿ ಪದ್ಧತಿಯಲ್ಲಿ ಒಬ್ಬನು ಒಂದು ಕಂಪನಿಯಲ್ಲಿ ಒಂದು ಸಾವಿರ ರೂಪಾಯಿಗಳಿಗೆ ಒಂದು ನೂರು ಶೇರು ಖರೀದಿಸಿದ್ದರೆ, ಅವನ ಜವಾಬ್ದಾರಿ ಕೇವಲ ಒಂದು ಸಾವಿರ ರೂಪಾಯಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅವನ ಉಳಿದ ಆಸ್ತಿ ಸುರಕ್ಷಿತವಾಗಿರುತ್ತದೆ.

ಕೂಡು ಬಂಡವಾಳ ಕಂಪನಿಗಳಲ್ಲಿ ಬಂಡವಾಳದ ಮಾಲೀಕರು ಆ ಬಂಡವಾಳದ ನಿರ್ವಹಣೆ ಮಾಡುವದಿಲ್ಲ. ಅದು ಬೇರೆಯವರ ಕೈಯಲ್ಲಿ ಇರುತ್ತದೆ. ನಿರ್ವಹಣೆಯ ಜವಾಬ್ದಾರಿ ನಿಯಂತ್ರಣ ಮಂಡಳಿಯ ಕೈಯಲ್ಲಿ ಅಥವಾ ವ್ಯವಸ್ಥಾಪಕನ ಕೈಯಲ್ಲಿ ಇರುತ್ತದೆ. ಜನಸಾಮಾನ್ಯನಿಗೆ ಕೂಡು ಬಂಡವಾಳ ಕಂಪನಿಯ ಪದ್ಧತಿ ಅನುಕೂಲಕರವಾಗಿದೆ. ಜನಸಾಮಾನ್ಯನು ತನ್ನ ಉಳಿತಾಯವನ್ನು ಇಂತಹ ಕಂಪನಿಗಳ ಶೇರುಗಳಲ್ಲಿ ತೊಡಗಿಸಬಹುದು. ಅವನು ಅನೇಕ ಕಂಪನಿಗಳ ಶೇರು ಖರೀದಿಸಿದರೆ ಗಂಡಾಂತರವೂ ಹಂಚಿಹೋಗುತ್ತದೆ.

ಆದರೆ ಕೂಡು ಬಂಡವಾಳ ಕಂಪನಿಯ ಮುಖ್ಯ ದೋಷವೆಂದರೆ ಶೇರು ದಾರರು ವಿವಿಧ ಭಾಗಗಳಲ್ಲಿ ನೆಲೆಸಿರುವದರಿಂದ ಕಂಪನಿಯ ದಿನ ನಿತ್ಯದ ಆಗುಹೋಗುಗಳಲ್ಲಿ ಅವರಿಗೆ ಆಸಕ್ತಿ ಇರುವದಿಲ್ಲ. ಇಂತಹ ಪ್ರಸಂಗದಲ್ಲಿ ಕೇವಲ ಕೆಲವು ದೊಡ್ಡ ಶೇರುದಾರರು ಕಂಪನಿಯ ಮೇಲೆ ನಿಯಂತ್ರಣ ಪಡೆಯಬಹುದು. ಇಂತಹ ನಿಯಂತ್ರಣದಿಂದ ಒಂದು ಕಂಪನಿ ಮತ್ತೊಂದು ಕಂಪನಿಯ ಜೊತೆ ಸಂಯೋಜನೆಗೊಳ್ಳುವ ಅಥವಾ ಅದರಲ್ಲಿ ಸೇರುವ ಸಂಭವವಿರುತ್ತದೆ.

### ಬಾಹ್ಯ ಮತ್ತು ಆಂತರಿಕ ಲಾಭಗಳು

ದೊಡ್ಡ ಪ್ರಮಾಣದ ಉತ್ಪಾದನೆಯಿಂದ ಆಂತರಿಕ ಹಾಗೂ ಬಾಹ್ಯ ಲಾಭಗಳು ಸಂಭವಿಸುತ್ತವೆ. ಆಂತರಿಕ ಲಾಭಗಳೆಂದರೆ ಒಂದು ಸಂಸ್ಥೆ ಅಥವಾ ಘಟಕ ಬೆಳೆದಂತೆ ಅದಕ್ಕೆ ಕೆಲವೊಂದು ಲಾಭಗಳು ದೊರಕುತ್ತವೆ. ಆ ಲಾಭಗಳೆಂದರೆ ಆ ಘಟಕ ಶ್ರಮ ವಿಭಜನೆಯನ್ನು ಅಳವಡಿಸಿಕೊಳ್ಳಬಹುದು. ಶ್ರಮ ವಿಭಜನೆಯಿಂದಾಗಿ ಉತ್ಪಾದನೆಯ ವೆಚ್ಚ ಕಡಿಮೆಯಾಗುತ್ತದೆ. ಅದೇ ರೀತಿಯಾಗಿ ಆ ಘಟಕ ಕಚ್ಚಾ ವಸ್ತುಗಳನ್ನು ಖರೀದಿಸುವಾಗ ಮತ್ತು ತನ್ನ ವಸ್ತುಗಳನ್ನು ಮಾರುವಾಗ ಕೆಲವೊಂದು ಲಾಭಗಳನ್ನು ಪಡೆಯುತ್ತದೆ. ಇವೆಲ್ಲವುಗಳೂ ಆಂತರಿಕ ಲಾಭಗಳು. ಈ ಲಾಭಗಳನ್ನು ಪಡೆಯಬೇಕಾದರೆ ಆ ಘಟಕ ಬೆಳೆದು ದೊಡ್ಡದಾಗಬೇಕು. ಹೀಗೆ ದೊಡ್ಡದಾಗುತ್ತ ಹೋದಂತೆ ಮಾತ್ರ ಅದು ಆಂತರಿಕ ಲಾಭಗಳನ್ನು ಪಡೆಯುತ್ತದೆ.

ಬಾಹ್ಯ ಲಾಭಗಳೆಂದರೆ ಉದ್ದಿಮೆ ಬೆಳೆದಂತೆ ಆ ಉದ್ದಿಮೆಯಲ್ಲಿಯ ಘಟಕ ಕೆಲವೊಂದು ಲಾಭಗಳನ್ನು ಪಡೆಯುತ್ತದೆ. ಒಂದು ಪ್ರದೇಶದಲ್ಲಿ ಒಂದು ಉದ್ದಿಮೆ ಬೆಳೆದಂತೆ ಅಲ್ಲಿ ಕೆಲವೊಂದು ಅನುಕೂಲತೆಗಳು ಬೆಳೆಯ ಬಹುದು. ಸಾರಿಗೆ ಸಂಪರ್ಕದಲ್ಲಿ ಸುಧಾರಣೆ, ಹಣಕಾಸಿನ ಸಂಸ್ಥೆಗಳ ಬೆಳವಣಿಗೆ ಮುಂತಾದವುಗಳು. ಇದರಿಂದ ಉದ್ದಿಮೆಯ ಘಟಕಕ್ಕೆ ಅನುಕೂಲತೆಗಳು ಹೆಚ್ಚುತ್ತವೆ. ಇಂತಹ

ಲಾಭಗಳು ಆ ಘಟಕದ ಹೊರಗಡೆ ಸಿಗುವದರಿಂದ ಇವುಗಳನ್ನು ಬಾಹ್ಯ ಲಾಭಗಳೆಂದು ಕರೆಯಲಾಗುತ್ತದೆ.

### *೭.೨ ಪೈಪೋಟಿ ಮತ್ತು ಏಕಸ್ವಾಮ್ಯ*

ಒಂದು ವಸ್ತುವನ್ನು ಉತ್ಪಾದನೆ ಮಾಡುವ ಘಟಕವು ವಿವಿಧ ರೀತಿಯ ಮಾರುಕಟ್ಟೆಯ ರಚನೆಯಲ್ಲಿ ತನ್ನ ವಸ್ತುವನ್ನು ಮಾರಾಟ ಮಾಡುತ್ತದೆ. ಮಾರುಕಟ್ಟೆಯ ರಚನೆ ಪರಿಪೂರ್ಣ ಪೈಪೋಟಿಯಾಗಿರಬಹುದು. ಪರಿಪೂರ್ಣ ಪೈಪೋಟಿ ಇದ್ದ ಮಾರುಕಟ್ಟೆ ಒಂದು ಆದರ್ಶ ಮಾರುಕಟ್ಟೆಯೆಂದು ಸಂಪ್ರದಾಯ ಅರ್ಥಶಾಸ್ತ್ರಜ್ಞರು ತಿಳಿದಿದ್ದರು. ಪರಿಪೂರ್ಣ ಮಾರುಕಟ್ಟೆಯಲ್ಲಿ ಉತ್ಪಾದಕರ ಸಂಖ್ಯೆ ಹೆಚ್ಚಿಗೆ ಇದ್ದು ಅವರೆಲ್ಲರೂ ಒಂದೇ ರೀತಿಯ ವಸ್ತುವನ್ನು ಉತ್ಪಾದಿಸುತ್ತಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಆ ವಸ್ತುವಿನ ಬೆಲೆ ಮಾರುಕಟ್ಟೆಯಲ್ಲಿಯ ಆ ವಸ್ತುವಿನ ಬೇಡಿಕೆ ಮತ್ತು ಪೂರೈಕೆಯನ್ನು ಅವಲಂಬಿಸಿರುತ್ತದೆ. ಈ ರೀತಿಯಾಗಿ ಮಾರುಕಟ್ಟೆ ನಿರ್ಧರಿಸಿದ ಬೆಲೆಯನ್ನು ಪ್ರತಿಯೊಬ್ಬ ಉತ್ಪಾದಕನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಪ್ರತಿಯೊಬ್ಬ ಉಪಭೋಗಿಯೂ ಆ ಬೆಲೆಯನ್ನು ಕೊಡಬೇಕಾಗುತ್ತದೆ. ಆದರೆ ಇಂತಹ ಪರಿಪೂರ್ಣ ಪೈಪೋಟಿ ಇದ್ದ ಮಾರುಕಟ್ಟೆ ನಿಜ ಜೀವನದಲ್ಲಿ ಸಿಗುವದು ದುರ್ಲಭ.

ಉತ್ಪಾದಕರ ಸಂಖ್ಯೆ ಹೆಚ್ಚಿಗಿದ್ದು ಅವರೆಲ್ಲರೂ ಒಂದೇ ರೀತಿಯ ವಸ್ತುವನ್ನು ಉತ್ಪಾದಿಸುವ ಬದಲು ಬೇರೆ ಬೇರೆ ರೀತಿಯ ವಸ್ತುಗಳನ್ನು ಉತ್ಪಾದಿಸುತ್ತಿದ್ದರೆ ಆ ಮಾರುಕಟ್ಟೆಯನ್ನು ಏಕಸ್ವಾಮ್ಯತಾ ಪೈಪೋಟಿ ಮಾರುಕಟ್ಟೆಯೆಂದು ಕರೆಯಲಾಗುತ್ತದೆ. ಈಗ ನಾವು ಬಟ್ಟೆ ಒಗೆಯುವ ಸಾಬೂನು ಅಥವಾ ಸ್ನಾನದ ಸಾಬೂನನ್ನೆ ತೆಗೆದುಕೊಂಡರೆ, ಬೇರೆ ಬೇರೆ ಕಂಪನಿಗಳು ಈ ಸಾಬೂನುಗಳನ್ನು ಉತ್ಪಾದಿಸುತ್ತವೆ. ಅವೆಲ್ಲವುಗಳೂ ಸಾಬೂನುಗಳಾದರೂ ಅವುಗಳ ವ್ಯಾಪಾರಿ ಚಿನ್ಹೆ ಬೇರೆ ಬೇರೆ ಇರುವದರಿಂದ ಅವೆಲ್ಲವುಗಳೂ ಒಂದೇ ರೀತಿಯ

ವಸ್ತುಗಳೆಂದು ಹೇಳಲು ಬರುವದಿಲ್ಲ. ಇಂತಹ ಏಕಸ್ವಾಮ್ಯತಾ ಪೈಪೋಟಿಯಲ್ಲಿ ಪ್ರತಿಯೊಬ್ಬ ಉತ್ಪಾದಕನೂ ತನ್ನ ವಸ್ತುವನ್ನು ಹೆಚ್ಚಿಗೆ ಮಾರಾಟ ಮಾಡಲು ಜಾಹೀರಾತಿಗಾಗಿ ಹಣವನ್ನು ಖರ್ಚುಮಾಡುತ್ತಾನೆ. ತನ್ನ ವಸ್ತುವು ಉಳಿದ ವಸ್ತುಗಳಿಗಿಂತ ಶ್ರೇಷ್ಠವೆಂದು ಹೇಳಿ ಬಳಕೆದಾರರುಗಳನ್ನು ತನ್ನೆಡೆಗೆ ಎಳೆಯಲು ಪ್ರಯತ್ನಿಸುತ್ತಿರುತ್ತಾನೆ. ಟಿ.ವ್ಹಿ, ರೇಡಿಯೋ ಮತ್ತು ಪತ್ರಿಕೆಗಳಲ್ಲಿ ಅನೇಕ ವಸ್ತುಗಳ ಜಾಹೀರಾತನ್ನು ನಾವು ದಿನನಿತ್ಯ ನೋಡುತ್ತಿರುತ್ತೇವೆ. ಶೃಂಗಾರ ಸಾಧನಗಳ ಉತ್ಪಾದಕರಲ್ಲಿ ಮತ್ತು ಇನ್ನುಳಿದ ಬಳಕೆ ವಸ್ತುಗಳ ಉತ್ಪಾದಕರಲ್ಲಿ ಈರೀತಿಯ ಪೈಪೋಟಿಯನ್ನು ನಾವು ದಿನ ನಿತ್ಯ ಜೀವನದಲ್ಲಿ ನೋಡುತ್ತೇವೆ.

ಇನ್ನೊಂದು ಮಾರುಕಟ್ಟೆಯ ರಚನೆಯೆಂದರೆ ಏಕಸ್ವಾಮ್ಯತೆ. ಏಕಸ್ವಾಮ್ಯತೆಯಲ್ಲಿ ಒಂದು ವಸ್ತುವಿನ ಉತ್ಪಾದಕನು ಒಬ್ಬನೇ ಇದ್ದು ಆ ವಸ್ತುವಿಗೆ ಸಮೀಪದ ಬದಲಿ ವಸ್ತುಗಳು ಮಾರುಕಟ್ಟೆಯಲ್ಲಿ ಇರುವದಿಲ್ಲ. ಹೀಗಾಗಿ ಏಕ ಸ್ವಾಮ್ಯತೆಯ ಉತ್ಪಾದಕನು ತನ್ನ ಲಾಭವನ್ನು ಹೆಚ್ಚಿಸಲು ಆ ವಸ್ತುವಿನ ಬೆಲೆಯನ್ನು ಏರಿಸುತ್ತಾನೆ. ಆದರೆ ಈ ರೀತಿಯ ಬೆಲೆ ಏರಿಕೆಗೂ ಒಂದು ಮಿತಿ ಇರುತ್ತದೆ. ಯಾಕೆಂದರೆ ಬೆಲೆ ಏರಿದಂತೆ ವಸ್ತುವಿಗೆ ಬೇಡಿಕೆ ಕಡಿಮೆಯಾಗುವ ಸಂಭವವಿರುವದರಿಂದ, ತನ್ನ ಲಾಭವನ್ನು ಗರಿಷ್ಠಮಟ್ಟಕ್ಕೆ ಹೆಚ್ಚಿಸುವ ಬೆಲೆ ಯಾವುದೆಂಬುದನ್ನು ಕಂಡುಕೊಂಡು ಆ ಬೆಲೆಯಿಂದಲೇ ಅವನು ತೃಪ್ತಿ ಪಡಬೇಕಾಗುತ್ತದೆ. ಏಕಸ್ವಾಮ್ಯತೆಯ ಉತ್ಪಾದಕನು ಹೆಚ್ಚಿನ ಬೆಲೆಯನ್ನು ನಿರ್ಧರಿಸಿ, ಹೆಚ್ಚಿಗೆ ವಸ್ತುಗಳನ್ನು ಮಾರಲು ಸಾಧ್ಯವಿಲ್ಲ.

### *೩.೪ ಏಕಸ್ವಾಮ್ಯತೆಯ ಪ್ರಕಾರಗಳು*

ಎಲ್ಲ ಏಕಸ್ವಾಮ್ಯತೆಗಳು ಒಂದೇ ರೀತಿಯವುಗಳಾಗಿರುವದಿಲ್ಲ. ಕೆಲವೊಂದು ಏಕಸ್ವಾಮ್ಯತೆಗಳು ನಿಸರ್ಗದತ್ತವಾದವುಗಳಾಗಿರುತ್ತವೆ. ಒಂದು ನೈಸರ್ಗಿಕ ಸಂಪತ್ತು ಒಂದು ಪ್ರದೇಶದಲ್ಲಿ ದೊರಕುತ್ತಿದ್ದಾಗ ಏಕಸ್ವಾಮ್ಯತೆಗೆ ಅನುಕೂಲಕರವಾದ ಪರಿಸ್ಥಿತಿ ಅಲ್ಲಿ ಉತ್ಪನ್ನವಾಗುತ್ತದೆ. ಅದೇ ರೀತಿಯಾಗಿ ಕೆಲವೊಂದು ಜನರು

ವಿರಳವಾದಂತಹ ಒಂದು ಕಲೆಯನ್ನು ಕರಗತಮಾಡಿಕೊಂಡಿರಬಹುದು. ಅಂಥವರು ನಿಸರ್ಗದತ್ತವಾದ ಏಕಸ್ವಾಮ್ಯತೆಯನ್ನು ಪಡೆದಿರುತ್ತಾರೆ.

ಇನ್ನೊಂದು ರೀತಿಯ ಏಕಸ್ವಾಮ್ಯತೆಯೆಂದರೆ ನ್ಯಾಯಬದ್ಧ ಏಕಸ್ವಾಮ್ಯತೆ. ಒಬ್ಬ ಸಂಶೋಧಕನಿಗೆ ಸರಕಾರವು ಕೊಡುವ ಸ್ವಾಮ್ಯ ಸನದು, ಲೇಖಕರಿಗೆ ಕೊಡುವ ಗ್ರಂಥಸ್ವಾಮ್ಯ ನ್ಯಾಯಬದ್ಧ ಸ್ವಾಮ್ಯತೆಯ ಉದಾಹರಣೆಗಳು. ಇಲ್ಲಿ ಒಂದು ರೀತಿಯ ಆಸ್ತಿಯ ಹಕ್ಕನ್ನು ಕಾಯುವದು ಉದ್ದೇಶವಾಗಿರುತ್ತದೆ. ಕೆಲವೊಂದು ಪ್ರಸಂಗಗಳಲ್ಲಿ ಪೈಪೋಟಿ ಅನಾವಶ್ಯಕವೆನಿಸುತ್ತದೆ. ಜನರಿಗೆ ನೀರನ್ನು ಪೂರೈಸುವಲ್ಲಿ ಬೇರೆ ಬೇರೆ ಸಂಸ್ಥೆಗಳು ನೀರಿನ ನಳಗಳನ್ನು ಹಾಕುವದು ಸಾರ್ವಜನಿಕ ದೃಷ್ಟಿಯಿಂದ ಸಂಪತ್ತಿನ ವ್ಯಯವಾಗುತ್ತದೆ. ಆದ್ದರಿಂದ ಸರಕಾರ ಒಂದೇ ಸಂಸ್ಥೆಗೆ ನೀರು ಸರಬರಾಜು ಮಾಡುವ ಹಕ್ಕನ್ನು ಕೊಡುತ್ತದೆ. ಅದೆ ರೀತಿಯಾಗಿ ಪೋಸ್ಟ್, ರೇಲ್ವೆ, ಮತ್ತು ವಿದ್ಯುತ್ ಪೂರೈಕೆ ಮುಂತಾದ ಸೇವೆಗಳಲ್ಲಿ ಏಕಸ್ವಾಮ್ಯತೆ ಇರುವದನ್ನು ನಾವು ನೋಡುತ್ತೇವೆ. ಇವುಗಳು ಸಾರ್ವಜನಿಕ ಏಕಸ್ವಾಮ್ಯತೆಗಳು.

ಕೆಲವೊಂದು ಸಂದರ್ಭಗಳಲ್ಲಿ ಕಡಿಮೆ ಉತ್ಪಾದಕರಿರುವ ಉದ್ದಿಮೆಯಲ್ಲಿ ಉತ್ಪಾದಕರು ತಮ್ಮ ತಮ್ಮೊಳಗೆ ಪೈಪೋಟಿ ಮಾಡುವದರಿಂಧ ತಮಗೆ ನಷ್ಟವಾಗುವದೆಂದು ತಿಳಿದು ಎಲ್ಲ ಉತ್ಪಾದಕರು ಒಂದುಗೂಡಿ ಒಂದೇ ರೀತಿಯ ಬೆಲೆಯನ್ನು ನಿರ್ಧರಿಸಲು ತಮ್ಮೊಳಗೆ ಒಂದು ಒಪ್ಪಂದಕ್ಕೆ ಬರಬಹುದು. ಇಂತಹ ಒಪ್ಪಂದ ಬರೆ ಬಾಯಿಮಾತಿನ ಒಪ್ಪಂದವಾಗಿರುಬಹುದು. ಇದನ್ನು ನಾವು ಏಕಸ್ವಾಮ್ಯ ಪದ್ಧತಿಯೆಂದು ಕರೆಯಬಹುದು. ಇಂತಹ ಪದ್ಧತಿಗಳಿಂದ ಮಾರುಕಟ್ಟೆಯಲ್ಲಿಯ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನ ನಡೆದಿರುತ್ತದೆ.

ಉದ್ದಿಮೆಗಳ ಸಂಯೋಜನೆಯಿಂದಲೂ ಏಕಸ್ವಾಮ್ಯ ಉತ್ಪನ್ನವಾಗಬಹುದು. ಎರಡು ಅಥವಾ ಮೂರು ಘಟಕಗಳು ಒಂದುಗೂಡಿ ಒಂದೇ ಘಟಕವಾಗಿ ಮಾರ್ಪಾಡು ಹೊಂದಬಹುದು. ಇಲ್ಲಿ ಮೂಲ ಉದ್ದೇಶ ಪೈಪೋಟಿಯನ್ನು

ತೊಡೆದು ಹಾಕುವದಾಗಿರುತ್ತದೆ. ಏಕಸ್ವಾಮ್ಯ ಪದ್ಧತಿಗಳನ್ನು ಸರಕಾರವು ಕಾಯ್ದೆಗಳ ಮೂಲಕ ನಿಯಂತ್ರಿಸಬಹುದು. ನಮ್ಮ ದೇಶದಲ್ಲಿ ಏಕಸ್ವಾಮ್ಯ ಪದ್ಧತಿಗಳ ನಿಯಂತ್ರಣ ಕಾಯ್ದೆಗಳಿವೆ. ಸಾರ್ವಜನಿಕ ಹಿತದ ದೃಷ್ಟಿಯಿಂದ ಸಾರ್ವಜನಿಕ ಏಕಸ್ವಾಮ್ಯತೆಗಳನ್ನು, ಕಾಯ್ದೆಬದ್ಧ ಏಕಸ್ವಾಮ್ಯತೆಗಳನ್ನು ಸರಕಾರ ನಿಯಂತ್ರಿಸಲು ಕಾಯ್ದೆಗಳನ್ನು ಮಾಡಬಹುದು.

●

# ೪. ಮೌಲ್ಯ ಸಮಸ್ಯೆ

ಬೆಲೆ ನಿರ್ಧಾರದ ತತ್ವಗಳು ಅರ್ಥಶಾಸ್ತ್ರದಲ್ಲಿ ಬಹಳ ಮಹತ್ವದ ಸ್ಥಾನ ಪಡೆದಿವೆ. ಈ ತತ್ವಗಳು ಕೇವಲ ವಸ್ತುಗಳಿಗೆ ಮಾತ್ರ ಅನ್ವಯಿಸದೆ ಸೇವೆಗಳಿಗೂ ಅನ್ವಯಿಸುತ್ತವೆ. ವಸ್ತುಗಳ ಬೆಲೆ ಯಾವ ಆಧಾರದ ಮೇಲಿಂದ ನಿರ್ಧರಿಸಲ್ಪಡುತ್ತದೆಯೆಂಬುದನ್ನು ಅರ್ಥಶಾಸ್ತ್ರಜ್ಞರು ತೀರ ಹಳೆಯ ಕಾಲದಿಂದಲೂ ವಿವರಿಸಲು ಪ್ರಯತ್ನಿಸಿದ್ದಾರೆ.

**ಬೆಲೆಗಳ ಕರ್ತವ್ಯ**

ಪೈಪೋಟಿ ವ್ಯವಸ್ಥೆಯಲ್ಲಿ ಬೆಲೆಗಳು ಉತ್ಪಾದಕರಿಗೆ ಹಾಗೂ ಬಳಕೆದಾರರಿಗೆ ಮಾರ್ಗದರ್ಶಿಯಾಗಿರುತ್ತವೆ. ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಬೆಲೆ ಏರಿದರೆ ಆ ವಸ್ತುವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದೆಯೆಂದು ಅರ್ಥ. ಉತ್ಪಾದಕರು ಹೆಚ್ಚಿಗೆ ಉತ್ಪಾದನಾ ಸಾಧನಗಳನ್ನು ಬಳಸಿ ಆ ವಸ್ತುವಿನ ಉತ್ಪಾದನೆ ಮಾಡಬೇಕೆಂದು ಬೆಲೆ ಸೂಚಿಸುತ್ತದೆ. ಬೆಲೆ ಇಳಿದರೆ ಉತ್ಪಾದನೆಯನ್ನು ಕಡಿಮೆ ಮಾಡಬೇಕೆಂದು ಅದು ಸೂಚಿಸುತ್ತದೆ. ಬೆಲೆ ಏರಿದಾಗ ಬಳಕೆದಾರ ಆ ವಸ್ತುವನ್ನು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಬೇಕೆಂದು ಅದು ಸೂಚಿಸುತ್ತದೆ. ಬೆಲೆ ಇಳಿದಾಗ ಆ ವಸ್ತುವು ಹೇರಳವಾಗಿ ಸಿಗುವದರಿಂದ ಬಳಕೆದಾರ ಆ ವಸ್ತುವನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಬಹುದೆಂದು ಅದು ಸೂಚಿಸುತ್ತದೆ. ಈ ರೀತಿಯಾಗಿ ಬೆಲೆ ಉತ್ಪಾದಕರಿಗೂ ಹಾಗೂ ಬಳಕೆದಾರರಿಗೂ ಮಾರ್ಗದರ್ಶಿಯಾಗಿರುತ್ತದೆ.

## *೪.೧ ಬೇಡಿಕೆ ಹಾಗೂ ಪೂರೈಕೆ*

ನಾವೀಗ ಅರ್ಥಶಾಸ್ತ್ರದಲ್ಲಿ ಮೇಲಿಂದ ಮೇಲೆ ಉಪಯೋಗಿಸುವ ಪದಗಳಾದ ಬೇಡಿಕೆ ಹಾಗೂ ಪೂರೈಕೆಗಳ ಅರ್ಥವನ್ನು ತಿಳಿದುಕೊಳ್ಳೋಣ.

ಬೇಡಿಕೆಯೆಂದರೆ ಕೇವಲ ಇಷ್ಟವಲ್ಲ. ಒಬ್ಬ ಬಡವ ಮಾರುಕಟ್ಟೆಯಲ್ಲಿಯ ಅನೇಕ ವಸ್ತುಗಳನ್ನು ನೋಡಿ ಇಷ್ಟಪಡಬಹುದು. ಆದರೆ ಆ ಇಷ್ಟವನ್ನು ಅವನು ಬೇಡಿಕೆಯಾಗಿ ಪರಿವರ್ತಿಸಬೇಕಾದರೆ ಅವನಲ್ಲಿ ಹಣಬೇಕು. ಅಂದರೆ ಕೊಳ್ಳುವ ಶಕ್ತಿಯನ್ನು ಪಡೆದ ಇಷ್ಟಗಳು ಬೇಡಿಕೆಯಾಗುತ್ತವೆ. ಒಂದು ವಸ್ತುವಿನ ಬೇಡಿಕೆ ಅದರ ಬೆಲೆಯನ್ನು ಅವಲಂಬಿಸಿದೆ. ಒಬ್ಬ ಬಳಕೆದಾರ ಒಂದು ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ಕೊಳ್ಳುತ್ತಾನೆಂಬುದು ಆ ವಸ್ತುವಿನ ಬೆಲೆಯನ್ನು ಅವಲಂಬಿಸಿದೆ. ಹೆಚ್ಚಿನ ಬೆಲೆ ಇದ್ದಾಗ ಕಡಿಮೆ ಕೊಳ್ಳುತ್ತಾನೆ. ಕಡಿಮೆ ಬೆಲೆ ಇದ್ದಾಗ ಹೆಚ್ಚಿಗೆ ವಸ್ತುಗಳನ್ನು ಕೊಳ್ಳುತ್ತಾನೆ. ವಸ್ತುವಿನ ಉತ್ಪಾದಕನು ಆ ವಸ್ತುವಿಗೆ ಹೆಚ್ಚಿಗೆ ಬೆಲೆ ಇದ್ದಾಗ ಹೆಚ್ಚಿಗೆ ವಸ್ತುಗಳನ್ನು ಪೂರೈಸುತ್ತಾನೆ. ಆ ವಸ್ತುವಿನ ಬೆಲೆ ಇಳಿದಾಗ ಕಡಿಮೆ ವಸ್ತುಗಳನ್ನು ಪೂರೈಸುತ್ತಾನೆ. ವಸ್ತುವಿನ ಬೆಲೆ ಏರುತ್ತಿರುವಾಗ ಅದರ ಪೂರೈಕೆಯೂ ಹೆಚ್ಚುತ್ತದೆ. ಬೆಲೆ ಇಳಿಯುತ್ತಿರುವಾಗ ಪೂರೈಕೆಯೂ ಕಡಿಮೆಯಾಗುತ್ತದೆ.

## *೪.೨ ಬೆಲೆಗಳ ಹಳೆಯ ಸಿದ್ಧಾಂತಗಳು*

ಹತ್ತೊಂಬತ್ತನೆಯ ಶತಮಾನದ ಪೂರ್ವಭಾಗದಲ್ಲಿ ಅರ್ಥಶಾಸ್ತ್ರಜ್ಞರು ಬೆಲೆಯನ್ನು ವಸ್ತುವಿನ ಉತ್ಪಾದನೆಯ ವೆಚ್ಚದ ಮೇಲಿಂದ ವಿವರಿಸಲು ಪ್ರಯತ್ನಿಸಿದರು. ಅವರ ಪ್ರಕಾರ ಒಂದು ವಸ್ತುವಿನ ಬೆಲೆಯಲ್ಲಿ ಆ ವಸ್ತುವನ್ನು ಉತ್ಪಾದಿಸಲು ವಹಿಸಿದ ಶ್ರಮ ಬಂಡವಾಳ ಮತ್ತು ಕಚ್ಚಾವಸ್ತುಗಳ ವೆಚ್ಚ ಸೇರಿರುತ್ತದೆ. ಸಂಪ್ರದಾಯ ಪಂಥದ ಮುಂದಾಳುಗಳಾದ ಆಡಮ್ ಸ್ಮಿಥ್ ಮತ್ತ ಡೇವಿಡ್ ರಿಕಾರ್ಡೋರವರು ಒಂದು ವಸ್ತುವಿನ ಬೆಲೆಯನ್ನು ಆ ವಸ್ತುವನ್ನು ಉತ್ಪಾದಿಸಲು ಬೇಕಾದ ಶ್ರಮದ ಮೇಲಿಂದಲೇ ನಿರ್ಧರಿಸಬೇಕೆಂದು ಹೇಳಿದರು.

ಬಂಡವಾಳವೂ ಶ್ರಮದ ಪ್ರತಿಫಲ. ಕಚ್ಚಾವಸ್ತುಗಳ ಬೆಲೆಯನ್ನು ಅವುಗಳ ಉತ್ಪಾದನೆಗೆ ಬೇಕಾದ ಶ್ರಮದಿಂದ ಅಳೆಯಬೇಕು. ಆದ್ದರಿಂದ ಅವರ ಪ್ರಕಾರ ಪ್ರತಿ ವಸ್ತುವಿನ ಬೆಲೆಗೆ ಶ್ರಮವೇ ಮೂಲವಾದ್ದರಿಂದ ಶ್ರಮದಿಂದಲೇ ಆ ವಸ್ತುವಿನ ಬೆಲೆಯನ್ನು ನಿರ್ಧರಿಸಬೇಕೆಂದು ಅವರು ಪ್ರತಿಪಾದಿಸಿದರು.

ಆದರೆ ಈ ಉತ್ಪಾದನಾ ವೆಚ್ಚದ ಸಿದ್ಧಾಂತ ಬೆಲೆಯ ಸಮಸ್ಯೆಗೆ ಪೂರ್ಣ ಪರಿಹಾರ ಒದಗಿಸಲಾರದು. ಒಂದು ವಸ್ತು ಉತ್ಪಾದನೆಯಾದ ನಂತರ ಅದರ ಬೆಲೆಯಲ್ಲಿ ಏರಿಳಿತವಾಗುವದನ್ನು ಈ ಸಿದ್ಧಾಂತ ವಿವರಿಸಲಾರದು. ಉಪಭೋಗಿಗಳ ಅಭಿರುಚಿಯ ಬದಲಾವಣೆಯಿಂದಾಗಿ ಬೆಲೆಗಳಲ್ಲಿ ಏರಿಳಿತವಾಗುವದನ್ನು ಈ ಸಿದ್ಧಾಂತ ವಿವರಿಸಲಾರದು. ಅದೇ ರೀತಿಯಾಗಿ ಯಾರಿಗೂ ಬೇಡವಾದ ವಸ್ತುಗಳನ್ನು ಉತ್ಪಾದಿಸಿದಾಗ ಆ ವಸ್ತುಗಳಿಗೆ ಬೆಲೆ ಇರಲಾರದು. ಆದ್ದರಿಂದ ಕೇವಲ ಪೂರೈಕೆ ವಸ್ತುಗಳ ಬೆಲೆಯನ್ನು ನಿರ್ಧರಿಸಲಾರದು. ಬೆಲೆ ನಿರ್ಧರಿಸುವಲ್ಲಿ ಉಪಭೋಗಿಗಳ ಬೇಡಿಕೆಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಉತ್ಪಾದನಾ ವೆಚ್ಚ ಸಿದ್ಧಾಂತದ ಇತಿಮಿತಿಗಳನ್ನರಿತ ಅರ್ಥಶಾಸ್ತ್ರಜ್ಞರು ಹತ್ತೊಂಬತ್ತನೆಯ ಶತಮಾನದ ಕೊನೆಯ ಅರ್ಧದಲ್ಲಿ ವಸ್ತುವಿನ ಬೇಡಿಕೆಗೆ ಮಹತ್ವವನ್ನು ಕೊಡಲು ಪ್ರಾರಂಭಿಸಿದರು. ವಸ್ತುವಿನ ಬೆಲೆ ನಿರ್ಧಾರದಲ್ಲಿ ಆ ವಸ್ತುವಿನ ತೃಪ್ತಿಗುಣವೇ ಮುಖ್ಯವೆಂದು ಅವರು ಪ್ರತಿಪಾದಿಸಿದರು. ಆದರೆ ಬೆಲೆಯನ್ನು ನಿರ್ಧರಿಸುವಲ್ಲಿ ವಸ್ತುವಿನ ತೃಪ್ತಿಗುಣ ಬಹಳ ಮಹತ್ವದ ಪಾತ್ರವಹಿಸಿದ್ದರೂ ಆ ವಸ್ತುವಿನ ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೆ ಅದರ ಬೆಲೆಯನ್ನು ನಿರ್ಧರಿಸುವದು ಸತ್ಯ ಸಂಗತಿಗೆ ದೂರವಾಗಿದೆ. ಉದಾಹರಣೆಗೆ ನಾವು ನೀರಿನ ಬೆಲೆಯನ್ನು ತೆಗೆದುಕೊಳ್ಳೋಣ. ನೀರು ಮನುಷ್ಯನಿಗೆ ಬಹಳ ಉಪಯುಕ್ತವಾದ ವಸ್ತು. ಆದರೆ ಅದರ ಬೆಲೆ ತೀರಾ ಕಡಿಮೆ. ಒಂದು ವಜ್ರದ ಉಪಯುಕ್ತತೆ ಕಡಿಮೆ ಇರಬಹುದು. ಆದರೆ

ಅದರ ಬೆಲೆ ಹೆಚ್ಚು. ಈ ಮೌಲ್ಯ ವಿರೋಧಾಭಾಸದಲ್ಲಿ ಉಪಯುಕ್ತತೆ ಹೆಚ್ಚಿಗಿದ್ದ ವಸ್ತುವಿನ ವಿನಿಮಯ ಬೆಲೆ ಕಡಿಮೆ ಇದೆ. ಉಪಯುಕ್ತತೆ ಕಡಿಮೆ ಇದ್ದ ವಸ್ತುವಿನ ವಿನಿಮಯ ಬೆಲೆ ಹೆಚ್ಚಿಗಿದೆ. ಈ ದ್ವಂದ್ವತೆ ಅನೇಕ ಪೀಳಿಗೆಯ ಅರ್ಥಶಾಸ್ತ್ರಜ್ಞರಿಗೆ ಸಮಸ್ಯೆಯೊಡ್ಡಿತು. ವೆಚ್ಚ ಒಂದು ವಸ್ತುವಿನ ಬೆಲೆಯನ್ನು ನಿರ್ಧರಿಸಲಾರದು.

ಹಳೆಯ ಸಿದ್ಧಾಂತಗಳ ಮೇಲಿನ ರೂಪರೇಷೆ, ಬೆಲೆ ನಿರ್ಧಾರದಲ್ಲಿ ಬೇಡಿಕೆ ಮತ್ತು ಪೂರೈಕೆಗಳೆರಡೂ ಮಹತ್ವದ ಪಾತ್ರ ವಹಿಸುತ್ತವೆಯೆಂಬ ನಮ್ಮ ಮೊದಲಿನ ತತ್ವದೆಡೆಗೆ ನಮ್ಮನ್ನು ಒಯ್ಯುತ್ತದೆ. ಈ ತತ್ವವನ್ನು ನಾವು ಸ್ವಲ್ಪ ವಿವರವಾಗಿ ವಿಶ್ಲೇಷಿಸೋಣ.

## ಬೇಡಿಕೆ ಮತ್ತು ಇಳಿಕೆಯ ತೃಪ್ತಿಗುಣ

ಉಪಭೋಗಿಗೆ ಒಂದು ವಸ್ತು ಕೊಡುವ ತೃಪ್ತಿ ಅವನು ಎಷ್ಟು ಪ್ರಮಾಣದಲ್ಲಿ ಆ ವಸ್ತುವನ್ನು ಉಪಯೋಗಿಸುತ್ತಾನೆಂಬುದನ್ನು ಅವಲಂಬಿಸಿದೆ. ನಾವು ಒಂದು ಲೋಟ ಕಾಫಿ ಕುಡಿದಾಗ ಮೊದಲಿನ ಲೋಟ ನಮಗೆ ಬಹಳ ತೃಪ್ತಿ ಕೊಡುತ್ತದೆ. ಎರಡನೆಯ ಲೋಟ ಮೊದಲಿನ ಲೋಟಕ್ಕಿಂತ ಕಡಿಮೆ ತೃಪ್ತಿ ಕೊಡುತ್ತದೆ. ಹೀಗೆ ನಾವು ಯಾವುದೇ ಒಂದು ವಸ್ತುವನ್ನು ಬಳಸುತ್ತಾ ಹೋದಂತೆ ಆ ವಸ್ತುವು ನಮಗೆ ಕೊಡುವ ತೃಪ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಇದನ್ನು ಅರ್ಥಶಾಸ್ತ್ರದಲ್ಲಿ ಇಳಿಕೆಯ ತೃಪ್ತಿಗುಣ ಸಿದ್ಧಾಂತವೆಂದು ಕರೆಯಲಾಗುತ್ತದೆ. ಒಟ್ಟು ತೃಪ್ತಿ ಹೆಚ್ಚುತ್ತಾ ಹೋದರೂ ಅಂಚಿನ ತೃಪ್ತಿ ಕಡಿಮೆಯಾಗುತ್ತಾ ಹೋಗುತ್ತದೆ.

ನಿಜ ಜೀವನದಲ್ಲಿ ಈ ಸಿದ್ಧಾಂತ ಕೆಲಸ ಮಾಡುವದನ್ನು ನಾವು ನೋಡುತ್ತೇವೆ. ಒಂದು ವಸ್ತುವಿನ ಬೆಲೆ ಹೆಚ್ಚಾಗಿದ್ದಾಗ ಆ ವಸ್ತುವನ್ನು ನಾವು ಕಡಿಮೆ ಪ್ರಮಾಣದಲ್ಲಿ ಕೊಳ್ಳುತ್ತೇವೆ. ಅದೇ ವಸ್ತು ಸೋವಿ ಇದ್ದಾಗ ಹೆಚ್ಚಿನ ಪ್ರಮಾಣದಲ್ಲಿ ನಾವು ಅದನ್ನು ಕೊಳ್ಳುತ್ತೇವೆ. ಅದೇ ರೀತಿಯಾಗಿ ಕಡಿಮೆ

ಆದಾಯವಿದ್ದ ಒಬ್ಬ ಮನುಷ್ಯ ತನ್ನ ಹಣವನ್ನು ಕೇವಲ ತನ್ನ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳಲು ಉಪಯೋಗಿಸುತ್ತಾನೆ. ಅವನ ಆದಾಯ ಹೆಚ್ಚಿದರೆ ಅವನು ಕೆಲವು ಸುಖ ಸಾಧನಗಳನ್ನು ಕೊಳ್ಳುತ್ತಾನೆ. ಅವನ ಆದಾಯ ಇನ್ನೂ ಹೆಚ್ಚಿದಾಗ ಅವನು ಐಷಾರಾಮಿ ವಸ್ತುಗಳನ್ನು ಕೊಳ್ಳುತ್ತಾನೆ.

ನಾವು ಒಬ್ಬ ಉಪಭೋಗಿಯು ಕೊಳ್ಳುವ ಒಂದು ವಸ್ತುವನ್ನು ಅಥವಾ ಅವನ ಒಟ್ಟು ವೆಚ್ಚವನ್ನು ತೆಗೆದುಕೊಂಡಾಗಲೂ ಇಳಿಕೆಯ ತೃಪ್ತಿಗುಣ ಸಿದ್ಧಾಂತ ಅನ್ವಯವಾಗುತ್ತದೆ. ಸರಕಾರವು ವ್ಯಕ್ತಿಯ ಮೇಲೆ ಆದಾಯ ಕರವನ್ನು ವಿಧಿಸುವಾಗಲೂ ಈ ತತ್ವವನ್ನು ಪಾಲಿಸುತ್ತದೆ. ಒಂದು ವಸ್ತುವಿನ ಅಂಚಿನ ತೃಪ್ತಿಗುಣ ಇಳಿಯುತ್ತಾ ಹೋದಂತೆ ಒಬ್ಬ ವ್ಯಕ್ತಿಯ ಆದಾಯದ ತೃಪ್ತಿಗುಣವೂ ಇಳಿಯುತ್ತಾ ಹೋಗುತ್ತದೆ. ಆದ್ದರಿಂದಲೆ ಸರಕಾರ ಆದಾಯ ಕರವನ್ನು ವಿಧಿಸುವಾಗ ಹೆಚ್ಚಿನ ಆದಾಯ ಇದ್ದವರಿಗೆ ಹೆಚ್ಚಿನ ದರವನ್ನೂ ಕಡಿಮೆ ಆದಾಯವಿದ್ದವರಿಗೆ ಕಡಿಮೆ ದರವನ್ನೂ ನಿರ್ಧರಿಸುತ್ತದೆ. ಹೆಚ್ಚಿನ ಆದಾಯವಿದ್ದವನು ಹೆಚ್ಚು ಕರವನ್ನು ಕೊಡುವಾಗ ಅವನು ಕಳೆದುಕೊಳ್ಳುವ ಅಂಚಿನ ತೃಪ್ತಿಗುಣ ಕಡಿಮೆ ಇರುತ್ತದೆ. ಕಡಿಮೆ ಆದಾಯವಿದ್ದವನು ಕಡಿಮೆ ಕರವನ್ನು ಕೊಟ್ಟರೂ ಅವನು ಕಳೆದುಕೊಳ್ಳುವ ಅಂಚಿನ ತೃಪ್ತಿಗುಣ ಹೆಚ್ಚಿಗೆ ಇರುತ್ತದೆ.

### ೪.೩ *ಅಂಚಿನ ತೃಪ್ತಿಗುಣ ಹಾಗೂ ಬೆಲೆ*

ಒಂದು ವಸ್ತುವನ್ನು ಹೆಚ್ಚು ಹೆಚ್ಚಾಗಿ ಬಳಸುತ್ತಾ ಹೋದಂತೆ ಅದರ ಅಂಚಿನ ತೃಪ್ತಿಗುಣ ಕಡಿಮೆಯಾಗುತ್ತ ಹೋಗುತ್ತದೆಯೆಂಬುದನ್ನು ನಾವೀಗಾಗಲೆ ಕಂಡುಕೊಂಡಿದ್ದೇವೆ. ಆದರೆ ಆ ವಸ್ತುವಿನ ಅಂಚಿನ ತೃಪ್ತಿಗುಣ ಶೂನ್ಯ ಮುಟ್ಟುವ ಮೊದಲೆ ಅದರ ಬಳಕೆಯನ್ನು ನಾವು ತಡೆಯುತ್ತೇವೆ. ನಾವು ವಸ್ತುಗಳನ್ನು ಕೊಳ್ಳುವಾಗ ಒಂದು ವಸ್ತುವಿನ ತೃಪ್ತಿಗುಣಕ್ಕೆ ಹೋಲಿಸುತ್ತಿರುತ್ತೇವೆ. ಒಂದು ವಸ್ತುವಿನ ತೃಪ್ತಿಗುಣ ಕಡಿಮೆಯಾದರೆ ತೃಪ್ತಿಗುಣ ಹೆಚ್ಚಿಗಿದ್ದ ವಸ್ತುವಿನ

ಮೇಲೆ ನಮ್ಮ ಹಣವನ್ನು ಖರ್ಚು ಮಾಡುತ್ತೇವೆ. ಹೀಗೆ ನಾವು ಮಾಡಿದಾಗ ವಸ್ತುಗಳ ಬದಲಿ ನಿಯಮವನ್ನು ಪಾಲಿಸುತ್ತೇವೆ. ಹೆಚ್ಚಿನ ತೃಪ್ತಿಗುಣ ಹೊಂದಿದ ವಸ್ತುವನ್ನು ಕಡಿಮೆ ತೃಪ್ತಿಗುಣ ಹೊಂದಿದ ವಸ್ತುವಿಗೆ ಬದಲಿ ಮಾಡಿ ಕೊಳ್ಳುವದರಿಂದ ನಮ್ಮ ಒಟ್ಟು ತೃಪ್ತಿಯನ್ನು ನಾವು ಹೆಚ್ಚಿಸಿ ಕೊಳ್ಳುತ್ತೇವೆ.

ಒಂದು ವಸ್ತುವನ್ನು ಕೊಳ್ಳುವಾಗ ನಾವು ಬೇರೆ ಬೇರೆ ವಸ್ತುಗಳನ್ನು ಹೋಲಿಸುವದರ ಜೊತೆಗೆ ಆ ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ಕೊಳ್ಳ ಬೇಕೆಂಬುದನ್ನು ನಿರ್ಧರಿಸಬೇಕಾಗುತ್ತದೆ. ಒಬ್ಬ ಗೃಹಿಣಿ ತರಕಾರಿ ತರಲು ಮಾರುಕಟ್ಟೆಗೆ ಹೋದಾಗ, ಮೊದಲು ವಿವಿಧ ತರಕಾರಿಯ ಬೆಲೆಗಳನ್ನು ವಿಚಾರಿಸಿ, ಪ್ರತಿಯೊಂದು ತರಕಾರಿಯನ್ನು ಎಷ್ಟು ಪ್ರಮಾಣದಲ್ಲಿ ಕೊಳ್ಳಬೇಕೆಂದು ನಿರ್ಧರಿಸುತ್ತಾಳೆ. ಒಂದು ತರಕಾರಿಯ ಬೆಲೆ ಹೆಚ್ಚಿಗಿದ್ದಾಗ ಅವಳು ಅದನ್ನು ಕಡಿಮೆ ಪ್ರಮಾಣದಲ್ಲಿ ಕೊಂಡು ಕಡಿಮೆ ಬೆಲೆ ಇದ್ದ ತರಕಾರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳುತ್ತಾಳೆ. ಅವಳು ಎಷ್ಟು ಪ್ರಮಾಣದಲ್ಲಿ ಒಂದು ತರಕಾರಿಯನ್ನು ಕೊಳ್ಳುತ್ತಾಳೆಂಬುದು ಅವಳ ಆ ತರಕಾರಿಯ ಅಂಚಿನ ತೃಪ್ತಿಗುಣವನ್ನು ಅವಲಂಬಿಸಿದೆ. ಬದನೆಕಾಯಿಯ ಅವಳ ಅಂಚಿನ ತೃಪ್ತಿಗುಣ ಈ ಕೆಳಗಿನಂತಿದೆಯೆಂದು ನಾವು ಭಾವಿಸೋಣ.

1 ಕಿಲೋ ಬದನೆಕಾಯಿಯ ತೃಪ್ತಿಗುಣ 6 ರೂಪಾಯಿಗೆ ಸಮ

2 ಕಿಲೋ ಬದನೆಕಾಯಿಯ ತೃಪ್ತಿಗುಣ 5 ರೂಪಾಯಿಗೆ ಸಮ

3 ಕಿಲೋ ಬದನೆಕಾಯಿಯ ತೃಪ್ತಿಗುಣ 4 ರೂಪಾಯಿಗೆ ಸಮ

4 ಕಿಲೋ ಬದನೆಕಾಯಿಯ ತೃಪ್ತಿಗುಣ 3 ರೂಪಾಯಿಗೆ ಸಮ

ಹೀಗಿದ್ದಾಗ ಆ ಗೃಹಿಣಿ ಎಷ್ಟು ಬದನೆಕಾಯಿ ಕೊಳ್ಳುತ್ತಾಳೆನ್ನುವದು ಅದರ ಬೆಲೆಯನ್ನು ಅವಲಂಬಿಸಿದೆ. ಬದನೆಕಾಯಿಯ ಬೆಲೆ 5 ರೂಪಾಯಿಗೆ ಒಂದು ಕೇಜಿ ಇದ್ದಾಗ ಆ ಗೃಹಿಣಿ 2 ಕಿಲೋ ಬದನೆಕಾಯಿಯನ್ನು ಕೊಳ್ಳುತ್ತಾಳೆ. 4

ರೂಪಾಯಿಗೆ ಕಿಲೋ ಇದ್ದಾಗ 3 ಕಿಲೋ ಕೊಳ್ಳುತ್ತಾಳೆ. ಅಂದರೆ ಬದನೆಕಾಯಿಯ ಅಂಚಿನ ತೃಪ್ತಿಗುಣ ಅದರ ಬೆಲೆಗೆ ಸಮನಾಗುವಂತೆ ಆ ಗೃಹಿಣಿ ಅದನ್ನು ಖರೀದಿಸುತ್ತಾಳೆ.

ಒಂದು ವಸ್ತುವನ್ನು ಬಳಕೆದಾರನು ಯಾವ ಬೆಲೆಗೆ ಎಷ್ಟು ಖರೀದಿಸುತ್ತಾನೆಂಬುದು ಆ ವಸ್ತುವಿನ ಅಂಚಿನ ತೃಪ್ತಿಗುಣವನ್ನು ಅವಲಂಬಿಸಿರುತ್ತದೆ. ಆದರೆ ಅಂಚಿನ ತೃಪ್ತಿಗುಣ ಬೆಲೆಯನ್ನು ನಿರ್ಧರಿಸುವುದಿಲ್ಲ. ಅಂಚಿನ ತೃಪ್ತಿಗುಣ ಬೆಲೆಯ ಸೂಚನೆಯನ್ನು ಮಾತ್ರ ಕೊಡುತ್ತದೆ. ಬೆಲೆಯು ವಸ್ತುವಿನ ಪೂರೈಕೆಯನ್ನೂ ಅವಲಂಬಿಸಿದೆಯೆಂಬುದನ್ನು ನಾವು ಮುಂದೆ ನೋಡುತ್ತೇವೆ. ಬೇಡಿಕೆ, ಬೆಲೆ ಹಾಗೂ ಪೂರೈಕೆ ಒಂದರ ಮೇಲೊಂದು ಪ್ರಭಾವ ಬೀರುವದರಿಂದ ಯಾವದು ಕಾರಣ ಮತ್ತು ಯಾವದು ಪರಿಣಾಮವೆಂಬುದನ್ನು ಹೇಳುವದು ಕಠಿಣವಾಗುತ್ತದೆ. ಆದರೆ ಈ ಮಟ್ಟದಲ್ಲಿ ನಾವು ಒಂದು ವಸ್ತುವಿನ ಬೆಲೆ, ಬೇಡಿಕೆಯ ಕಡೆಯಿಂದ ಅದರ ಅಂಚಿನ ತೃಪ್ತಿಗುಣಕ್ಕೆ ಸರಿಸಮಾನವಾಗಿದೆಯೆಂದು ಹೇಳಬಹುದು.

### *೪.೪ ಪೂರೈಕೆ ಹಾಗೂ ಉತ್ಪಾದನಾ ವೆಚ್ಚ*

ನಾವೀಗ ಒಂದು ವಸ್ತುವಿನ ಬೆಲೆ ನಿರ್ಧಾರವನ್ನು ಅದರ ಪೂರೈಕೆಯ ದೃಷ್ಟಿಯಿಂದ ನೋಡೋಣ ಒಂದು ವಸ್ತುವಿನ ಬೇಡಿಕೆಯು ಹಿಂದೆ ತೃಪ್ತಿಗುಣವಿದ್ದಂತೆ ಆ ವಸ್ತುವಿನ ಪೂರೈಕೆಯ ಹಿಂದೆ ಉತ್ಪಾದನಾ ವೆಚ್ಚವಿದೆ. ಒಂದು ವಸ್ತುವಿನ ಉತ್ಪಾದನಾ ವೆಚ್ಚವನ್ನು ನಾವು ಎರಡು ಭಾಗವಾಗಿ ವಿಂಗಡಿಸಬಹುದು. ಅವು ಯಾವುವೆಂದರೆ ಸ್ಥಿರ ಉತ್ಪಾದನಾ ವೆಚ್ಚ ಮತ್ತು ಅಸ್ಥಿರ ಉತ್ಪಾದನಾ ವೆಚ್ಚ. ಸ್ಥಿರ ಉತ್ಪಾದನಾ ವೆಚ್ಚ ವಸ್ತುಗಳ ಉತ್ಪಾದನೆ ಹೆಚ್ಚಿದಾಗ ಅಥವಾ ಕಡಿಮೆಯಾದಾಗ ಅಷ್ಟೇ ಉಳಿದಿರುತ್ತದೆ. ಆದ್ದರಿಂದ ಉತ್ಪಾದನೆ ಹೆಚ್ಚಿದಾಗ ಪ್ರತಿವಸ್ತುವಿನ ಸ್ಥಿರವೆಚ್ಚ ಕಡಿಮೆಯಾಗುತ್ತದೆ. ಒಂದು ಕಾರ್ಖಾನೆ ಯಂತ್ರಗಳ ಮೇಲೆ ಮಾಡಿದ ಖರ್ಚು, ಬಿಲ್ಡಿಂಗಿನ ಮೇಲೆ ಮಾಡಿದ

ಖರ್ಚು ಸ್ಥಿರ ವೆಚ್ಚವಾಗುತ್ತವೆ. ಅಸ್ಥಿರ ವೆಚ್ಚಗಳು ವಸ್ತುವಿನ ಉತ್ಪಾದನೆ ಹೆಚ್ಚಿದಂತೆ ಅವೂ ಹೆಚ್ಚುತ್ತವೆ. ಒಂದು ಉತ್ಪಾದನಾ ಸಂಸ್ಥೆ ತಾನು ಕಚ್ಚಾ ವಸ್ತುಗಳ ಮೇಲೆ ಮಾಡುವ ವೆಚ್ಚ, ಶ್ರಮಿಕರಿಗೆ ಕೊಡುವ ಕೂಲಿ ವ್ಯತ್ಯಾಸವಾಗುವ ವೆಚ್ಚಗಳಾಗುತ್ತವೆ. ಆ ಸಂಸ್ಥೆ ತಾನು ಹೆಚ್ಚಿಗೆ ಉತ್ಪಾದನೆ ಮಾಡಬೇಕಾದರೆ ಹೆಚ್ಚು ಕಚ್ಚಾ ವಸ್ತುಗಳನ್ನು ಖರೀದಿಸಬೇಕು ಹಾಗೂ ಹೆಚ್ಚಿನ ಶ್ರಮಿಕರನ್ನು ನೇಮಿಸಿಕೊಳ್ಳಬೇಕು. ಸ್ಥಿರ ಹಾಗೂ ಅಸ್ಥಿರ ವೆಚ್ಚಗಳ ಪ್ರಮಾಣ ಒಂದು ಉದ್ದಿಮೆಯಿಂದ ಮತ್ತೊಂದು ಉದ್ದಿಮೆಗೆ ಬದಲಿಯಾಗುತ್ತಾ ಹೋಗುತ್ತದೆ. ಕಲ್ಲಿದ್ದಲು ಉದ್ದಿಮೆಯಲ್ಲಿ ಸ್ಥಿರ ವೆಚ್ಚಗಳು ಕಡಿಮೆ ಇದ್ದು ಅಸ್ಥಿರ ವೆಚ್ಚಗಳು ಹೆಚ್ಚಿಗಿರುತ್ತವೆ. ಎಂಜಿನಿಯರಿಂಗ್ ಉದ್ದಿಮೆಯಲ್ಲಿ ಸ್ಥಿರ ವೆಚ್ಚದ ಪ್ರಮಾಣ ಹೆಚ್ಚಿರುತ್ತದೆ. ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಒಂದು ಸಂಸ್ಥೆಯ ನೀತಿಯು ಸ್ಥಿರ ಹಾಗೂ ಅಸ್ಥಿರ ವೆಚ್ಚಗಳ ಪ್ರಮಾಣದ ಮೇಲಿಂದ ನಿರ್ಧರಿಸಲ್ಪಡುತ್ತದೆ. ಆ ಸಂಸ್ಥೆ ಉತ್ಪಾದನೆಯನ್ನು ಮಾಡಲಿ ಅಥವಾ ಬಿಡಲಿ ಸ್ಥಿರ ವೆಚ್ಚಗಳನ್ನು ಅದು ವಹಿಸಿಕೊಳ್ಳಲೇ ಬೇಕಾಗುತ್ತದೆ. ಬೆಲೆ ಕಡಿಮೆ ಇದ್ದಾಗ ಅಸ್ಥಿರ ವೆಚ್ಚಗಳನ್ನಾದರೂ ಆ ಬೆಲೆಯಿಂದ ನೀಗಿಸಬಹುದಾದರೆ ಆ ಸಂಸ್ಥೆ ಉತ್ಪಾದನೆಯನ್ನು ಮುಂದುವರಿಸುತ್ತದೆ. ಅಸ್ಥಿರ ವೆಚ್ಚಗಳನ್ನು ನೀಗಿಸಿ ಕೆಲವು ಮಟ್ಟಿಗಾದರೂ ಸ್ಥಿರ ವೆಚ್ಚವನ್ನು ನೀಗಿಸಬಹುದಾದರೆ ಆ ಸಂಸ್ಥೆ ತನಗಾಗುವ ನಷ್ಟವನ್ನು ಕಡಿಮೆ ಮಾಡಿಕೊಳ್ಳುತ್ತದೆ. ಆರ್ಥಿಕ ಮುಗ್ಗಟ್ಟು ಸುಧಾರಿಸಿದಂತೆ ಆ ಸಂಸ್ಥೆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಆಗ ಅನುಕೂಲವಾಗುತ್ತದೆ. ಆದ್ದರಿಂದ ಅಲ್ಪಾವಧಿಯಲ್ಲಿ ಒಂದು ಸಂಸ್ಥೆ ಲಾಭ ಪಡೆಯದಿದ್ದರೂ ಉತ್ಪಾದನೆಯನ್ನು ಮುಂದುವರಿಸುತ್ತದೆ. ಅಂದರೆ ಅದು ತನ್ನ ಎಲ್ಲ ವೆಚ್ಚವನ್ನೂ ಮರಳಿ ಪಡೆಯದಿದ್ದರೂ ಉತ್ಪಾದನೆಯನ್ನು ಮುಂದುವರಿಸುತ್ತದೆ. ಆದರೆ ದೀರ್ಘಾವಧಿಯಲ್ಲಿ ಅದು ಸಾಧ್ಯವಿಲ್ಲ. ಯಾವ ಉತ್ಪಾದಕನೂ ದೀರ್ಘಾವಧಿಯಲ್ಲಿ ತನ್ನ ಎಲ್ಲ ಉತ್ಪಾದನಾ ವೆಚ್ಚವನ್ನು ಮರಳಿ ಪಡೆಯದಿದ್ದರೆ ಉತ್ಪಾದನೆಯನ್ನು ಮುಂದುವರಿಸಲಾರ.

## ೪.೫ ಅಂಚಿನ ವೆಚ್ಚ ಹಾಗೂ ಬೆಲೆ

ಬೆಲೆಯು ಉತ್ಪಾದನಾ ವೆಚ್ಚಕ್ಕೆ ಸರಿಹೋಗುತ್ತದೆಯೆಂದು ಹೇಳಿದರೆ, ಯಾರ ಉತ್ಪಾದನಾ ವೆಚ್ಚವೆಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಒಂದು ವಸ್ತುವನ್ನು ಅನೇಕ ಸಂಸ್ಥೆಗಳು ಉತ್ಪಾದಿಸುತ್ತಿರಬಹುದು. ಅವೆಲ್ಲವುಗಳ ಉತ್ಪಾದನಾ ವೆಚ್ಚ ಬೇರೆ ಬೇರೆಯಾಗಿರಬಹುದು. ಸಿದ್ಧ ಉಡುಪುಗಳನ್ನು ತಯಾರು ಮಾಡುವ ಮೂರು ಸಂಸ್ಥೆಗಳಿವೆಯೆಂದು ನಾವು ಭಾವಿಸೋಣ. ಅವೆಲ್ಲವುಗಳು ಒಂದೇ ತರದ ಬಟ್ಟೆಯನ್ನು ಉಪಯೋಗಿಸಿ ಅಂಗಿಗಳನ್ನು ತಯಾರಿಸುತ್ತವೆಯೆಂದು ನಾವು ಭಾವಿಸೋಣ. ಅವೆಲ್ಲವುಗಳು ಅಂಗಿಯನ್ನು ೧೦೦ರೂಪಾಯಿಗೆ ಒಂದರಂತೆ ಮಾರುತ್ತಿದ್ದರೆ ಅವೆಲ್ಲವುಗಳ ಉತ್ಪಾದನಾ ವೆಚ್ಚ ಬೇರೆ ಬೇರೆಯಾಗಿರಬಹುದು. ಒಂದು ಸಂಸ್ಥೆಯಲ್ಲಿ ಅಂಗಿಯ ಉತ್ಪಾದನಾ ವೆಚ್ಚ ಕೇವಲ ೯೦ ರೂಪಾಯಿ ಇರಬಹುದು. ಇನ್ನೊಂದು ಸಂಸ್ಥೆಯಲ್ಲಿ ಉತ್ಪಾದನಾ ವೆಚ್ಚ ೯೫ ರೂಪಾಯಿ ಇರಬಹುದು. ಮೂರನೆಯ ಸಂಸ್ಥೆಯಲ್ಲಿ ಉತ್ಪಾದನಾ ವೆಚ್ಚ ೧೦೦ರೂಪಾಯಿ ಇರಬಹುದು. ಅಂಗಿಯ ಬೆಲೆ ಮಾರುಕಟ್ಟೆಯಲ್ಲಿ ಕಡಿಮೆಯಾದರೆ ಈ ಮೂರನೆಯ ಸಂಸ್ಥೆ ತನ್ನ ಉತ್ಪಾದನೆಯನ್ನು ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ಇದನ್ನು ಅಂಚಿನ ಸಂಸ್ಥೆಯೆಂದು ಕರೆಯಬಹುದು. ಈ ಸಂಸ್ಥೆಯಲ್ಲಿ ಉತ್ಪಾದನಾ ವೆಚ್ಚ ಬೆಲೆಗೆ ಸರಿಸಮಾನವಾಗಿದೆ. ಉತ್ಪಾದನಾ ವೆಚ್ಚದಲ್ಲಿ ನಾವು ಕನಿಷ್ಠ ಲಾಭವನ್ನೂ ಸೇರಿಸುತ್ತೇವೆ. ಹೀಗಾಗಿ ಈ ಸಂಸ್ಥೆ ಕನಿಷ್ಠ ಲಾಭವನ್ನು ಗಳಿಸುತ್ತಿರುತ್ತದೆ. ಇನ್ನುಳಿದ ಸಂಸ್ಥೆಗಳು ಹೆಚ್ಚಿನ ಲಾಭವನ್ನು ಗಳಿಸುತ್ತಿರುತ್ತವೆ.

ಉತ್ಪಾದನಾವೆಚ್ಚ ಬೇರೆ ಬೇರೆ ಸಂಸ್ಥೆಗಳಲ್ಲಿ ವ್ಯತ್ಯಾಸವಾಗುವಂತೆ ಒಂದೇ ಸಂಸ್ಥೆಯಲ್ಲಿಯೂ ಉತ್ಪಾದನಾ ಮಟ್ಟ ಬದಲಿಯಾದಂತೆ ವ್ಯತ್ಯಾಸವಾಗುತ್ತದೆ. ಒಂದು ಉತ್ಪಾದನಾ ಸಂಸ್ಥೆಯಲ್ಲಿ ಉತ್ಪಾದನೆ ಹೆಚ್ಚಿದಂತೆ ಮೊದಲು ಉತ್ಪಾದನಾ ವೆಚ್ಚ ಕಡಿಮೆಯಾಗಿ, ಉತ್ಪಾದನೆ ಒಂದು ಮಟ್ಟವನ್ನು ಮುಟ್ಟಿದ ನಂತರ ಉತ್ಪಾದನಾ ವೆಚ್ಚ ಹೆಚ್ಚಿಗೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಆ ಸಂಸ್ಥೆ ವಸ್ತುವಿನ ಉತ್ಪಾದನಾ ವೆಚ್ಚ ಮಾರುವ ಬೆಲೆಗೆ ಸಮನಾಗುವವರೆಗೆ ತನ್ನ

ಉತ್ಪಾದನೆಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಇದಕ್ಕಿಂತ ಹೆಚ್ಚಿನ ಉತ್ಪಾದನೆ ಮಾಡಿದರೆ ಹೆಚ್ಚಿನ ಉತ್ಪಾದನೆಯಮೇಲೆ ನಷ್ಟವನ್ನು ಅದು ಅನುಭವಿಸ ಬೇಕಾಗುತ್ತದೆ. ಆದ್ದರಿಂದ ವಸ್ತುವಿನ ಪೂರೈಕೆಯ ದೃಷ್ಟಿಯಿಂದ ವಸ್ತುವಿನ ಬೆಲೆ ಅದರ ಅಂಚಿನ ಉತ್ಪಾದನೆಯ ವೆಚ್ಚಕ್ಕೆ ಸರಿಸಮನಾಗಿರುತ್ತದೆಯೆಂದು ನಾವು ಹೇಳಬಹುದು.

ನಾವಿಲ್ಲಿಯವರೆಗೆ ಬೇಡಿಕೆಯ ದೃಷ್ಟಿಯಿಂದ ಒಂದು ವಸ್ತುವಿನ ಬೆಲೆ ಅದರ ಅಂಚಿನ ತೃಪ್ತಿಗುಣಕ್ಕೆ ಸಮನಾಗಿದ್ದರೆ, ಪೂರೈಕೆಯ ದೃಷ್ಟಿಯಿಂದ ಅದು ಅದರ ಅಂಚಿನ ಉತ್ಪಾದನಾ ವೆಚ್ಚಕ್ಕೆ ಸಮನಾಗಿರುತ್ತದೆಯೆಂದು ಕಂಡುಕೊಂಡೆವು. ಇವೆರಡರ ಹೊಂದಾಣಿಕೆಯಿಂದ ಬೆಲೆ ನಿರ್ಧರಿಸಲ್ಪಡುತ್ತದೆ. ಬೆಲೆಯು ಕೇವಲ ಅಂಚಿನ ತೃಪ್ತಿಗುಣದಿಂದ ನಿರ್ಧರಿತವಾಗುವದಿಲ್ಲ. ಅಥವಾ ಕೇವಲ ಅಂಚಿನ ಉತ್ಪಾದನಾ ವೆಚ್ಚದಿಂದ ನಿರ್ಧರಿತವಾಗುವದಿಲ್ಲ. ಇವೆರಡರ ಮಿಲನದಿಂದ ಬೆಲೆ ನಿರ್ಧರಿಸಲ್ಪಡುತ್ತದೆ.

### *೪.೬ ಬೆಲೆಯ ನಿರ್ಧಾರ*

ಬೇಡಿಕೆ ಹಾಗೂ ಪೂರೈಕೆಗಳು ಬೆಲೆಗೆ ಹೇಗೆ ಸಂಬಂಧಪಟ್ಟಿವೆಯೆಂಬುದನ್ನು ನಾವು ಕಂಡುಕೊಂಡಿದ್ದೇವೆ. ನಾವು ಈಗ ಅವುಗಳ ಪರಸ್ಪರ ಸಂಬಂಧವನ್ನು ನೋಡೋಣ.


### ಮಾರುಕಟ್ಟೆಗಳು

ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎಂಬ ಪದಕ್ಕೆ ವಿಶಾಲ ಅರ್ಥವಿದೆ. ಜನಸಾಮಾನ್ಯನು ಮಾರುಕಟ್ಟೆಯೆಂದರೆ ಒಂದು ವಸ್ತುವನ್ನು ಮಾರುವವರು ಹಾಗೂ ಕೊಳ್ಳುವವರು ಕೂಡುವ ಜಾಗವೆಂದು ತಿಳಿಯುತ್ತಾನೆ. ಆದರೆ ಅರ್ಥಶಾಸ್ತ್ರದ ವಿಶೇಷ ಅರ್ಥದಲ್ಲಿ ಮಾರುಕಟ್ಟೆಯೆಂದರೆ ಮಾರುವವರು ಮತ್ತು ಕೊಳ್ಳುವವರು ಸಂಪರ್ಕದಲ್ಲಿ ಬರುವ ಒಂದು ವ್ಯವಸ್ಥೆಯಾಗಿದೆ. ಈ ಅರ್ಥದಲ್ಲಿ ಮಾರುವವರು ಹಾಗೂ ಕೊಳ್ಳುವವರು ಒಬ್ಬರನ್ನೊಬ್ಬರು ಭೇಟಿ ಮಾಡುವ ಅವಶ್ಯಕತೆಯಿಲ್ಲ. ಮಾರುವವರು ಹಾಗೂ ಕೊಳ್ಳುವವರು ದೂರವಾಣಿಯ

ಮೂಲಕ ಒಬ್ಬರನ್ನೊಬ್ಬರು ಸಂಪರ್ಕಿಸಿದರೂ ಅಲ್ಲಿ ವ್ಯಾಪಾರ ಕುದುರುತ್ತದೆ. ಆದ್ದರಿಂದ ಪ್ರತಿಯೊಂದು ಮಾರುಕಟ್ಟೆಗೆ ಒಂದು ಜಾಗೆ ಅಥವಾ ಕಟ್ಟಡ ಇರಬೇಕೆಂಬ ನಿಯಮವಿಲ್ಲ. ಆದರೆ ಒಂದು ವಸ್ತುವನ್ನು ಮಾರುವವರು ಹಾಗೂ ಕೊಳ್ಳುವವರು ಸಂಪರ್ಕದಲ್ಲಿ ಬರುವಂತೆ ವ್ಯವಸ್ಥೆ ಇದ್ದರೆ ಸಾಕು. ಅದು ಮಾರುಕಟ್ಟೆಯಾಗುತ್ತದೆ.

**ಸಮತೋಲನ ಬೆಲೆ**

ಬೇಡಿಕೆ ಮತ್ತು ಪೂರೈಕೆಗಳ ಪರಸ್ಪರ ಸಂಬಂಧದಿಂದ ನಿರ್ಧರಿತವಾದ ಬೆಲೆ ಸಮತೋಲನ ಬೆಲೆಯಾಗುತ್ತದೆ.




ಮೇಲಿನ ಆಕೃತಿಯಲ್ಲಿ 'ಡಡ' ಬೇಡಿಕೆಯ ರೇಖೆ, 'ಸಸ' ಪೂರೈಕೆಯ ರೇಖೆಗಳಾಗಿವೆ. ಬೆಲೆ ಹೆಚ್ಚಿಗೆ ಇದ್ದಾಗ ಬೇಡಿಕೆ ಕಡಿಮೆ ಇರುವದರಿಂದ ಬೇಡಿಕೆಯ ರೇಖೆ ಎಡದಿಂದ ಬಲಕ್ಕೆ ಇಳಿಯುತ್ತಾ ಹೋಗುತ್ತದೆ. ಪೂರೈಕೆಯ ರೇಖೆಯು ಎಡದಿಂದ ಬಲಕ್ಕೆ ಏರುತ್ತಾ ಹೋಗುತ್ತದೆ. ಯಾಕೆಂದರೆ ಬೆಲೆ ಹೆಚ್ಚಿದಂತೆ ಪೂರೈಕೆಯೂ ಹೆಚ್ಚುತ್ತದೆ. ಈ ಎರಡೂ ರೇಖೆಗಳು 'ಪ'ದಲ್ಲಿ ಛೇದಿಸುತ್ತವೆ.

ಇದನ್ನು ನಾವು ಸಮತೋಲನ ಸ್ಥಿತಿಯೆಂದು ಕರೆಯುತ್ತೇವೆ. 'ಅ ರ' ಸಮತೋಲನ ಬೆಲೆ ಮತ್ತು 'ಅ ಮ' ಸಮತೋಲನ ಬೇಡಿಕೆ ಹಾಗೂ ಪೂರೈಕೆಯಾಗಿದೆ. ಒಂದು ವೇಳೆ ಬೆಲೆಯು 'ಅ ರ' ಕ್ಕಿಂತ ಹೆಚ್ಚಾದರೆ ಬೇಡಿಕೆ ಕಡಿಮೆಯಾಗಿ ಪೂರೈಕೆ ಹೆಚ್ಚಾಗುವದರಿಂದ ಬೆಲೆ ಕಡಿಮೆಯಾಗಿ ಸಮತೋಲನ ಸ್ಥಿತಿ ಮತ್ತೆ 'ಪ'ದಲ್ಲಿ ಸ್ಥಾಪಿತಗೊಳ್ಳುತ್ತದೆ.

## *೪.೭ ಬೆಲೆ ನಿರ್ಧಾರದಲ್ಲಿ ಕಾಲಾವಧಿ ಮಹತ್ವ*

ಬೆಲೆಯನ್ನು ನಿರ್ಧರಿಸುವಲ್ಲಿ ಕಾಲಾವಧಿಯನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆಯೆಂದು ಪ್ರೊಫೆಸರ ಮಾರ್ಶಲರು ಹೇಳಿದರು. ಅವರು ಕಾಲಾವಧಿಯನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಿದರು. ಅವು ಯಾವುವೆಂದರೆ: ಮಾರುಕಟ್ಟೆ ಅವಧಿ, ಅಲ್ಪಾವಧಿ, ದೀರ್ಘಾವಧಿ ಮತ್ತು ಅತ್ಯಂತ ದೀರ್ಘಾವಧಿ. ಪೂರೈಕೆಯು ಈ ಕಾಲಾವಧಿಯನ್ನು ಅವಲಂಬಿಸಿರುವದರಿಂದ ವಸ್ತುಗಳ ಬೆಲೆಗಳು ಈ ಕಾಲಾವಧಿಗಳಲ್ಲಿ ಬೇರೆ ಬೇರೆ ರೀತಿಯಾಗಿ ನಿರ್ಧರಿಸಲ್ಪಡುತ್ತದೆಯೆಂದು ನಾವು ಕಂಡುಕೊಳ್ಳಬಹುದು. ನಾವಿಲ್ಲಿ ಮೊದಲಿನ ಮೂರು ಕಾಲಾವಧಿಗಳನ್ನು ಮಾತ್ರ ಚರ್ಚಿಸುತ್ತೇವೆ.

ಮಾರುಕಟ್ಟೆಯ ಕಾಲಾವಧಿಯಲ್ಲಿ ವಸ್ತುವಿನ ಪೂರೈಕೆ ಈಗಾಗಲೆ ಮಾರುಕಟ್ಟೆಗೆ ಬಂದ ವಸ್ತುಗಳ ಮೊತ್ತಕ್ಕಷ್ಟೇ ಸೀಮಿತವಾಗಿರುವದರಿಂದ ವಸ್ತುಗಳ ಪೂರೈಕೆಯನ್ನು ಈ ಅವಧಿಯಲ್ಲಿ ಹೆಚ್ಚಿಸಲು ಬರುವದಿಲ್ಲ. ವಸ್ತುಗಳ ಪೂರೈಕೆಯನ್ನು ಕಡಿಮೆ ಮಾಡಲೂ ಬರುವದಿಲ್ಲ. ಯಾಕೆಂದರೆ ಮಾರುಕಟ್ಟೆಗೆ ಬಂದ ವಸ್ತುವನ್ನು ಮಾರುವವರು ಅಂದು ಮಾರಿಕೊಂಡೇ ಹೋಗುತ್ತಾರೆಂದು ನಾವು ಭಾವಿಸುತ್ತೇವೆ. ಆದ್ದರಿಂದ ಮಾರುಕಟ್ಟೆ ಅವಧಿ ಕೇವಲ ಒಂದು ದಿನ ಅಥವಾ ಎರಡು ದಿನದ ಅವಧಿ ಎಂದು ನಾವು ಹೇಳಬಹುದು. ಇಂತಹ ಅವಧಿಯಲ್ಲಿ ವಸ್ತುವಿನ ಬೆಲೆ ಅದರ ಬೇಡಿಕೆಯನ್ನು ಅವಲಂಬಿಸಿರುತ್ತದೆ. ಪೂರೈಕೆ ಸ್ಥಿರವಾಗಿರುವದರಿಂದ ಆ ವಸ್ತುವಿನ ಬೆಲೆ ಅದರ ಬೇಡಿಕೆಯನ್ನು ಅವಲಂಬಿಸಿದೆ. ಬೇಡಿಕೆ ಹೆಚ್ಚಿಗಿದ್ದರೆ ಬೆಲೆ ಹೆಚ್ಚು. ಬೇಡಿಕೆ ಕಡಿಮೆ ಇದ್ದರೆ

ಬೆಲೆ ಕಡಿಮೆ. ಆದ್ದರಿಂದ ಮಾರುಕಟ್ಟೆ ಅವಧಿಯಲ್ಲಿ ಪೂರೈಕೆ ಬೆಲೆ ನಿರ್ಧರಿಸುವಲ್ಲಿ ಸಕ್ರಿಯ ಪಾತ್ರವಹಿಸಲಾರದು.

ಅಲ್ಪಾವಧಿ ಕಾಲದಲ್ಲಿ ಪೂರೈಕೆಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಲು ಸಾಧ್ಯವಾಗುತ್ತದೆ. ಅಲ್ಪಾವಧಿ ಕಾಲದಲ್ಲಿ ಸ್ಥಿರ ಬಂಡವಾಳವನ್ನು ಬದಲಾಯಿಸಲು ಬಾರದ್ದರಿಂದ ಉತ್ಪಾದಕನು ಅಸ್ಥಿರ ಸಾಧನಗಳನ್ನು ಬಳಸಿ ಹೆಚ್ಚಿನ ಉತ್ಪಾದನೆಯನ್ನು ಮಾಡುತ್ತಾನೆ. ಹೀಗಾಗಿ ಅಲ್ಪಾವಧಿ ಕಾಲದಲ್ಲಿ ಬೆಲೆಯು ಮಾರುಕಟ್ಟೆಯ ಅವಧಿಯ ಬೆಲೆಗಿಂತ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ. ದೀರ್ಘಾವಧಿ ಕಾಲದಲ್ಲಿ ಸ್ಥಿರ ಸಾಧನಗಳನ್ನೂ ಉತ್ಪಾದಕನು ಬದಲಾಯಿಸಲು ಬರುವದರಿಂದ ಉತ್ಪಾದನೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಸಾಧ್ಯವಾಗುವದರಿಂದ ಪೂರೈಕೆಯು ಹೆಚ್ಚು ಕಡಿಮೆಯಾಗುತ್ತದೆ. ಆದ್ದರಿಂದ ದೀರ್ಘಾವಧಿ ಕಾಲದಲ್ಲಿ ಬೆಲೆ ಅಲ್ಪಾವಧಿ ಕಾಲದ ಬೆಲೆಗಿಂತ ಕಡಿಮೆ ಯಾಗಿರುತ್ತದೆ. ಇದೂ ಅಲ್ಲದೆ ಒಂದು ಉತ್ಪಾದನಾ ಸಂಸ್ಥೆ ದೊಡ್ಡ ಪ್ರಮಾಣದ ಉತ್ಪಾದನೆಯ ಲಾಭಗಳನ್ನು ಪಡೆದರೆ ಬೆಲೆಯು ಇನ್ನೂ ಕಡಿಮೆಯಾಗುವ ಸಾಧ್ಯತೆ ಇದೆ.

ದೀರ್ಘಾವಧಿ ಕಾಲದಲ್ಲಿ ಕಂಡುಬರುವ ಬೆಲೆಗೆ ಸಾಮಾನ್ಯ ಬೆಲೆಯೆಂದು ಹೆಸರು. ಸಾಮಾನ್ಯ ಬೆಲೆಯೆಂಬುದು ಅನೇಕ ಪೇಟೆಗಳ ಸರಾಸರಿ ಬೆಲೆ ಅಲ್ಲ. ಅದು ಸ್ಥಿರವಾದ ಅಂಕಿಯೂ ಅಲ್ಲ. ಅದೊಂದು ಕಾಲ್ಪನಿಕ ಬೆಲೆ. ಮಾರುಕಟ್ಟೆಯ ಅವಧಿಯ ಬೆಲೆಯು ಸಾಮಾನ್ಯ ಬೆಲೆಗೆ ಸಮಾನವಾಗುವ ಪ್ರವೃತ್ತಿಯನ್ನು ಹೊಂದಿರುತ್ತದೆ.

### *೪.೮ ಬೇಡಿಕೆಯ ಬದಲಾವಣೆಯಿಂದಾಗುವ ಪರಿಣಾಮಗಳು*

ಅಲ್ಪಾವಧಿ ಕಾಲದಲ್ಲಿ ಬೇಡಿಕೆ ಹೆಚ್ಚಿದರೆ ಆ ವಸ್ತುವಿನ ಉತ್ಪಾದನೆ ಮಾಡಲು ಕಾಲಾವಕಾಶ ಕಡಿಮೆ ಇರುವದರಿಂದ ಆ ವಸ್ತುವಿನ ಬೆಲೆ ಹೆಚ್ಚುತ್ತದೆ. ಅದೇ ರೀತಿಯಾಗಿ ಆ ವಸ್ತುವಿನ ಬೇಡಿಕೆ ಕಡಿಮೆಯಾದರೆ ಅದರ ಬೆಲೆಯು ಕುಗ್ಗುತ್ತದೆ.

ಅದರಲ್ಲಿಯೂ ಆ ವಸ್ತು ಬಹಳ ದಿವಸಗಳವರೆಗೆ ಸಂಗ್ರಹಿಸಿ ಇಡಲು ಬರದಂತಹ ವಸ್ತುವಾಗಿದ್ದಲ್ಲಿ ಬೆಲೆ ಇಳಿಕೆ ತೀವ್ರವಾಗಿರುತ್ತದೆ.

ಆದರೆ ದೀರ್ಘಾವಧಿಯಲ್ಲಿ ಬೇಡಿಕೆಯ ಬದಲಾವಣೆಯು ಆ ವಸ್ತುವಿನ ಬೆಲೆಯ ಮೇಲೆ ಯಾವ ಪರಿಣಾಮ ಬೀರುತ್ತದೆಯೆಂದು ತಿಳಿಯಬೇಕಾದರೆ ನಾವು ಆ ವಸ್ತುವಿನ ಉತ್ಪಾದನೆಯಲ್ಲಿ ಏರಿಕೆಯ ಪ್ರತಿಫಲದಲ್ಲಿ ಉತ್ಪಾದಿಸುತ್ತಿದ್ದರೆ ಬೇಡಿಕೆ ಹೆಚ್ಚಿದಂತೆ ವಸ್ತುವಿನ ಉತ್ಪಾದನೆ ವಿಸ್ತರಿಸಿ ಪ್ರತಿವಸ್ತುವಿನ ಉತ್ಪಾದನಾ ವೆಚ್ಚ ಕಡಿಮೆಯಾಗುವದರಿಂದ ಆ ವಸ್ತುವಿನ ಬೆಲೆ ಕಡಿಮೆಯಾಗಬಹುದು. ಪೈಪೋಟಿಯ ಪರಿಸ್ಥಿತಿಯಲ್ಲಿ ವಸ್ತುವಿನ ಬೆಡಿಕೆ ಹೆಚ್ಚಾದಾಗ ಅಲ್ಪಾವಧಿಯಲ್ಲಿ ಅದರ ಬೆಲೆ ಹೆಚ್ಚಿದರೂ ದೀರ್ಘಾವಧಿಯಲ್ಲಿ ಅದರ ಬೆಲೆ ಕಡಿಮೆಯಾದಾಗ, ಆ ವಸ್ತುವನ್ನು ಏರಿಕೆಯ ಪ್ರತಿಫಲದಲ್ಲಿ ಉತ್ಪಾದಿಸುತ್ತಿದ್ದರೆ, ಆ ವಸ್ತುವಿನ ಉತ್ಪಾದನೆ ಕಡಿಮೆಯಾದಾಗ ಪ್ರತಿವಸ್ತುವಿನ ಉತ್ಪಾದನಾ ವೆಚ್ಚ ಹೆಚ್ಚುವದರಿಂದ ಬೆಲೆಯಲ್ಲಿ ಹೆಚ್ಚಳವಾಗುತ್ತದೆ. ಅಲ್ಪಾವಧಿಯಲ್ಲಿ ಬೇಡಿಕೆ ಕಡಿಮೆಯಾದಾಗ ಬೆಲೆ ಇಳಿಯುತ್ತದೆ. ಆದರೆ ದೀರ್ಘಾವಧಿಯಲ್ಲಿ ಅದರ ಬೆಲೆ ಹೆಚ್ಚುತ್ತದೆ.

ವಸ್ತುಗಳ ಉತ್ಪಾದನೆ ಇಳಿಕೆಯ ಪ್ರತಿಫಲದಲ್ಲಿ ಆಗುತ್ತಿದ್ದರೆ ಆ ವಸ್ತುವಿನ ಬೇಡಿಕೆ ದೀರ್ಘಕಾಲದಲ್ಲಿ ಹೆಚ್ಚಾದಾಗ ಅದರ ಉತ್ಪಾದನೆಯನ್ನು ಹೆಚ್ಚಿನ ವೆಚ್ಚದಿಂದ ಮಾತ್ರ ಮಾಡಲು ಸಾಧ್ಯವಾಗುವದರಿಂದ ಬೆಲೆಯಲ್ಲಿ ಹೆಚ್ಚಳವಾಗುತ್ತದೆ. ಅಲ್ಪಾವಧಿಯಲ್ಲಿಯೂ ಸಹಿತ ಬೇಡಿಕೆ ಹೆಚ್ಚಾದಾಗ ವಸ್ತುವಿನ ಬೆಲೆ ಏರುತ್ತದೆ. ವಸ್ತುವಿನ ಬೇಡಿಕೆ ಕಡಿಮೆಯಾದರೆ ಆ ವಸ್ತುವಿನ ಉತ್ಪಾದನಾ ವೆಚ್ಚ ಇಳಿಕೆಯ ಪ್ರತಿಫಲ ನಿಯಮದ ಪ್ರಕಾರ ಅಲ್ಪಾವಧಿಯಲ್ಲಿ ಕಡಿಮೆಯಾಗುವದರಿಂದ ಅದರ ಬೆಲೆ ಕಡಿಮೆಯಾಗುತ್ತದೆ. ದೀರ್ಘಾವಧಿಯಲ್ಲಿಯೂ ಕಡಿಮೆ ಬೆಲೆ ಮುಂದುವರಿಯುತ್ತದೆ.

ಆದ್ದರಿಂದ ಬೇಡಿಕೆ ಹೆಚ್ಚಾದಾಗ ಒಂದು ವಸ್ತುವಿನ ಬೆಲೆ ತಕ್ಷಣ ಏರಿದರೂ ಸಹಿತ ದೀರ್ಘಕಾಲದಲ್ಲಿ ಅದರ ಉತ್ಪಾದನೆ ಏರಿಕೆಯ ಪ್ರತಿಫಲ ನಿಯಮದ

ಪ್ರಕಾರ ಆಗುತ್ತಿದ್ದರೆ ಮತ್ತು ವಸ್ತುವಿನ ಉತ್ಪಾದನೆಯಲ್ಲಿ ಪೈಪೋಟಿ ಇದ್ದರೆ ಆ ವಸ್ತುವಿನ ಬೆಲೆ ಕಡಿಮೆಯಾಗುತ್ತದೆ. ಅದೇ ರೀತಿಯಾಗಿ ವಸ್ತುವಿನ ಬೇಡಿಕೆಯಲ್ಲಿ ಇಳಿಕೆಯಾದಾಗ ತಕ್ಷಣ ವಸ್ತುವಿನ ಬೆಲೆ ಕಡಿಮೆಯಾದರೂ ದೀರ್ಘಕಾಲದಲ್ಲಿ ಏರಿಕೆಯ ಪ್ರತಿಫಲ ನಿಯಮದ ಪ್ರಕಾರ ಅದರ ಬೆಲೆ ಏರುತ್ತದೆ.

### ೪.೯ ಏಕಸ್ವಾಮ್ಯತೆಯ ಬೆಲೆ

ನಾವು ಇಲ್ಲಿಯವರೆಗೆ ವಸ್ತುವಿನ ಉತ್ಪಾದನೆಯಲ್ಲಿ ಪೈಪೋಟಿ ಇದೆಯೆಂದು ಭಾವಿಸಿ ವಿಶ್ಲೇಷಣೆಯನ್ನು ಮಾಡಿದ್ದೇವೆ. ಆದರೆ ಒಂದು ವಸ್ತುವಿನ ಉತ್ಪಾದನೆಯಲ್ಲಿ ಏಕಸ್ವಾಮ್ಯತೆ ಇರಬಹುದು. ಹಾಗಿದ್ದಾಗ ಆ ವಸ್ತುವನ್ನು ಉತ್ಪಾದಿಸುವ ಸಂಸ್ಥೆ ಒಂದೇ ಇರುತ್ತದೆ ಮತ್ತು ಆ ವಸ್ತುವಿಗೆ ಸಮೀಪದ ಬದಲಿ ವಸ್ತು ಮಾರುಕಟ್ಟೆಯಲ್ಲಿ ಲಭ್ಯವಿರುವದಿಲ್ಲ.

ಏಕಸ್ವಾಮ್ಯ ಮಾರುಕಟ್ಟೆಯಲ್ಲಿ ಒಂದು ವಸ್ತುವನ್ನು ಉತ್ಪಾದಿಸುವವನು ಒಬ್ಬನೇ ಇದ್ದರೂ ಅವನಿಗೆ ಮಿತಿ ಇಲ್ಲದ ಅಧಿಕಾರ ಇರಲಾರದು. ಅವನು ತನ್ನ ವಸ್ತುವಿನ ಬೆಲೆಯನ್ನು ನಿರ್ಧರಿಸಿದರೆ ಆ ಬೆಲೆಗೆ ಅವನು ಎಷ್ಟು ಪ್ರಮಾಣದಲ್ಲಿ ಆ ವಸ್ತುವನ್ನು ಮಾರಬಲ್ಲನೆಂಬುದನ್ನು ಮಾರುಕಟ್ಟೆ ನಿರ್ಧರಿಸುತ್ತದೆ. ಅವನು ತನ್ನ ಪೂರೈಕೆಯನ್ನು ನಿಯಂತ್ರಿಸಿ ತಾನು ಎಷ್ಟು ಪ್ರಮಾಣದಲ್ಲಿ ವಸ್ತುವನ್ನು ಉತ್ಪಾದಿಸ ಬೇಕೆಂದು ನಿರ್ಧಾರ ತೆಗೆದುಕೊಂಡರೆ ಆ ವಸ್ತುವಿನ ಬೆಲೆಯನ್ನು ಮಾರುಕಟ್ಟೆಯು ನಿರ್ಧರಿಸುತ್ತದೆ. ಆದ್ದರಿಂದ ಏಕಸ್ವಾಮ್ಯದಲ್ಲಿ ಒಬ್ಬ ಉತ್ಪಾದಕನು ತನ್ನ ವಸ್ತುವಿನ ಬೆಲೆ ಹಾಗೂ ಪೂರೈಕೆ ಎರಡನ್ನೂ ನಿಯಂತ್ರಿಸಲು ಸಾಧ್ಯವಿಲ್ಲ. ಅವನ ಉದ್ದೇಶ ಹೆಚ್ಚಿನ ಲಾಭವನ್ನು ಗಳಿಸುವದು ಆಗಿರುತ್ತದೆ. ಆದ್ದರಿಂದ ಅವನು ಒಂದೇ ಒಂದು ವಸ್ತುವನ್ನು ಉತ್ಪಾದನೆ ಮಾಡಿ ಒಂದು ಸಾವಿರ ರೂಪಾಯಿ ಲಾಭಗಳಿಸುವದಕ್ಕಿಂತ ಒಂದು ನೂರು ಪ್ರಮಾಣದಲ್ಲಿ ಆ ವಸ್ತುವನ್ನು ಉತ್ಪಾದಿಸಿ ಹತ್ತು ಸಾವಿರ ರೂಪಾಯಿ ಲಾಭಗಳಿಸುವದು ಉತ್ತಮವೆನಿಸುತ್ತದೆ. ಅವನಿಗೆ ಗರಿಷ್ಠ ಲಾಭ ಕೊಡುವ

ಬೆಲೆಯನ್ನು ಅವನು ನಿಗದಿಪಡಿಸಲು ಯತ್ನಿಸುತ್ತಾನೆ. ನಿಜವಾಗಿ ಅವನು ಹಾಕುವ ಬೆಲೆ ಇದಕ್ಕಿಂತ ಸ್ವಲ್ಪಮಟ್ಟಿಗೆ ಹೆಚ್ಚಿಗೆ ಇರಬಹುದು ಅಥವಾ ಕಡಿಮೆ ಇರಬಹುದು. ಯಾಕೆಂದರೆ ಏಕಸ್ವಾಮ್ಯವಿದ್ದ ಉತ್ಪಾದಕನು ಮೇಲಿಂದ ಮೇಲೆ ಬೆಲೆಗಳಲ್ಲಿ ಏರಿಳಿತಗಳನ್ನು ಮಾಡಿ ತನಗೆ ಗರಿಷ್ಠಲಾಭ ಕೊಡುವ ಬೆಲೆ ಯಾವುದೆಂದು ಕಂಡುಹಿಡಿಯುವದು ಕಠಿಣದ ಕೆಲಸ. ಮೇಲಿಂದ ಮೇಲೆ ಬೆಲೆ ಬದಲಿಸುವದು ತನ್ನ ವ್ಯಾಪಾರಕ್ಕೆ ಒಳ್ಳೆಯದಲ್ಲ. ಆದ್ದರಿಂದ ಅವನು ನಿಗದಿಪಡಿಸಿದ ಬೆಲೆ ಅವನು ನಿಜವಾಗಿ ನಿಗದಿಪಡಿಸಬೇಕೆಂದ ಬೆಲೆಗಿಂತ ಭಿನ್ನವಾಗಿರಬಹುದು. ಆದರೆ ಅವನು ಬೆಲೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ ತನ್ನ ವಸ್ತುವಿಗೆ ಬೇಡಿಕೆ ಕಡಿಮೆಯಾಗಬಹುದೆಂಬ ಭಯವಿರುತ್ತದೆ. ಮೇಲಾಗಿ ಏಕಸ್ವಾಮ್ಯ ಶಕ್ತಿಯನ್ನು ಅವನು ದುರುಪಯೋಗಪಡಿಸಿಕೊಂಡರೆ ಸರಕಾರ ಹಸ್ತಕ್ಷೇಪ ಮಾಡಬಹುದೆಂಬ ಭೀತಿಯೂ ಅವನಿಗೆ ಇರುತ್ತದೆ.

ಏಕಸ್ವಾಮ್ಯ ಬೆಲೆಯು ಉತ್ಪಾದನಾ ಪರಿಸ್ಥಿತಿಯನ್ನೂ ಅವಲಂಬಿಸಿರುತ್ತದೆ. ಉತ್ಪಾದನೆಯು ಏರಿಕೆಯ ಪ್ರತಿಫಲದಲ್ಲಿ ಆಗುತ್ತಿದ್ದರೆ ಅವನು ಹೆಚ್ಚಿನ ಪ್ರಮಾಣದಲ್ಲಿ ವಸ್ತುವನ್ನು ಉತ್ಪಾದಿಸಿದಂತೆ ವಸ್ತುವಿನ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅವನು ವಸ್ತುವಿನ ಬೆಲೆಯನ್ನು ಸ್ವಲ್ಪಮಟ್ಟಿಗೆ ಇಳಿಸಿ ಹೆಚ್ಚಿನ ವಸ್ತುಗಳನ್ನು ಮಾರಿ ಲಾಭ ಹೆಚ್ಚಿಸಿಕೊಳ್ಳುತ್ತಾನೆ.

ಏಕಸ್ವಾಮ್ಯದಲ್ಲಿ ಉತ್ಪಾದಕನು ತನ್ನ ವಸ್ತುವಿಗೆ ಬೇರೆ ಬೇರೆ ಜನರಿಗೆ ಬೇರೆ ಬೇರೆ ಬೆಲೆಯನ್ನು ನಿಗದಿಪಡಿಸಬಹುದು. ಇದನ್ನು ಬೆಲೆಯ ತಾರತಮ್ಯವೆಂದು ಕರೆಯಲಾಗುತ್ತದೆ. ಒಬ್ಬ ಡಾಕ್ಟರು ಬಡ ರೋಗಿಗಳಿಗೆ ಕಡಿಮೆ ಚಾರ್ಜು ಮತ್ತು ಶ್ರೀಮಂತ ರೋಗಿಗಳಿಗೆ ಹೆಚ್ಚಿನ ಚಾರ್ಜು ಮಾಡಬಹುದು. ಏಕಸ್ವಾಮ್ಯವಿದ್ದ ವ್ಯಕ್ತಿ ಸೇವೆಗಳನ್ನು ಮಾರುವಾಗ ಈ ರೀತಿ ಮಾಡುವದು ಸುಲಭ. ಆದರೆ ಅವನು ವಸ್ತುಗಳನ್ನು ಮಾರುವಾಗ ಬೆಲೆಯಲ್ಲಿ ತಾರತಮ್ಯ ಮಾಡಿದರೆ ಕಡಿಮೆ ಬೆಲೆಗೆ ವಸ್ತುವನ್ನು ಕೊಂಡ ಗಿರಾಕಿ ಮತ್ತೊಬ್ಬರಿಗೆ ಆ ವಸ್ತುವನ್ನು ಮಾರಿ ಲಾಭ ಪಡೆಯದಂತೆ ಎಚ್ಚರವಹಿಸಬೇಕಾಗುತ್ತದೆ. ಅಥವಾ

ಏಕಸ್ವಾಮ್ಯ ಹೊಂದಿದ ವ್ಯಕ್ತಿ ಎರಡು ಬೇರೆ ಬೇರೆ ಮಾರುಕಟ್ಟೆಗಳಲ್ಲಿ ವಸ್ತುಗಳನ್ನು ಮಾರುತ್ತಿದ್ದರೆ ಅಲ್ಲಿ ಬೇರೆ ಬೇರೆ ಬೆಲೆಗಳನ್ನು ನಿರ್ಧರಿಸಿ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾನೆ. ಕೆಲವೊಂದು ಸಂಸ್ಥೆಗಳು ತಾವು ಉತ್ಪಾದಿಸುವ ದೇಶದಲ್ಲಿ ವಸ್ತುಗಳ ಬೆಲೆಯನ್ನು ಏರಿಸಿ ಮತ್ತೊಂದು ದೇಶದಲ್ಲಿ ಆ ವಸ್ತುವನ್ನು ಕಡಿಮೆ ಬೆಲೆಗೆ ಮಾರುತ್ತಿರಬಹುದು.

### *೪.೧೦ ಸಂಯುಕ್ತ ಬೇಡಿಕೆ ಮತ್ತು ಸಂಯುಕ್ತ ಪೂರೈಕೆ*

ಒಂದು ಬಯಕೆಯನ್ನು ಪೂರೈಸಲು ಒಂದಕ್ಕಿಂತ ಹೆಚ್ಚು ವಸ್ತುಗಳ ಅವಶ್ಯಕತೆ ಇದ್ದಾಗ ಸಂಯುಕ್ತ ಬೇಡಿಕೆ ಉಂಟಾಗುತ್ತದೆ. ಚಹ ಕುಡಿಯಬೇಕಾದರೆ ನಮಗೆ ಹಾಲು ಸಕ್ಕರೆ ಮತ್ತು ಚಹದ ಪುಡಿಯ ಅವಶ್ಯಕತೆ ಇದೆ. ಸಂಯುಕ್ತ ಬೇಡಿಕೆಯಲ್ಲಿದ್ದ ವಸ್ತುಗಳ ಬೆಲೆಯನ್ನು ಸುಲಭವಾಗಿ ನಿರ್ಧರಿಸಲು ಬರುವದಿಲ್ಲ. ಯಾಕೆಂದರೆ ಅವುಗಳಿಗೆ ಪ್ರತ್ಯೇಕವಾದ ಬೇಡಿಕೆಯ ಪಟ್ಟಿಯನ್ನು ತಯಾರಿಸಲು ಬರುವದಿಲ್ಲ. ಇಂತಹ ಸಂದರ್ಭದಲ್ಲಿ ಗ್ರಾಹಕರಿಗೆ ಅಂತಿಮವಾಗಿ ಉಪಯೋಗಿಸುವ ವಸ್ತುವಿನ ಅಂಚಿನ ಉಪಯುಕ್ತತೆ ಗೊತ್ತಿರುತ್ತದೆ. ಉದಾ. ಬಳಕೆದಾರನಿಗೆ ಚಹದ ಅಂಚಿನ ತೃಪ್ತಿ ಗೊತ್ತಿರುತ್ತದೆ. ಆದರೆ ಅದರಲ್ಲಿ ಅಡಕವಾದ ಚಹದ ಪುಡಿ, ಸಕ್ಕರೆ, ಹಾಲುಗಳ ಪ್ರತ್ಯೇಕ ಅಂಚಿನ ತೃಪ್ತಿಗುಣ ಕಂಡು ಹಿಡಿಯಲು ಕಠಿಣವಾಗುತ್ತದೆ. ಒಂದು ಕಪ್ಪು ಚಹ ತಯಾರಿಸಬೇಕಾದರೆ ಅದಕ್ಕೆ ತಗಲುವ ವೆಚ್ಚವನ್ನು ಸಂಯುಕ್ತ ಬೇಡಿಕೆಯಲ್ಲಿದ್ದ ವಸ್ತುಗಳ ಮೇಲೆ ಮಾಡಬೇಕು. ಆದರೆ ಈ ಒಟ್ಟು ವೆಚ್ಚವು ಅವನಿಗೆ ಒಂದು ಕಪ್ ಚಹದಿಂದ ಬರುವ ತೃಪ್ತಿಗೆ ಸರಿಯಾಗಿರಬೇಕು. ಚಹದ ತಯಾರಿಕೆಗೆ ಬೇಕಾಗುವ ಚಹದ ಪುಡಿ, ಸಕ್ಕರೆ, ಹಾಲುಗಳು ಒಂದಕ್ಕೊಂದು ಪೂರಕವಾಗಿರುವದರಿಂದ ಚಹಕ್ಕೆ ಬೇಡಿಕೆ ಏರಿದಾಗ ಈ ಮೂರು ವಸ್ತುಗಳಿಗೂ ಬೇಡಿಕೆಯೇರುವದು. ಸಂಯುಕ್ತ ಪೂರೈಕೆಯಲ್ಲಿ ಒಂದಕ್ಕಿಂತ ಹೆಚ್ಚು ವಸ್ತುಗಳು ಒಂದೇ ಮೂಲದಿಂದ ಉತ್ಪಾದಿತವಾಗುತ್ತವೆ. ಕುರಿಸಾಗಾಣಿಕೆಯಲ್ಲಿ ಕುರಿಮಾಂಸದ ಜೊತೆಗೆ ಉಣ್ಣೆಯೂ

ಪೂರೈಕೆಯಾಗುತ್ತದೆ. ಸಂಯುಕ್ತ ಪೂರೈಕೆಯಲ್ಲಿದ್ದ ಎರಡು ವಸ್ತುಗಳ ಅಂಚಿನ ವೆಚ್ಚವನ್ನು ಪ್ರತ್ಯೇಕವಾಗಿ ಕಂಡುಹಿಡಿಯುವದು ಕಷ್ಟ. ಇಂತಹ ಸಂದರ್ಭದಲ್ಲಿ ಒಂದು ವಸ್ತುವನ್ನು ಮುಖ್ಯವಸ್ತುವೆಂದು ಪರಿಗಣಿಸ ಬೇಕಾಗುತ್ತದೆ. ಉಳಿದ ವಸ್ತು ಉಪವಸ್ತುವಾಗುತ್ತದೆ. ಕುರಿಯ ಮಾಂಸ ಮುಖ್ಯವಾದರೆ ಕುರಿಯ ಉಣ್ಣೆ ಉಪವಸ್ತುವಾಗುತ್ತದೆ. ಈ ಉಪವಸ್ತುವಿನ ಬೆಲೆಯನ್ನು ಪೇಟೆಯಲ್ಲಿ ಅದಕ್ಕಿದ್ದ ಬೇಡಿಕೆಯ ಪ್ರಕಾರ ನಿರ್ಧರಿಸಿ ಒಟ್ಟು ವೆಚ್ಚದಲ್ಲಿ ಈ ಉಪವಸ್ತುವಿನಿಂದ ಬಂದ ಆದಾಯವನ್ನು ವಜಾಮಾಡಿ ಉಳಿದದ್ದನ್ನು ಮುಖ್ಯವಸ್ತುವಿನ ವೆಚ್ಚವೆಂದೆಣಿಸಿ ಬೆಲೆಯನ್ನು ನಿರ್ಧರಿಸಲಾಗುತ್ತದೆ. ಸಂಯುಕ್ತ ಪೂರೈಕೆಯಲ್ಲಿರುವ ಎರಡು ವಸ್ತುಗಳ ಪೈಕಿ ಒಂದು ವಸ್ತುವಿನ ಬೇಡಿಕೆಯಲ್ಲಿ ಹೆಚ್ಚುಕಡಿಮೆಯಾದರೆ ಅದರಿಂದ ಇನ್ನೊಂದು ವಸ್ತುವಿನ ಬೆಲೆಯ ಮೇಲೆ ಪರಿಣಾಮವಾಗುತ್ತದೆ. ಕುರಿಯ ಮಾಂಸಕ್ಕೆ ಬೇಡಿಕೆ ಹೆಚ್ಚಿದಲ್ಲಿ ಅದರ ಬೆಲೆ ಏರಿ ಅದರ ಉತ್ಪಾದನೆ ಹೆಚ್ಚುತ್ತದೆ. ಮಾಂಸದ ಉತ್ಪಾದನೆ ಹೆಚ್ಚಿಸಬೇಕಾದರೆ ಕುರಿಯ ಉಣ್ಣೆಯ ಉತ್ಪಾದನೆಯೂ ಹೆಚ್ಚುತ್ತದೆ. ಹೀಗಾಗಿ ಕುರಿಯ ಉಣ್ಣೆಯ ಬೆಲೆ ಕಡಿಮೆಯಾಗುವ ಸಂಭವವಿರುತ್ತದೆ.

●

# ೫. ವಿತರಣಾ ಸಮಸ್ಯೆ

ತಮ್ಮ ಶ್ರಮದ ಉತ್ಪಾದನೆಯನ್ನು ತಾವೇ ಉಪಭೋಗಿಸುವ ತೀರ ಹಿಂದುಳಿದ ಸಮಾಜದಲ್ಲಿ ವಿತರಣೆಯ ಸಮಸ್ಯೆ ಉದ್ಭವಿಸಲಾರದು. ಅಂತಹ ಸಮಾಜದಲ್ಲಿ ಶ್ರಮಿಕರು, ಬಂಡವಾಳದಾರರು, ಭೂಮಾಲಿಕರೆಂಬ ವರ್ಗಗಳು ಇರುವದಿಲ್ಲ. ಅಲ್ಲಿ ಶ್ರಮ ವಿಭಜನೆ ಇರುವದಿಲ್ಲ. ವಸ್ತುಗಳ ಉತ್ಪಾದನೆ ಮತ್ತು ಅವುಗಳ ಬಳಕೆಯ ನಡುವೆ ಕಾಯುವ ಅವಧಿಯೂ ಹೆಚ್ಚಿಗೆ ಇರುವದಿಲ್ಲ.

ಸಾಮಾಜ ಆರ್ಥಿಕವಾಗಿ ಮುಂದುವರಿದಂತೆ ವಸ್ತುಗಳ ಉತ್ಪಾದನೆಯಲ್ಲಿ ಶ್ರಮವಿಭಜನೆ ಬರುತ್ತದೆ. ಐದು ಜನರು ಕೂಡಿ ಮೀನು ಹಿಡಿಯಲು ಸಮುದ್ರದಲ್ಲಿ ಹೋಗುತ್ತಾರೆ. ಒಬ್ಬ ಮನುಷ್ಯ ದಂಡೆಯ ಮೇಲಿದ್ದು ಆ ಮೀನುಗಳನ್ನು ಮಾರುತ್ತಾನೆಂದು ನಾವು ಭಾವಿಸೋಣ. ಬಂದ ಉತ್ಪನ್ನವನ್ನು ಈ ಆರು ಜನರಲ್ಲಿ ಹೇಗೆ ಹಂಚುವದು ಎಂಬ ಸಮಸ್ಯೆ ಇಲ್ಲಿ ಬರುತ್ತದೆ. ಎಲ್ಲ ಜನರು ಕೂಡಿಯೇ ನಾವೆಯನ್ನು ಕೊಂಡಿದ್ದರೆ ಈ ಸಮಸ್ಯೆ ಸ್ವಲ್ಪ ಸುಲಭವಾಗುತ್ತದೆ. ಒಂದು ವೇಳೆ ಆ ನಾವೆ ಏಳನೆಯ ಒಬ್ಬ ವ್ಯಕ್ತಿಯದಾಗಿದ್ದರೆ ಈ ಸಮಸ್ಯೆ ಇನ್ನಷ್ಟು ಜಟಿಲವಾಗುತ್ತದೆ. ನಾವೆಯ ಮಾಲೀಕನಿಗೆ ಒಟ್ಟು ಉತ್ಪನ್ನದ ಕೆಲವೊಂದು ಭಾಗವನ್ನು ಕೊಟ್ಟು ಇನ್ನುಳಿದ ಉತ್ಪನ್ನವನ್ನು ಈ ಆರು ಜನರು ತಮ್ಮಲ್ಲಿ ಹಂಚಿಕೊಳ್ಳಬೇಕಾಗುತ್ತದೆ.

ಅಭಿವೃದ್ಧಿ ಹೊಂದಿದ ಈಗಿನ ಆರ್ಥಿಕ ವ್ಯವಸ್ಥೆಯನ್ನು ನಾವು ತೆಗೆದು ಕೊಂಡರೆ ಈ ವಿತರಣಾ ಸಮಸ್ಯೆ ಇನ್ನಷ್ಟು ಜಟಿಲವಾಗುತ್ತದೆ. ಉತ್ಪಾದಕರು, ವ್ಯಾಪಾರಿಗಳು, ಭೂಮಾಲಿಕರು, ಬೇಸಾಯಗಾರರು ಬಂಡವಾಳ ಹೂಡುವವರು

ಹೀಗೆ ಎಲ್ಲರೂ ಒಟ್ಟು ವಸ್ತುಗಳ ಉತ್ಪಾದನೆಯಲ್ಲಿ ಕೆಲವೊಂದು ಭಾಗಕ್ಕೆ ಹಕ್ಕುದಾರರಾಗಿರುತ್ತಾರೆ.

ನಾಲ್ಕು ಉತ್ಪಾದನಾ ಘಟಕಗಳಾದ ಶ್ರಮ, ಭೂಮಿ, ಬಂಡವಾಳ ಮತ್ತು ಸಂಘಟನೆಗಳಿಗೆ ಪ್ರತಿಫಲ ಕೂಲಿ, ಗೇಣಿ, ಬಡ್ಡಿ ಮತ್ತು ಲಾಭಗಳಾಗಿವೆ. ವಿತರಣೆಯ ಸಮಸ್ಯೆಯನ್ನು ಈ ಉತ್ಪಾದನಾ ಘಟಕಗಳ ಆಧಾರದ ಮೇಲಿಂದ ನಿರ್ಧರಿಸುವದು ಸುಲಭವಾಗುತ್ತದೆ. ನಾವು ಮೊದಲು ಉತ್ಪಾದನಾ ಘಟಕಗಳಲ್ಲಿ ಒಂದಾದ ಶ್ರಮದ ಪ್ರತಿಫಲ ಕೂಲಿಯನ್ನು ಹೇಗೆ ನಿರ್ಧರಿಸಲಾಗುತ್ತದೆ ಎಂಬುದನ್ನು ನೋಡೋಣ.

### *೫.೧ ತುಲನಾತ್ಮಕ ಕೂಲಿ*

ಒಂದು ಉದ್ದಿಮೆಯಲ್ಲಿ ಕೂಲಿಯ ದರ ಮತ್ತೊಂದು ಉದ್ದಿಮೆಯಲ್ಲಿಯ ಕೂಲಿ ದರಕ್ಕಿಂತ ಹೆಚ್ಚಿಗೆ ಇರಬಹುದು. ಇದಕ್ಕೆ ಅನೇಕ ಕಾರಣಗಳಿವೆ.

೧) ಉತ್ಪತ್ತಿ ಹೆಚ್ಚಿಗಿದ್ದ ಶ್ರಮಿಕ ಹೆಚ್ಚಿನ ಪ್ರತಿಫಲ ಪಡೆಯುತ್ತಾನೆ. ಕಾರ್ಯಕುಶಲತೆ ಹೆಚ್ಚಿಗಿದ್ದ ಶ್ರಮಿಕ ಹೆಚ್ಚಿನ ಉತ್ಪತ್ತಿ ಮಾಡುತ್ತಾನೆ. ಕೆಲವೊಂದು ಉದ್ದಿಮೆಗಳಲ್ಲಿ ಕಾರ್ಯಕುಶಲತೆ ಹೆಚ್ಚಿಗಿದ್ದ ಶ್ರಮಿಕರು ಬೇಕಾಗುತ್ತಾರೆ. ಹೀಗಾಗಿ ಅವರ ಕೂಲಿಯ ದರ ಹೆಚ್ಚಿಗೆ ಇರಬೇಕಾಗುತ್ತದೆ.

೨) ಶ್ರಮದ ಪೂರೈಕೆಯೂ ಕೂಲಿಯ ದರ ನಿರ್ಧರಿಸುವಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ. ಕೆಲವೊಂದು ಉದ್ದಿಮೆಗಳಲ್ಲಿ ಶ್ರಮಿಕರ ಪೂರೈಕೆ ಹೆಚ್ಚಿಗೆ ಇದ್ದರೆ ಕೂಲಿಯ ದರ ಅಲ್ಲಿ ಕಡಿಮೆಯಾಗುತ್ತದೆ.

೩) ಕೆಲವೊಂದು ಉದ್ದಿಮೆಗಳು ಅಷ್ಟು ಆಕರ್ಷಕವಾಗಿರುವದಿಲ್ಲ. ಸಾಗರದಾಳದಲ್ಲಿ ಮುತ್ತನ್ನು ಆರಿಸುವದು ಗಂಡಾಂತರಕಾರಿ ಕೆಲಸ ವಾಗಿರುವದರಿಂದ ಹೆಚ್ಚಿನ ಜನರು ಅಂತಹ ಉದ್ಯೋಗದಲ್ಲಿ ದುಡಿಯಲು ಬಯಸುವದಿಲ್ಲ. ಹೀಗಾಗಿ ಕೂಲಿಯ ದರ ಅಲ್ಲಿ ಹೆಚ್ಚಿಗೆ ಇರುತ್ತದೆ.

೪) ಕಾರ್ಮಿಕ ಸಂಘಟನೆಗಳು ಇಲ್ಲದ ಉದ್ದಿಮೆಗಳಲ್ಲಿ ಕೂಲಿಯ ದರ ಕಡಿಮೆ ಇರುತ್ತದೆ.

೫) ಬಹಳ ದಿನಗಳವರೆಗೆ ನಡೆದುಕೊಂಡು ಬಂದ ಪದ್ಧತಿಗಳೂ ಕೂಲಿಯ ದರ ವ್ಯತ್ಯಯಕ್ಕೆ ಕಾರಣವಾಗಬಹುದು. ಒಂದು ಜೀವನ ಮಟ್ಟವನ್ನು ಜನರು ರೂಢಿಸಿಕೊಂಡರೆ ಆ ಜೀವನ ಮಟ್ಟವನ್ನು ಕಾಯ್ದುಕೊಳ್ಳುವಷ್ಟು ಕೂಲಿಯನ್ನು ಅವರು ಪಡೆದುಕೊಳ್ಳಬೇಕಾಗುತ್ತದೆ.

೬) ಎಷ್ಟೋ ಪ್ರಸಂಗಗಳಲ್ಲಿ ಶ್ರಮಿಕರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಅನೇಕ ಕಾರಣಗಳಿಂದಾಗಿ ಸಾಧ್ಯವಾಗುವದಿಲ್ಲ. ಕಾರ್ಮಿಕರು ತಮ್ಮ ಊರು, ಬಂಧು ಬಳಗವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಲು ಇಚ್ಛೆ ಪಡುವದಿಲ್ಲ. ಹೀಗಾಗಿ ಬೇರೆ ಸ್ಥಳದಲ್ಲಿ ಹೆಚ್ಚು ಕೂಲಿ ದರ ದೊರೆಯುವ ಸಾಧ್ಯತೆ ಇದ್ದರೂ ಅವರು ತಮ್ಮ ಮೊದಲಿನ ಉದ್ಯೋಗದಲ್ಲಿಯೇ ಮುಂದುವರಿಯುತ್ತಾರೆ.

## *೫.೨ ಕೂಲಿ ಸಿದ್ಧಾಂತಗಳು*

### ಜೀವನಾಧಾರಿತ ಕೂಲಿ ಸಿದ್ಧಾಂತ

ಶ್ರಮವನ್ನು ಪೂರೈಸುವ ವೆಚ್ಚದ ಮೇಲಿಂದ ಅದರ ಬೆಲೆಯನ್ನು ನಿರ್ಧರಿಸಲಾಗುತ್ತದೆಯೆಂದು ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರಾದ ಆಡಮ್ ಸ್ಮಿಥ, ರಿಕಾರ್ಡೊ ಮತ್ತು ಮಾಲ್ಥಸರು ಪ್ರತಿಪಾದಿಸಿದರು. ಶ್ರಮವನ್ನು ಪೂರೈಸುವ ವೆಚ್ಚವೆಂದರೆ ಶ್ರಮಿಕರಿಗೆ ಮತ್ತು ಅವನ ಕುಟುಂಬಕ್ಕೆ ಬೇಕಾಗುವ ಆಹಾರ, ಬಟ್ಟೆ ಮತ್ತು ವಸತಿಯನ್ನು ಒದಗಿಸುವ ವೆಚ್ಚ. ಇದಕ್ಕಿಂತ ಹೆಚ್ಚಿನ ಕೂಲಿ ದರವನ್ನು ಅವರಿಗೆ ಕೊಟ್ಟರೆ ಜನಸಂಖ್ಯೆ ಹೆಚ್ಚಿಗೆ ಆಗುವದರಿಂದ ಶ್ರಮಿಕರ ಪೂರೈಕೆ ಹೆಚ್ಚಿಗೆ ಆಗಿ ಕೂಲಿ ದರ ಮೊದಲಿನ ಮಟ್ಟಕ್ಕೆ ಬರುತ್ತದೆಯೆಂದು ಅವರು ಭಾವಿಸಿದ್ದರು. ಅವರ ಪ್ರಕಾರ ಕೂಲಿಯ ದರ ತೀರ ಕಡಿಮೆಯಾದಾಗ ಜನಸಂಖ್ಯೆ ಕಡಿಮೆಯಾಗಿ ಶ್ರಮಿಕರ ಸಂಖ್ಯೆ ಕಡಿಮೆಯಾಗುವದರಿಂದ ಕೂಲಿಯ ದರ ಮತ್ತೆ ಏರುತ್ತದೆ. ಆದರೆ ಈ ತತ್ವವನ್ನು ಈಗ ಯಾರೂ ಒಪ್ಪುವದಿಲ್ಲ.

### ಕೂಲಿಯ ನಿಧಿಯ ಸಿದ್ಧಾಂತ

ಈ ಸಿದ್ಧಾಂತದ ಪ್ರಕಾರ ಶ್ರಮಿಕರಿಗೆ ಕೂಲಿ ಕೊಡಲು ಬಂಡವಾಳದಲ್ಲಿಯ ಒಂದು ಭಾಗವನ್ನು ತೆಗೆದಿಡಲಾಗುತ್ತದೆ. ಇದನ್ನೇ ಕೂಲಿಯ ನಿಧಿಯೆಂದು ಕರೆಯಲಾಗುತ್ತದೆ. ಇದು ಒಂದು ಅವಧಿಯಲ್ಲಿ ಸ್ಥಿರವಾಗಿರುತ್ತದೆ. ಅದೇ ರೀತಿಯಾಗಿ ಆ ಅವಧಿಯಲ್ಲಿ ಉದ್ಯೋಗ ಬೇಕಾದ ಶ್ರಮಿಕರ ಸಂಖ್ಯೆಯೂ ಸ್ಥಿರವಾಗಿರುತ್ತದೆ. ಕೂಲಿಯ ನಿಧಿ ಹೆಚ್ಚಿಗೆ ಇದ್ದು ಶ್ರಮಿಕರ ಸಂಖ್ಯೆ ಕಡಿಮೆ ಇದ್ದರೆ ಕೂಲಿಯ ಪ್ರಮಾಣ ಹೆಚ್ಚಿಗೆ ಇರುತ್ತದೆ. ಒಂದು ವೇಳೆ ಕೂಲಿಯ ನಿಧಿ ಕಡಿಮೆ ಇದ್ದು ಶ್ರಮಿಕರ ಸಂಖ್ಯೆ ಹೆಚ್ಚಿಗಿದ್ದರೆ ಕೂಲಿಯ ಪ್ರಮಾಣ ಕಡಿಮೆ ಇರುತ್ತದೆ.

### ಸಾಮಾನ್ಯ ಕೂಲಿ ಸಿದ್ಧಾಂತ

ಮೊದಲಿನ ಕೂಲಿಯ ಸಿದ್ಧಾಂತಗಳು ಶ್ರಮಿಕನ ಉತ್ಪತ್ತಿಗೆ ಹೆಚ್ಚಿನ ಮಹತ್ವ ಕೊಟ್ಟಿರಲಿಲ್ಲ. ಕಾಲಕ್ರಮೇಣ ಕೂಲಿಯ ದರವು ಶ್ರಮಿಕರ ಉತ್ಪಾದಕತೆಯಿಂದ ನಿರ್ಧರಿಸಲ್ಪಡುತ್ತದೆ ಎಂಬ ಸಿದ್ಧಾಂತವನ್ನು ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಲು ಪ್ರಾರಂಭಿಸಿದರು. ಈ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ಉತ್ಪಾದಕನು ಶ್ರಮಿಕರನ್ನು ನೇಮಿಸಿಕೊಳ್ಳುವಾಗ ಅವರ ಉತ್ಪತ್ತಿಯನ್ನು ನೋಡುತ್ತಾನೆ. ಅಂಚಿನ ಶ್ರಮಿಕನ ಉತ್ಪಾದನೆ ತಾನು ಅವನಿಗೆ ಕೊಡುವ ಕೂಲಿಗಿಂತ ಹೆಚ್ಚಿಗೆ ಇದ್ದರೆ ಅವನನ್ನು ನೇಮಿಸಿಕೊಳ್ಳುತ್ತಾನೆ. ಅಂಚಿನ ಶ್ರಮಿಕನ ಉತ್ಪಾದನೆ ಕೂಲಿಗೆ ಸಮನಾದಾಗ ಉತ್ಪಾದಕನು ಹೆಚ್ಚಿನ ಶ್ರಮಿಕರನ್ನು ನೇಮಿಸಿಕೊಳ್ಳುವದನ್ನು ನಿಲ್ಲಿಸುತ್ತಾನೆ.

## *೫.೩ ಕಾರ್ಮಿಕ ಸಮಸ್ಯೆಗಳು*

### ಕನಿಷ್ಟ ವೇತನ

ಶ್ರಮಿಕರ ಯೋಗಕ್ಷೇಮವನ್ನು ಕಾಪಾಡುವ ದೃಷ್ಟಿಯಿಂದ ಸರಕಾರವು ಕೆಲವೊಂದು ಉದ್ದಿಮೆಗಳಲ್ಲಿ ಕನಿಷ್ಟ ವೇತನವನ್ನು ಕಾಯ್ದೆ ಮೂಲಕ ನಿಗದಿಪಡಿಸಬಹುದು. ಇದಕ್ಕೆ ಕನಿಷ್ಟ ವೇತನವೆಂದು ಹೆಸರು.

**ಕಾರ್ಮಿಕ ಸಂಘಗಳು**

ಕಾರ್ಮಿಕ ಸಂಘಗಳು ಕಾರ್ಮಿಕರ ಹಕ್ಕುಬಾಧ್ಯತೆಗಳ ಸಲುವಾಗಿ ಹೋರಾಡುವ ಸಂಘಟನೆಗಳು. ಅವು ಕಾರ್ಮಿಕರಿಗೆ ಯೋಗ್ಯ ವೇತನ ಗಳಿಸುವ, ಕಾರ್ಯಾನುಕೂಲತೆಗಳನ್ನು ಕಲ್ಪಿಸುವ ಗುರಿಯನ್ನು ಹೊಂದಿರುತ್ತವೆ. ಈ ಗುರಿಗಳನ್ನು ಸಾಧಿಸಲು ಅವು ತಮ್ಮ ಅಸ್ತ್ರವಾದ ಸಂಪನ್ನು (ಮುಷ್ಕರ) ಉಪಯೋಗಿಸಬಹುದು. ಕಾರ್ಮಿಕ ಸಂಘಗಳು ತಮ್ಮ ಸದಸ್ಯರಿಂದ ವಂತಿಗೆ ಪಡೆದು, ಬಂದ ನಿಧಿಯ ಸಂಗ್ರಹದಿಂದ ಕಾರ್ಮಿಕರು ಅನಾರೋಗ್ಯರಿದ್ದಾಗ, ಅಪಘಾತಕ್ಕೀಡಾದಾಗ ಅಥವಾ ನಿರುದ್ಯೋಗಿಗಳಾದಾಗ ಅವರಿಗೆ ಹಣದ ಸಹಾಯ ಸಲ್ಲಿಸುತ್ತವೆ.

**ಔದ್ಯೋಗಿಕ ತಂಟೆಗಳು**

ಕಾರ್ಮಿಕ ಮತ್ತು ಮಾಲಿಕರ ನಡುವೆ ಔದ್ಯೋಗಿಕ ತಂಟೆಗಳು ಉದ್ಭವಿಸಿದಾಗ ಕಾರ್ಮಿಕರು ಸಂಪು ಹೂಡುವ ಅಥವಾ ಮಾಲೀಕರು ಹೊರಗೀಲಿ ಹಾಕುವ ಪ್ರಸಂಗ ಬರಬಹುದು. ಇಂತಹ ಪರಿಸ್ಥಿತಿಯನ್ನು ಎದುರಿಸಲು ಎರಡು ವಿಧಾನಗಳಿವೆ.

೧) ರಾಜಿ ಪದ್ಧತಿ.

೨) ಪಂಚಾಯತ ಪದ್ಧತಿ.

ರಾಜಿ ಪದ್ಧತಿಯಲ್ಲಿ ಎರಡೂ ಪಕ್ಷದವರು ಕೂಡಿ ಚರ್ಚಿಸಿ ಒಂದು ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ಇಲ್ಲಿ ಮೂರನೆಯವರ ಸಹಾಯವನ್ನು ಅವರು ತೆಗೆದುಕೊಳ್ಳಬಹುದು.

ಪಂಚಾಯತ ಪದ್ಧತಿಯಲ್ಲಿ ಎರಡೂ ಪಕ್ಷದವರು ತಮ್ಮ ತಂಟೆಗಳನ್ನು ಪಂಚಾಯತಿಗೆ ಒಪ್ಪಿಸಿ ಅದರ ನಿರ್ಣಯದಂತೆ ನಡೆಯಬೇಕಾಗುತ್ತದೆ. ಸರಕಾರಿ ರಂಗದ ಪಂಚಾಯತಿಯಲ್ಲಿ ಎರಡೂ ಪಕ್ಷದ ವಿನಂತಿಯ ಮೇರೆಗೆ ಪಂಚಾಯತ ಸಮಿತಿ ನೇಮಿಸಬಹುದು. ಸಮಿತಿಯು ಮೊಟ್ಟ ಮೊದಲು ಎರಡೂ ಪಕ್ಷಗಳ ಒಮ್ಮತಕ್ಕೆ ಪ್ರಯತ್ನಿಸುತ್ತದೆ. ಒಂದು ವೇಳೆ ಒಮ್ಮತವಾಗದಿದ್ದಲ್ಲಿ ತಂಟೆಗಳ ವಿಷಯದಲ್ಲಿ ಪೂರ್ಣ ಚವಕಸಿ ಮಾಡಿದ ನಂತರ ತನ್ನ ಶಿಫಾರಸಿನ ವರದಿಯನ್ನು

ಪ್ರಕಟಿಸುತ್ತದೆ. ಪಂಚಾಯತ ಸಮಿತಿಯ ಶಿಫಾರಸುಗಳು ಎರಡೂ ಪಕ್ಷದವರಿಗೆ ಬಂಧನಕಾರಿಯಾಗಿರುತ್ತವೆ.

### *೫.೪ ಬಡ್ಡಿ*

ಸಾಲವಾಗಿ ತೆಗೆದುಕೊಂಡ ಹಣಕ್ಕೆ ಕೊಡುವ ಬೆಲೆ ಬಡ್ಡಿ. ಒಬ್ಬ ವ್ಯಕ್ತಿಯು ಒಂದು ವರುಷದ ಮಟ್ಟಿಗೆ 100 ರೂಪಾಯಿಗಳನ್ನು 10 ರೂಪಾಯಿ ಬಡ್ಡಿಯಂತೆ ಸಾಲಪಡೆದರೆ ಅವನು ಆ 10 ರೂಪಾಯಿಯನ್ನು ಸಾಲದ ಬೆಲೆಯೆಂದು ತೆತ್ತುತ್ತಾನೆ. ಎಲ್ಲ ಬೆಲೆಗಳ ಹಾಗೆ ಬಡ್ಡಿಯೂ ಸಹಿತ ಸಾಲದ ನಿಧಿಯ ಬೇಡಿಕೆ ಮತ್ತು ಪೂರೈಕೆಯನ್ನು ಅವಲಂಬಿಸಿರುತ್ತದೆ. ನಾವಿಲ್ಲಿ ನಿವ್ವಳ ಬಡ್ಡಿ ಮತ್ತು ಒಟ್ಟು ಬಡ್ಡಿಯೆಂದು ಭೇದವೆಣಿಸಬಹುದು. ನಿವ್ವಳ ಬಡ್ಡಿಯೆಂದರೆ ಕೇವಲ ಬಂಡವಾಳದ ಉಪಯೋಗಕ್ಕಾಗಿ ಕೊಟ್ಟ ಬೆಲೆ. ಒಟ್ಟು ಬಡ್ಡಿಯು ಬಂಡವಾಳದ ಉಪಯೋಗಕ್ಕಾಗಿ ಕೊಡುವ ಬೆಲೆಯನ್ನಲ್ಲದೆ ಕೆಳಗಿನ ಅಂಶಗಳನ್ನೂ ಒಳಗೊಂಡಿರುತ್ತದೆ.

#### ೧) ಗಂಡಾಂತರಕ್ಕಾಗಿ ವಿಮೆ

ಕೊಟ್ಟ ಸಾಲ ಮರಳಿ ಬಾರದೆ ಇರಬಹುದೆಂಬ ಗಂಡಾಂತರವಿರುತ್ತದೆ. ಸಾಮಾನ್ಯವಾಗಿ ಹೆಚ್ಚಿಗೆ ಗಂಡಾಂತರವಿದ್ದಾಗ ಸಾಲ ಕೊಡುವವನು ಹೆಚ್ಚಿಗೆ ಬಡ್ಡಿಯನ್ನು ಕೇಳುತ್ತಾನೆ.

#### ೨) ಲೆಕ್ಕಪತ್ರವನ್ನಿಡುವ ಖರ್ಚು

ಸಾಲ ಕೊಡುವವನು ಸರಿಯಾದ ಲೆಕ್ಕಪತ್ರವನ್ನಿಡ ಬೇಕಾಗುತ್ತದೆ. ಸಾಲವನ್ನು ತಿರುಗಿ ಪಡೆಯುವಾಗ ಕೆಲವೊಂದು ವೆಚ್ಚವನ್ನು ಸಹಿತ ಅವನು ಮಾಡಬೇಕಾಗುತ್ತದೆ.

#### ೩) ಅನಾನುಕೂಲತೆಗಾಗಿ ಕೊಡುಗೆ

ಬಂಡವಾಳದಾರನು ತಾನು ಹಾಕಿದ ಹಣ ತನಗೆ ಬೇಕಾದಾಗ ತಿರುಗಿ ಪಡೆಯುವಂತಿದ್ದರೆ ಅದನ್ನು ಒಳ್ಳೆಯ ಬಂಡವಾಳ ಜೋಡಣೆಯೆಂದು


ತಿಳಿಯಬಹುದು. ಅಂತಹ ಸಂದರ್ಭದಲ್ಲಿ ಬಡ್ಡಿಯದರ ಕಡಿಮೆ ಇದ್ದರೂ ಅದನ್ನು ಅವನು ಒಪ್ಪಿಕೊಳ್ಳುತ್ತಾನೆ. ಆದರೆ ಬಂಡವಾಳದಾರನಿಗೆ ಹಣ ಬೇಕಾದಾಗ ಹಣ ಪಡೆಯಲು ಬಾರದಂತಹ ಬಂಡವಾಳ ಜೋಡಣೆಯನ್ನು ಅನಾನುಕೂಲ ಬಂಡವಾಳ ಜೋಡಣೆಯೆನ್ನಬಹುದು. ಹೆಚ್ಚು ಹೆಚ್ಚು ಅನಾನುಕೂಲವಿದ್ದಂತೆ ಬಂಡವಾಳದಾರನಿಗೆ ಹೆಚ್ಚು ಹೆಚ್ಚು ಬಡ್ಡಿ ಕೊಡಬೇಕಾಗುತ್ತದೆ.

**ಬಡ್ಡಿಯ ದರ ನಿರ್ಧಾರ**

ಸಾಲದ ನಿಧಿಯ ಪೂರೈಕೆ ಮತ್ತು ಸಾಲದ ನಿಧಿಯ ಬೇಡಿಕೆಯ ಮೇಲಿಂದ ಬಡ್ಡಿಯದರ ನಿರ್ಧರಿತವಾಗುತ್ತದೆ.

**ಸಾಲದ ನಿಧಿ ಪೂರೈಕೆ :**

ಸಾಲ ಕೊಡುವವರು ಬೇರೆ ಬೇರೆ ಬಡ್ಡಿದರಗಳಿಗೆ ಎಷ್ಟು ಹಣವನ್ನು ಸಾಲಕೊಡಲು ಸಿದ್ಧರಿರುವರೆಂಬುದನ್ನು ಸಾಲದ ನಿಧಿ ಪೂರೈಕೆ ತೋರಿಸುತ್ತದೆ.




ಸಾಲ ಕೊಡುವ / ಬೇಡಿಕೆಯ ಮೊತ್ತ

ಮೇಲಿನ ಆಕೃತಿಯಲ್ಲಿ 'ಸಸ' ರೇಖೆ ಸಾಲದ ನಿಧಿಯ ಪೂರೈಕೆಯ ರೇಖೆಯಾಗಿದೆ. ಈ ರೇಖೆಯು ಶೂನ್ಯ ರೇಖೆಯ ಕೆಳಗಡೆಯಿಂದ ಪ್ರಾರಂಭ ವಾಗುತ್ತದೆ. ಯಾಕೆಂದರೆ ಕೆಲವು ಜನರು ಋಣ ಬಡ್ಡಿ ದರ ವಿದ್ದಾಗಲೂ ಸಹ ಸ್ವಲ್ಪ ಹಣವನ್ನು ಸಾಲಕೊಡಲು ಸಿದ್ಧರಿದ್ದಾರೆಂದು ಇದು ತೋರಿಸುತ್ತದೆ. ಮುಂದೆ ಬಡ್ಡಿಯ ದರ ಹೆಚ್ಚಾದಂತೆ ಸಾಲದ ನಿಧಿ ಹೆಚ್ಚುತ್ತಾ ಹೋಗುತ್ತದೆ.

### ಸಾಲದ ನಿಧಿಯ ಬೇಡಿಕೆ

ಮೇಲಿನ ಆಕೃತಿಯಲ್ಲಿ 'ಡಡ' ಸಾಲದ ನಿಧಿಯ ಬೇಡಿಕೆಯ ರೇಖೆಯಾಗಿದೆ. ಬಡ್ಡಿಯದರ ಹೆಚ್ಚಿಗೆ ಇದ್ದಂತೆ ಬೇಡಿಕೆ ಕಡಿಮೆಯಾಗುತ್ತದೆ. ಬಡ್ಡಿಯದರ ಕಡಿಮೆ ಇದ್ದಂತೆ ಬೇಡಿಕೆ ಹೆಚ್ಚಿಗಿರುತ್ತದೆ. ಜನರು ಸಾಲವನ್ನು ಎರಡು ಉದ್ದೇಶಗಳಿಗಾಗಿ ಪಡೆಯುತ್ತಾರೆ. ಒಂದು ಉಪಭೋಗಕ್ಕಾಗಿ, ಎರಡನೆಯದು ಬಂಡವಾಳ ತೊಡಗಿಸುವ ಸಲುವಾಗಿ, ಉಪಭೋಗಕ್ಕಾಗಿ ಸಾಲ ಪಡೆಯುವವರಿಗೆ ತಾವು ಕೊಡಲು ಸಿದ್ಧರಿದ್ದ ಬಡ್ಡಿಯ ದರ ಅವರ ವೇಳೆಯ ಪ್ರಾಶಸ್ತ್ಯವನ್ನು ಅವಲಂಬಿಸಿರುತ್ತದೆ. ಅವರ ಸದ್ಯದ ಬೇಡಿಕೆಗಳು ಅವರಿಗೆ ಬಹಳ ಮಹತ್ವದವುಗಳಾಗಿ ಕಂಡಲ್ಲಿ ಅವರು ಈಗಿನ ಬೇಡಿಕೆಗಳನ್ನು ಪೂರೈಸಲು ಹೆಚ್ಚಿಗೆ ಬಡ್ಡಿದರವನ್ನು ಕೊಡಲು ಸಿದ್ದರಿರುತ್ತಾರೆ.

ಸಾಲದ ನಿಧಿಯನ್ನು ಉತ್ಪಾದನೆಯಲ್ಲಿ ತೊಡಗಿಸುವವರು ತಾವು ಕೊಡಲು ಸಿದ್ಧರಿರುವ ಬಡ್ಡಿಯ ದರ ವ್ಯವಹಾರದ ಎಲ್ಲ ವೆಚ್ಚವೂ ಹೋಗಲಾಗಿ ಉಳಿಯುವ ನಿವ್ವಳ ಲಾಭವನ್ನು ಅವಲಂಬಿಸಿರುತ್ತದೆ. ಈ ಬಡ್ಡಿಯ ದರವು ಬಂಡವಾಳದ ಅಂಚಿನ ಉತ್ಪತ್ತಿಯನ್ನು ಅವಲಂಬಿಸಿರುತ್ತದೆ. ಅವರು ನಿರೀಕ್ಷಿಸಿದ ಲಾಭದ ದರವು ಹೆಚ್ಚಿಗೆ ಇದ್ದಾಗ್ಯೂ ಕೂಡ ಅವರು ಪೇಟೆಯ ಬಡ್ಡಿಯ ದರಕ್ಕಿಂತ ಹೆಚ್ಚಿಗೆ ಬಡ್ಡಿ ದರ ಕೊಡಬೇಕಾಗಿಲ್ಲ. ಯಾಕೆಂದರೆ ಸಾಲ ಕೊಡುವವರಲ್ಲಿ ಪೈಪೋಟಿಯು ಪೇಟೆಯಲ್ಲಿ ಬಂದೇ ಬಡ್ಡಿಯ ದರವನ್ನು ತರುತ್ತದೆ. ಅಂಚಿನ ಸಾಲ ಪಡೆಯುವವರು ಮತ್ತು ಅಂಚಿನ ಸಾಲ ಕೊಡುವವರು ಈ ಬಡ್ಡಿಯ ದರವನ್ನು ನಿರ್ಧರಿಸುತ್ತಾರೆ. ಸಾಲ ಪಡೆಯುವವರು

ತೆಗೆದುಕೊಳ್ಳುವ ಹಣದ ಮೊತ್ತ ಮತ್ತು ಸಾಲಕೊಡುವವರು ಪೂರೈಸುವ ಹಣದ ಮೊತ್ತವನ್ನು ಸರಿಗೊಳಿಸುವ ಬಡ್ಡಿಯ ದರವೇ ನಿಜವಾದ ಬಡ್ಡಿಯ ದರವಾಗುತ್ತದೆ.

### *೫.೫ ಲಾಭ*

ವ್ಯವಸ್ಥಾಪಕನು ಉಳಿದೆಲ್ಲ ಉತ್ಪಾದನಾ ಸಾಧನಗಳನ್ನು ಕೂಡಿಹಾಕಿ ಉತ್ಪಾದನೆಯನ್ನು ಪ್ರಾರಂಭಿಸುತ್ತಾನೆ. ಹೀಗೆ ಮಾಡುವಾಗ ಅವನ ಉದ್ದೇಶ ತನಗೆ ದೊರೆಯುವ ಲಾಭವನ್ನು ಹೆಚ್ಚಿಸುವದಾಗಿದೆ. ಉದ್ಯಮದ ವೆಚ್ಚವು ಹೋಗಲಾಗಿ ಉಳಿದ ನಿವ್ವಳ ಉತ್ಪಾದನಾ ಮೌಲ್ಯಕ್ಕೆ ಲಾಭವೆಂದು ಹೆಸರು. ವೆಚ್ಚದಲ್ಲಿ ನಾವು ಬಾಡಿಗೆ, ಬಡ್ಡಿ, ಆಡಳಿತ, ಸಂಬಳ, ಕರ, ಸವಕಳಿ, ಕಚ್ಚಾ ಸರಕುಗಳ ಬೆಲೆಗಳನ್ನು ಕೂಡಿಸುತ್ತೇವೆ. ಆದ್ದರಿಂದ ಇವೆಲ್ಲ ವೆಚ್ಚಗಳು ಹೋಗಲಾಗಿ ಉಳಿಯುವ ಉತ್ಪನ್ನಕ್ಕೆ ಲಾಭವೆನ್ನುತ್ತೇವೆ.

**ಗಂಡಾಂತರ ಹಾಗೂ ಅನಿರ್ದಿಷ್ಟತೆ ಮತ್ತು ಲಾಭ**

ಲಾಭದ ಆಧುನಿಕ ತತ್ವವು ವ್ಯವಸ್ಥಾಪಕನು ಉತ್ಪಾದನಾ ವಿಧಾನದಲ್ಲಿ ವಿಮೆ ಇಳಿಸಲು ಬಾರದಂತಹ ಗಂಡಾಂತರ ಹಾಗೂ ಅನಿರ್ದಿಷ್ಟತೆಯನ್ನು ಹೊರುವದರಿಂದ ಅವನು ಲಾಭವನ್ನು ಪಡೆಯುತ್ತಾನೆಂದು ಪ್ರತಿಪಾದಿಸುತ್ತದೆ. ಇಲ್ಲಿ ವಿಮೆ ಇಳಿಸಲು ಬರುವಂತಹ ಮತ್ತು ವಿಮೆ ಇಳಿಸಲು ಬಾರದಂತಹ ಗಂಡಾಂತರಗಳ ನಡುವಿನ ಭೇದವು ಮಹತ್ವದ್ದಾಗಿದೆ. ಬೆಂಕಿಯ ಅನಾಹುತದಿಂದ ಉದ್ದಿಮೆ ನಷ್ಟದಲ್ಲಿ ಬರಬಹುದೆಂಬ ಗಂಡಾಂತರ ಯಾವಾಗಲೂ ಇದ್ದೇ ಇರುತ್ತದೆ. ಈ ಗಂಡಾಂತರವನ್ನು ನಾವು ವಿಮೆಯ ಮುಖಾಂತರ ದೂರ ಮಾಡಬಹುದು. ವಿಮೆಯ ಕಂತು ಉಳಿದ ಉತ್ಪಾದನಾ ವೆಚ್ಚದ ಜೊತೆಗೆ ಉತ್ಪಾದನಾ ಖರ್ಚು ಎಂದು ಪರಿಗಣಿಸಲ್ಪಡುತ್ತದೆ.

ನಾವೀಗ ವಿಮೆ ಇಳಿಸಲು ಬಾರದಂತಹ ಗಂಡಾಂತರಗಳಾವುವು ಮತ್ತು ಅವುಗಳನ್ನು ಏಕೆ ವಿಮೆ ಇಳಿಸಲು ಬರುವದಿಲ್ಲವೆಂಬುದನ್ನು ಕಂಡುಕೊಳ್ಳೋಣ

ವ್ಯವಸ್ಥಾಪಕನು ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಅವನು ತಾನು ಉತ್ಪಾದಿಸುವ ವಸ್ತುವಿನ ಉತ್ಪಾದನೆಯನ್ನು ಹೆಚ್ಚಿಸಬೇಕೋ ಅಥವಾ ಕಡಿಮೆ ಮಾಡಬೇಕೋ, ವಸ್ತುವಿನ ಬೆಲೆಯನ್ನು ಹೆಚ್ಚಿಸಬೇಕೋ ಅಥವಾ ಇಳಿಸಬೇಕೋ ಎಂಬ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದಾಗಿ ಅವನು ಲಾಭವನ್ನು ಪಡೆಯಬಹುದು ಅಥವಾ ನಷ್ಟವನ್ನು ಅನುಭವಿಸಬಹುದು. ಯಾವುದನ್ನೂ ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ. ಹೀಗಿರುವಾಗ ಯಾವ ವಿಮಾ ಕಂಪನಿಯೂ ವ್ಯವಹಾರಿ ನಷ್ಟಗಳ ವಿರುದ್ಧ ವಿಮೆಯನ್ನು ಕೊಡಲು ಸಿದ್ಧವಿರುವದಿಲ್ಲ.


ವ್ಯವಸ್ಥಾಪಕನು ಮಾಡುವ ನಿರ್ದಿಷ್ಟ ಕರ್ತವ್ಯಗಳನ್ನು ನಾವೀಗ ಕಂಡುಕೊಂಡಂತಾಯಿತು. ಅವನು ಬೆಲೆ ಮತ್ತು ಉತ್ಪಾದನಾ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುವದು. ಇದರ ಜೊತೆಗೆ ವ್ಯವಸ್ಥಾಪಕನು ಉಳಿದ ಉತ್ಪಾದನಾ ಸಾಧನಗಳ ಮಾಲಿಕನೂ ಆಗಿರುತ್ತಾನೆ. ಒಂದು ಅಂಗಡಿಯನ್ನಿಟ್ಟ ವ್ಯವಸ್ಥಾಪಕನ ಉದಾಹರಣೆಯನ್ನು ನಾವಿಲ್ಲಿ ತೆಗೆದುಕೊಳ್ಳುವಾ. ಅವನು ಯಾವ ವಸ್ತುವನ್ನು ಮಾರಾಟ ಮಾಡಬೇಕು ಮತ್ತು ಯಾವ ಬೆಲೆಗೆ ಮಾರಾಟ ಮಾಡಬೇಕೆಂದು ನಿರ್ಧರಿಸುವದರಿಂದ ಅವನು ವ್ಯವಸ್ಥಾಪಕನಾಗಿರುತ್ತಾನೆ. ಅವನು ಅಂಗಡಿಯ ಬಂಡವಾಳದ ಒಡೆಯನೂ ಆಗಿರುತ್ತಾನೆ. ಅಂಗಡಿಯಲ್ಲಿ ಅವನು ಸ್ವತಃ ದುಡಿಯುವದರಿಂದ ಅವನು ಶ್ರಮಿಕನೂ ಆಗಿರುತ್ತಾನೆ. ಆದ್ದರಿಂದ ಅವನ ಉತ್ಪನ್ನವು ಲಾಭ, ಬಡ್ಡಿ, ಸಂಬಳ ಹೀಗೆ ಮೂರು ಅಂಶಗಳ್ನು ಕೂಡಿದ್ದಾಗಿರುತ್ತದೆ. ಲಾಭದ ಅಂಶವನ್ನು ಅವನ ಒಟ್ಟು ಉತ್ಪನ್ನದಿಂದ ಬೇರ್ಪಡಿಸುವದು ಹೇಗೆ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಈ ಸಮಸ್ಯೆಗೆ ನಾವು ಪರಿಹಾರವನ್ನು ಒದಗಿಸಬಹುದು. ಅವನ ಒಟ್ಟು ಸಂಪಾದನೆಯಲ್ಲಿ ಬೇರೆ ಬೇರೆ ಉತ್ಪಾದನಾ ಸಾಧನಗಳ ಪಾಲು ಏನೆಂಬುದನ್ನು ನಾವು ಅಂದಾಜು ಮಾಡಬಹುದು. ಅವನ ಬಂಡವಾಳಕ್ಕೆ ಪ್ರತಿಫಲ ಏನೆಂಬುದನ್ನು ಬಡ್ಡಿಯ ದರದ ಮೇಲಿಂದ ನಿರ್ಧರಿಸಬಹುದು. ಅವನ ಶ್ರಮಕ್ಕೆ ಪ್ರತಿಫಲ ಅವನು ಎರಡನೆಯವರ

ಅಂಗಡಿಯಲ್ಲಿ ಮ್ಯಾನೇಜರನೆಂದು ದುಡಿದರೆ ಅವನಿಗೆ ಸಿಗಬಹುದಾದ ಸಂಬಳದ ಮೇಲಿಂದ ನಿರ್ಧರಿಸಲ್ಪಡುತ್ತದೆ. ಹೀಗೆ ಅವನ ಒಟ್ಟು ಸಂಪಾದನೆಯಲ್ಲಿ ಬಡ್ಡಿ ಮತ್ತು ಸಂಬಳ ವಜಾ ಮಾಡಲಾಗಿ ಉಳಿದದ್ದು ಅವನ ಲಾಭವಾಗುತ್ತದೆ. ಇದು ಅವನ ವ್ಯವಸ್ಥಾಪಕತ್ವಕ್ಕೆ ಸಿಗಬೇಕಾದ ಸಂಪಾದನೆ.

ನಿಜ ಜೀವನದಲ್ಲಿ ವ್ಯವಸ್ಥಾಪಕನ ಕರ್ತವ್ಯ ಮತ್ತು ಕಾರ್ಯ ನಿರ್ವಾಹಕ ಕರ್ತವ್ಯದ ನಡುವೆ ಬೇಧವೆಣಿಸುವದು ಕಠಿಣವಾಗಿರುತ್ತದೆ. ನಿಜವಾದ ವ್ಯವಸ್ಥಾಪಕನು ತನ್ನ ವ್ಯವಸ್ಥಾಪಕ ಕರ್ತವ್ಯವಾದ ಬೆಲೆ ಹಾಗೂ ಉತ್ಪಾದನೆ ನಿರ್ಧಾರವನ್ನು ಕೈಕೊಳ್ಳುವದು ತಾನು ಆ ಕಾರಖಾನೆಯ ಒಳಗಡೆ ಸಾಕಷ್ಟು ವೇಳೆ ಇದ್ದರೆ ಮಾತ್ರ ಸಾಧ್ಯ. ಹೀಗೆ ಅವನು ಕಾರಖಾನೆಯ ಒಳಗಡೆ ಇರಬೇಕಾದಲ್ಲಿ ಸಣ್ಣಪುಟ್ಟ ಕಾರ್ಯನಿರ್ವಾಹಕ ನಿರ್ಧಾರವನ್ನೂ ಮಾಡಬೇಕಾಗುತ್ತದೆ.

### *೫.೬ ಬಾಡಿಗೆ (ಗೇಣಿ)*

ಭೂ ಮಾಲಿಕನಿಗೆ ಅವನ ಭೂಮಿಯನ್ನು ಉಪಯೋಗಿಸುವದಕ್ಕಾಗಿ ಗೇಣಿದಾರನು ಕೊಡುವ ಗೇಣಿಗೆ ಸಾಮಾನ್ಯವಾಗಿ ಬಾಡಿಗೆ ಎಂದು ಕರೆಯಲಾಗುತ್ತದೆ. ಸಾಮಾನ್ಯ ಭಾಷೆಯಲ್ಲಿ ಮನೆ, ಉಪಕರಣ, ಅಂಗಡಿ, ವಾಹನ ಮುಂತಾದವುಗಳ ಉಪಯೋಗಕ್ಕಾಗಿ ಕೊಡುವ ಹಣಕ್ಕೂ ಬಾಡಿಗೆ ಎಂದು ಕರೆಯುತ್ತಾರೆ. ಈ ಒಪ್ಪಂದ ಬಾಡಿಗೆಯಲ್ಲಿ ವ್ಯವಸ್ಥಾ ಶುಲ್ಕ, ಮನೆಯ ಮೇಲೆ ತೊಡಗಿಸಿದ ಬಂಡವಾಳದ ಮೆಲಿನ ಬಡ್ಡಿ ಮುಂತಾದ ಅಂಶಗಳು ಅಡಕವಾಗಿರುತ್ತವೆ. ಭೂಮಿಯ ಉಪಯೋಗಕ್ಕಾಗಿ ಕೊಡುವ ಪ್ರತಿಫಲಕ್ಕೆ ಆರ್ಥಿಕ ಬಾಡಿಗೆ ಎಂದು ಹೆಸರು. ಆರ್ಥಿಕ ಬಾಡಿಗೆಯ ಸ್ವರೂಪದ ಬಗ್ಗೆ 19ನೇ ಶತಮಾನದಲ್ಲಿ ಡೇವಿಡ್ ರಿಕಾರ್ಡೋ ಎಂಬ ಅರ್ಥಶಾಸ್ತ್ರಜ್ಞನು ಒಂದು ಸಿದ್ಧಾಂತವನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಬಾಡಿಗೆ ಭೂಮಿಯ ಮೂಲ ಹಾಗೂ ಅಕ್ಷಯ ಗುಣಗಳ ಉಪಯೋಗಕ್ಕಾಗಿ ಮಾಲಿಕರಿಗೆ ದೊರೆಯುವ ಉತ್ಪತ್ತಿಯ ಪಾಲು. ಈ ಕೆಳಗಿನ ಉದಾಹರಣೆಯ ಮೂಲಕ ಈ ಸಿದ್ಧಾಂತವನ್ನು ಸ್ಪಷ್ಟೀಕರಿಸಬಹುದು.




ಒಂದು ದೇಶದ ಭಾಗದಲ್ಲಿ ಅ, ಬ, ಕ ಹೀಗೆ ಮೂರು ದರ್ಜೆಯ ಭೂಮಿಗಳಿರುತ್ತವೆ. 'ಅ' ಭೂಮಿ ಅತ್ಯಧಿಕ ಫಲವತ್ತಾದ ಭೂಮಿ. 'ಬ' ಭೂಮಿ ಸ್ವಲ್ಪ ಕಡಿಮೆ ಫಲವತ್ತಾದ ಭೂಮಿ. 'ಕ'ಭೂಮಿ ಕನಿಷ್ಟ ಫಲವತ್ತತೆಯ ಭೂಮಿ.

ಮೊಟ್ಟ ಮೊದಲು ಅತಿ ಹೆಚ್ಚು ಫಲವತ್ತಾದ 'ಅ'ಭೂಮಿಯನ್ನು ಸಾಗುವಳಿ ಮಾಡುತ್ತಾರೆ. 'ಅ'ವರ್ಗದ ಭೂಮಿ ಸಾಗುವಳಿ ಮಾಡಿದಾಗ ಒಂದು ಎಕರೆಗೆ 30 ಚೀಲ ಗೋದಿಯನ್ನು ಬೆಳೆಯುತ್ತಾರೆಂದು ತಿಳಿಯೋಣ. ಅದನ್ನು ಸಾಗುವಳಿ ಮಾಡಲು ಶ್ರಮ ಮತ್ತು ಬಂಡವಾಳದ ಉಪಯೋಗಕ್ಕಾಗಿ 6000 ರೂಪಾಯಿ ಖರ್ಚು ಬರುತ್ತದೆಯೆಂದು ತಿಳಿದರೆ, ಗೋಧಿಯ ಬೆಲೆಯು ಒಂದು ಚೀಲಕ್ಕೆ 200 ರೂಪಾಯಿ ಇರಬೇಕಾಗುತ್ತದೆ. ಆದರೆ ಭೂಮಿಗೆ ಬಾಡಿಗೆ ಇರಲು ಸಾಧ್ಯವಿಲ್ಲ. ಮುಂದೆ ಜನಸಂಖ್ಯೆಯ ಹೆಚ್ಚಳದಿಂದಾಗಿ, ಆಹಾರಕ್ಕೆ ಬೇಡಿಕೆ

ಹೆಚ್ಚಿದಾಗ, ಸಾಗುವಳಿ ಮಾಡಲು ಹೆಚ್ಚಿನ ಭೂಮಿ ಬೇಕಾಗುತ್ತದೆ. ಹೀಗಾಗಿ 'ಬ' ವರ್ಗದ ಭೂಮಿಯನ್ನು ಸಾಗುವಳಿಗೆ ತೆಗೆದುಕೊಳ್ಳಬೇಕಾಗುತ್ತದೆ. 'ಬ' ವರ್ಗದ ಭೂಮಿಯು 'ಅ'ವರ್ಗದ ಭೂಮಿಗಿಂತ ಕಡಿಮೆ ಫಲವತ್ತತೆಯುಳ್ಳದ್ದಾಗಿರುವದರಿಂದ, ಅದರಲ್ಲಿ ಪ್ರತಿ ಎಕರೆಗೆ 20 ಚೀಲ ಗೋಧಿ ಬೆಳೆಯುತ್ತದೆ. ಗೋಧಿಯ ಬೆಲೆ ಪ್ರತಿ ಚೀಲಕ್ಕೆ 300ರೂಪಾಯಿ ಇದ್ದರೆ ಮಾತ್ರ 'ಬ' ವರ್ಗದ ಭೂಮಿಯ ಉತ್ಪನ್ನ ಮತ್ತು ಸಾಗುವಳಿಯ ಖರ್ಚು ಸರಿಯಾಗುತ್ತದೆ. ಆಗ 'ಬ'ವರ್ಗದ ಭೂಮಿ ಬಾಡಿಗೆ ರಹಿತ ಭೂಮಿ ಅಥವಾ ಅಂಚಿನ ಭೂಮಿಯಾಗುತ್ತದೆ. 'ಅ'ವರ್ಗದ ಭೂಮಿಯ ಉತ್ಪನ್ನ ಈಗ ಅಧಿಕವಾಗುತ್ತದೆ. 'ಅ'ವರ್ಗದ ಭೂಮಿಯು ಸಾಗುವಳಿಯ ಖರ್ಚು ಸ್ಥಿರವಾಗಿರುವದರಿಂದ ಅದರ ಮಾಲಿಕನಿಗೆ,

30x300=9000-6000=3000 ರೂಪಾಯಿ ಶೇಷ ಉತ್ಪನ್ನ ದೊರಕುತ್ತದೆ. ಅಂದರೆ ಈ ಪರಿಸ್ಥಿತಿಯಲ್ಲಿ 'ಅ'ವರ್ಗದ ಭೂಮಿ ಬಾಡಿಗೆಯನ್ನು ಪಡೆಯುತ್ತದೆ. 'ಬ'ವರ್ಗದ ಭೂಮಿ ಬಾಡಿಗೆ ಪಡೆಯುವದಿಲ್ಲ. 'ಬ'ವರ್ಗದ ಭೂಮಿ ಬಾಡಿಗೆ ರಹಿತ ಭೂಮಿ ಅಥವಾ ಅಂಚಿನ ಭೂಮಿ ಎಂದಾಯಿತು.

ಜನಸಂಖ್ಯೆಯ ಹೆಚ್ಚಳದಿಂದಾಗಲಿ ಅಥವಾ ಹೊಸ ಹೊಸ ವಲಸೆಗಾರರ ಆಗಮನದಿಂದಾಗಲಿ ಆಹಾರ ಧಾನ್ಯ ಬೇಡಿಕೆಯಲ್ಲಿ ಹೆಚ್ಚಳವಾದಾಗ ಸಾಗುವಳಿ ಮಾಡಲು ಹೆಚ್ಚು ಭೂಮಿಯ ಅವಶ್ಯಕತೆಯಾಗುವದು. 'ಅ' ಮತ್ತು 'ಬ'ವರ್ಗದ ಎಲ್ಲ ಭೂಮಿಯೂ ಸಾಗುವಳಿಯಾದಾಗ 'ಕ'ವರ್ಗದ ಭೂಮಿಯನ್ನು ಸಾಗುವಳಿ ಮಾಡಬೇಕಾಗುತ್ತದೆ. 'ಕ'ವರ್ಗದ ಭೂಮಿಯು ಕನಿಷ್ಠ ತರಗತಿಯ ಭೂಮಿಯಾಗಿರುವದರಿಂದ ಅದರಲ್ಲಿ ಪ್ರತಿ ಎಕರೆಗೆ 15 ಚೀಲ ಗೋಧಿ ಬೆಳೆಯಲಾಗುತ್ತದೆ. ಈ ಬೆಳೆಯನ್ನು ಪಡೆಯುವಲ್ಲಿ ಶ್ರಮ ಮತ್ತು ಬಂಡವಾಳದ ಖರ್ಚು 'ಅ' ಮತ್ತು 'ಬ' ವರ್ಗದ ಭೂಮಿಗಳನ್ನು ಸಾಗುವಳಿ ಮಾಡುವ ಖರ್ಚಿನಷ್ಟೇ ಅಂದರೆ 6000 ರೂಪಾಯಿಗಳಿರುತ್ತದೆ. ಅಂದರೆ ಈಗ ಗೋಧಿಯ ಬೆಲೆಯು ಪ್ರತಿ ಚೀಲಕ್ಕೆ 400ರೂಪಾಯಿ ಇರಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ

'ಕ'ವರ್ಗದ ಭೂಮಿಯಲ್ಲಿ ಬೆಳೆಯುವ ಉತ್ಪತ್ತಿಯ ಬೆಲೆ ಆ ಭೂಮಿಯ ಸಾಗುವಳಿ ಖರ್ಚಿಗೆ ಸಮನಾಗಿರುತ್ತದೆ. ಆಗ 'ಕ'ವರ್ಗದ ಭೂಮಿ ಅಂಚಿನ ಭೂಮಿ ಅಥವಾ ಬಾಡಿಗೆ ರಹಿತ ಭೂಮಿಯಾಗುವದು. ಉಳಿದ ವರ್ಗದ ಭೂಮಿಗಳಿಗೆ ಬಾಡಿಗೆ ದೊರೆಯುತ್ತದೆ.

ಮೇಲಿನ ಆಕೃತಿಯ 'ಅ'ವರ್ಗದ ಭೂಮಿಯ ಉತ್ಪಾದನೆ 30 ಚೀಲ, 'ಬ'ವರ್ಗದ ಭೂಮಿಯ ಉತ್ಪಾದನೆ 20 ಚೀಲ, 'ಕ' ವರ್ಗದ ಭೂಮಿಯ ಉತ್ಪಾದನೆ 15 ಚೀಲ. ಆದ್ದರಿಂದ 'ಅ' ಭೂಮಿಯ ಬಾಡಿಗೆ (30-15) x 400=6000ರೂಪಾಯಿಗಳು, 'ಬ' ಭೂಮಿಯ ಬಾಡಿಗೆ (20-15)x400=2000 ರೂಪಾಯಿಗಳು. 'ಕ' ಭೂಮಿಗೆ ಬಾಡಿಗೆ ಇಲ್ಲ.

ರಿಕಾರ್ಡೊರವರ ಬಾಡಿಗೆ ಸಿದ್ಧಾಂತದನ್ವಯ ಭೂಮಿಯು ಉತ್ಪಾದಿಸುವ ಧಾನ್ಯದ ಬೆಲೆಯ ನಿರ್ಧಾರಕ್ಕೆ ಬಾಡಿಗೆಯು ಕಾರಣವಲ್ಲ. ಆದರೆ ಧಾನ್ಯದ ಬೆಲೆಯಿಂದ ಬಾಡಿಗೆಯ ಪ್ರಮಾಣ ನಿರ್ಧರಿಸಲ್ಪಡುತ್ತದೆ. ಅಂಚಿನ ಭೂಮಿಗಿಂತ ಅಧಿಕ ಫಲವತ್ತತೆಯುಳ್ಳ ಭೂಮಿಗಳು ಅವುಗಳ ಫಲವತ್ತತೆಗನುಗುಣವಾಗಿ ಶೇಷ ಉತ್ಪನ್ನ ಅಥವಾ ಬಾಡಿಗೆಯನ್ನು ಪಡೆಯುತ್ತವೆ. ಬಾಡಿಗೆಯು ವೆಚ್ಚದ ಅಂಶವಲ್ಲದ್ದರಿಂದ ಅದು ಧಾನ್ಯ ಬೆಲೆಯನ್ನು ನಿರ್ಧರಿಸುವಲ್ಲಿ ಕಾರಣ ವಾಗಲಾರದು.

ಇತರ ಘಟಕಗಳಲ್ಲಿ ಬಾಡಿಗೆಯ ಅಂಶಗಳು.

### *೫.೭ ಲಾಭದಲ್ಲಿ ಬಾಡಿಗೆಯ ಅಂಶ*

ಎಲ್ಲ ಉದ್ಯೋಗ ಪತಿಗಳು ಒಂದೇ ಸಾಮರ್ಥ್ಯವನ್ನು ಹೊಂದಿರುವದಿಲ್ಲ. ಕೆಲವರು ತಮ್ಮ ಅಸಾಧಾರಣ ಸಾಮರ್ಥ್ಯದಿಂದ ಅಥವಾ ಸಂಘಟನಾ ಚಾತುರ್ಯದಿಂದ ಅತಿ ಕಡಿಮೆ ವೆಚ್ಚದಲ್ಲಿ ವಸ್ತುಗಳನ್ನು ಉತ್ಪಾದಿಸಿ ಅಧಿಕ ಲಾಭವನ್ನು ಪಡೆಯುತ್ತಾರೆ. ಭೂಮಿಯ ಸ್ಥಳಾನುಕೂಲತೆಯಿಂದುಂಟಾಗುವ ಶೇಷ ಉತ್ಪನ್ನದಂತೆಯೇ ಉದ್ಯೋಗ ಪತಿಗಳು ತಮ್ಮ ಶ್ರೀಮಂತಿಕೆಯಿಂದಾಗಲಿ, ಜನ್ಮಮಹತ್ವದಿಂದಾಗಲಿ ಅಥವಾ ವ್ಯವಹಾರದಲ್ಲಿಯ ಪ್ರಭಾವದಿಂದಾಗಲಿ, ಅಧಿಕ

ಲಾಭ ಪಡೆಯಲು ಶಕ್ತರಾಗುತ್ತಾರೆ. ಹೀಗೆ ಲಾಭದಲ್ಲಿಯೂ ಕೂಡ ಬಾಡಿಗೆಯ ಅಂಶವನ್ನು ಗುರುತಿಸಬಹುದು.

**ವೇತನದಲ್ಲಿ ಭಾಡಿಗೆಯ ಅಂಶ**

ಕಾರ್ಮಿಕರ ಕಾರ್ಯಕ್ಷಮತೆ ಭಿನ್ನವಾಗಿರುತ್ತದೆ. ಅಧಿಕ ಕಾರ್ಯಕ್ಷಮತೆಯುಳ್ಳ ಕಾರ್ಮಿಕರು ಅಂಚಿನ ಕಾರ್ಯಕ್ಷಮತೆಯುಳ್ಳ ಕಾರ್ಮಿಕರಿಗಿಂತ ಅಧಿಕ ವೇತನ ಪಡೆಯುತ್ತಾರೆ. ಈ ಪರಿಸ್ಥಿತಿಯನ್ನು ಅಧಿಕ ಫಲವತ್ತತೆಯಿಂದಾಗಿ ಭೂಮಿಗೆ ದೊರೆಯುವ ಶೇಷ ಉತ್ಪನ್ನಕ್ಕೆ ಹೋಲಿಸಬಹುದು.

### *೫.೮ ಬಡ್ಡಿಯಲ್ಲಿ ಬಾಡಿಗೆಯ ಅಂಶ*

ಪ್ರಚಲಿತ ಬಡ್ಡಿಯ ದರವು ವ್ಯವಹಾರದಲ್ಲಿ ಹಣವನ್ನು ತೊಡಗಿಸುವ ವ್ಯಕ್ತಿಯ ಅಂಚಿನ ಪ್ರತಿಫಲಾಪೇಕ್ಷೆಯನ್ನು ತೃಪ್ತಿಗೊಳಿಸುತ್ತದೆ. ಕೆಲವರು ಪ್ರಚಲಿತ ಬಡ್ಡಿಯ ದರಕ್ಕಿಂತ ಕಡಿಮೆ ಬಡ್ಡಿ ದೊರೆಯುವಲ್ಲಿಯೂ ಕೂಡ ಹಣ ತೊಡಗಿಸಲು ಸಿದ್ಧರಿರುತ್ತಾರೆ. ಇದು ಅಧಿಕ ಭೂಮಿಯನ್ನು ಸಾಗುವಳಿಗೆ ತರುವದರಿಂದ ಉದ್ಭವಿಸುವ ಶೇಷ ಉತ್ಪನ್ನ ಪರಿಸ್ಥಿತಿಗೆ ಹೋಲುತ್ತದೆ.

●

# ೬. ಹಣ

ಹಣವೆಂದರೇನು ಎಂಬ ಪ್ರಶ್ನೆಗೆ ಉತ್ತರ ಹೇಳುವದು ಅಷ್ಟು ಸುಲಭವಲ್ಲ. ಎಲ್ಲರೂ ಆನೆಯನ್ನು ನೋಡಿರಬಹುದು. ಆದರೆ ಆನೆಯ ವ್ಯಾಖ್ಯೆಯನ್ನು ಕೊಡುವದು ಕಠಿಣ. ಆನೆಯ ಬಗ್ಗೆ ವಿವರ ಕೊಡಬಹುದು. ಅದೊಂದು ನಾಲ್ಕು ಕಾಲು, ಸಣ್ಣ ಕಣ್ಣು ಹಾಗೂ ದೊಡ್ಡ ಕಿವಿಗಳನ್ನು ಹೊಂದಿದ ಪ್ರಾಣಿಯೆಂದು ಹೇಳಬಹುದು. ಅದೇ ರೀತಿಯಾಗಿ ನಾವೆಲ್ಲ ಪ್ರತಿದಿನ ಹಣವನ್ನು ಉಪಯೋಗಿಸುತ್ತೇವೆ. ಅದೊಂದು ಎಲ್ಲರಿಗೂ ಉಪಯೋಗಕ್ಕೆ ಬರುವ ವಸ್ತುವೆಂದು ನಾವೆಲ್ಲರೂ ಬಲ್ಲೆವು. ಆದರೆ ಅದರ ವ್ಯಾಖ್ಯೆ ಕೊಡುವದು ಕಠಿಣ.

ತೀರ ಹಿಂದಿನ ಕಾಲದಲ್ಲಿ ಮಾನವನು ತನ್ನಲ್ಲಿಯ ವಸ್ತುಗಳನ್ನು ಮತ್ತೊಬ್ಬನ ವಸ್ತುವಿನೊಡನೆ ವಿನಿಮಯ ಮಾಡಿಕೊಳ್ಳುತ್ತಿದ್ದನು. ಬೇಟೆಗಾರನು ತನ್ನಲ್ಲಿಯ ಪ್ರಾಣಿಗಳ ಚರ್ಮವನ್ನು, ಆಹಾರ ಧಾನ್ಯಗಳನ್ನು ಬೆಳೆಯುವವನೊಡನೆ ನೇರವಾಗಿ ವಿನಿಮಯ ಮಾಡಿಕೊಳ್ಳುತ್ತಿದ್ದನು. ಈ ರೀತಿಯ ವಸ್ತುಗಳ ವಿನಿಮಯ ಪದ್ಧತಿಯಲ್ಲಿ ಅನೇಕ ತೊಂದರೆಗಳಿದ್ದವು. ವಸ್ತುಗಳ ವಿನಿಮಯ ದರವನ್ನು ಹೇಗೆ ನಿರ್ಧರಿಸಬೇಕೆಂಬುದು ಒಂದು ದೊಡ್ಡ ಸಮಸ್ಯೆ ಇತ್ತು. ಎರಡು ಅಥವಾ ಮೂರು ಬಹು ಮುಖ್ಯ ವಸ್ತುಗಳ ವಿನಿಮಯ ದರ ಎಲ್ಲರಿಗೂ ಗೊತ್ತಿರಬಹುದು. ಒಂದು ಆಡಿನ ಬೆಲೆ ಮೂರು ಚೀಲ ಜೋಳ, ಅಥವಾ ಒಂದು ಆಕಳಿನ ಬೆಲೆ ಹತ್ತು ಚೀಲ ಜೋಳವೆಂದು ವಿನಿಮಯ ದರಗಳು ಇದ್ದಿರಬಹುದು. ಆದರೆ ಬಾಳೆಹಣ್ಣಿನ ಮತ್ತು ಆಡಿನ ವಿನಿಮಯ ದರ ಮತ್ತು ಇನ್ನಿತರ ಎಲ್ಲ ವಸ್ತುಗಳ ವಿನಿಮಯ ದರವನ್ನು ನಿಗದಿ ಪಡಿಸುವದು ಕಠಿಣವಾದ ಕೆಲಸವಾಗಿತ್ತು. ಈ ಸಮಸ್ಯೆಯನ್ನು ಬಗೆಹರಿಸುವದು ಹಣದ ಮುಖ್ಯ ಕೆಲಸ. ಬೇಡಿಕೆಗಳ ದ್ವಿಮುಖ

ಹೊಂದಾಣಿಕೆಯ ಅಭಾವವೂ ವಸ್ತುಗಳ ವಿನಿಮಯದಲ್ಲಿ ಮತ್ತೊಂದು ತೊಂದರೆಯೊಡ್ಡುತ್ತದೆ. ಉದಾ. 'ಅ'ನ ಹತ್ತಿರ ಆಡು ಇದೆ, ಅವನಿಗೆ ಬಟ್ಟೆ ಬೇಕಾಗಿದೆ. 'ಬ'ನ ಹತ್ತಿರ ಬಟ್ಟೆ ಇದೆ. ಆದರೆ ಅವನಿಗೆ ಗೋಧಿ ಬೇಕು. ಆದ್ದರಿಂದ 'ಅ' ಮತ್ತು 'ಬ'ರಲ್ಲಿ ವಿನಿಮಯ ಸಾಧ್ಯವಿಲ್ಲ. 'ಅ'ನಿಗೆ ಬೇಕಾದದ್ದು 'ಬ'ನ ಹತ್ತಿರವಿದ್ದರೂ 'ಬ'ನಿಗೆ ಬೇಕಾದದ್ದು 'ಅ'ನ ಹತ್ತಿರವಿಲ್ಲ. ಇಲ್ಲಿ ಬೇಡಿಕೆಗಳ ದ್ವಿಮುಖ ಹೊಂದಾಣಿಕೆ ಇಲ್ಲ. ಆದ್ದರಿಂದ 'ಅ' ಮತ್ತು 'ಬ' ಕೂಡಿ 'ಕ'ನ ಬಳಿಗೆ ಹೋಗುತ್ತಾರೆ. 'ಕ'ನ ಹತ್ತಿರ ಗೋಧಿ ಇದೆ. ಮತ್ತು ಅವನಿಗೆ ಆಡು ಬೇಕಾಗಿದೆ. ಆದ್ದರಿಂದ 'ಕ'ನು ತನ್ನ ಹತ್ತಿರವಿದ್ದ ಗೋಧಿಯನ್ನು 'ಬ'ನಿಗೆ ಮಾರಿ ಅವನಿಂದ ಬಟ್ಟೆ ಕೊಂಡು ಆ ಬಟ್ಟೆಯನ್ನು 'ಅ'ನಿಗೆ ಮಾರಿ ತಾನು ಆಡನ್ನು ಕೊಳ್ಳುತ್ತಾನೆ. ಹೀಗೆ ಮಾಡುವದು ತೊಂದರೆದಾಯಕವಾಗುತ್ತದೆ. ಹಣದ ಉಪಯೋಗವಿದ್ದಾಗ ಪ್ರತಿಯೊಬ್ಬನೂ ತನ್ನ ವಸ್ತುವನ್ನು ಹಣಕ್ಕೆ ಮಾರುತ್ತಾನೆ. ಬಂದ ಹಣದಿಂದ ತನಗೆ ಬೇಕಾದ ವಸ್ತುವನ್ನು ಅವನು ಕೊಂಡುಕೊಳ್ಳಬಹುದು. ವಸ್ತುಗಳ ನೇರ ವಿನಿಮಯ ಪದ್ಧತಿಯಲ್ಲಿ ತೊಂದರೆಗಳಿದ್ದದ್ದರಿಂದ ಜನರು ವಿನಿಮಯ ಪದ್ಧತಿಯನ್ನು ಬಿಟ್ಟು ಹಣದ ಉಪಯೋಗ ಪ್ರಾರಂಭಿಸಿದರು. ಹಣವು ಇಂಥದೇ ವಸ್ತುಗಳಿಂದ ಮಾಡಿದ್ದಿರಬೇಕೆಂಬ ನಿಯಮವಿಲ್ಲ. ವಿನಿಮಯ ಕಾರ್ಯದಲ್ಲಿ ವಿನಿಮಯದ ಮಾಧ್ಯಮವೆಂದು ಸಾಮಾನ್ಯವಾಗಿ ಸ್ವೀಕರಿಸಿದ ವಸ್ತುವೇ ಹಣವಾಗುತ್ತದೆ. ಪ್ರಾರಂಭದಲ್ಲಿ ಅನೇಕ ವಸ್ತುಗಳನ್ನು ಹಣವೆಂದು ಉಪಯೋಗಿಸಲಾಯಿತು. ಆಕಳು, ಕುರಿ, ಆಡು, ಕವಡೆ ಮುಂತಾದ ವಸ್ತುಗಳು ಬೇರೆ ಬೇರೆ ಕಾಲದಲ್ಲಿ ಅನೇಕ ದೇಶಗಳಲ್ಲಿ ಹಣವೆಂದು ಉಪಯೋಗಿಸಲ್ಪಟ್ಟವು. ಆರ್ಯರ ಕಾಲದಲ್ಲಿ ನಮ್ಮ ದೇಶದಲ್ಲಿ ದನ ಕರುಗಳನ್ನು ಹಣವೆಂದು ಪರಿಗಣಿಸಲಾಗುತ್ತಿತ್ತು. ಆದರೆ ಇವು ನಾಶವಾಗುವ ವಸ್ತುಗಳಾದ್ದರಿಂದ ಕಾಲಕ್ರಮೇಣ ಮಾನವನು ತಾಮ್ರ, ಬೆಳ್ಳಿ, ಬಂಗಾರ ಮೊದಲಾದ ಲೋಹಗಳನ್ನು ಹಣವೆಂದು ಉಪಯೋಗಿಸಲು ಪ್ರಾರಂಭಿಸಿದನು. ಜನರ ಅನುಕೂಲಕ್ಕಾಗಿ ಅರಸರು ಇಂತಹ ಲೋಹಗಳ ಸಣ್ಣ ಸಣ್ಣ ತುಂಡುಗಳನ್ನು ಮಾಡಿ ತಮ್ಮ ಮುದ್ರೆಗಳನ್ನೊತ್ತಿ ನಾಣ್ಯಗಳ ರೂಪದಲ್ಲಿ

ಅವುಗಳನ್ನು ಉಪಯೋಗಿಸ ತೊಡಗಿದರು. ಇಂತಹ ನಾಣ್ಯಗಳು ಪುರಾತನ ಕಾಲದಲ್ಲಿಯೂ ಬಳಕೆಯಲ್ಲಿದ್ದವೆಂದು ಇತಿಹಾಸಕಾರರು ಹೇಳುತ್ತಾರೆ. ಬರಬರುತ್ತಾ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳ ಬದಲಾಗಿ ಕೇಂದ್ರದ ಬ್ಯಾಂಕು ಮುದ್ರಿಸುವ ನೋಟುಗಳು ಬಳಕೆಯಲ್ಲಿ ಬಂದವು. ನೋಟುಗಳ ಜೊತೆಗೆ ವಾಣಿಜ್ಯ ಬ್ಯಾಂಕುಗಳ ಚೆಕ್ಕುಗಳು ಸಹ ಹಣದ ಕೆಲಸ ಮಾಡಲು ಪ್ರಾರಂಭಿಸಿದವು. ಚೆಕ್ಕುಗಳು ಹಣವಲ್ಲದಿದ್ದರೂ ಹಣ ಮಾಡುವ ಎಲ್ಲ ಕೆಲಸವನ್ನೂ ಅವು ಮಾಡುವದರಿಂದ ಅವುಗಳನ್ನು ಸಹಿತ್ತ ನಾವು ಹಣವೆಂದು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಹಣವು ಮುಖ್ಯವಾಗಿ ಐದು ಕೆಲಸಗಳನ್ನು ಮಾಡುತ್ತದೆ.

೧) ವಿನಿಮಯ ಮಾಧ್ಯಮ

ವಸ್ತುಗಳನ್ನು ವಿನಿಮಯ ಮಾಡುವಾಗ ಹಣವು ಮಾಧ್ಯಮವೆಂದು ಕೆಲಸಮಾಡುತ್ತದೆ. ರೈತ ತನ್ನಲ್ಲಿಯ ಉತ್ಪಾದನೆಯನ್ನು ಪೇಟೆಯಲ್ಲಿ ಮಾರಿ ಹಣ ಪಡೆಯುತ್ತಾನೆ. ಆ ಹಣವನ್ನು ಅವನು ತನಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಉಪಯೋಗಿಸಬಹುದು.

೨) ಮೌಲ್ಯ ಮಾಪಕ

ವಸ್ತುಗಳ ಮೌಲ್ಯವನ್ನು ನಿರ್ಧರಿಸುವದು ಹಣದ ಇನ್ನೊಂದು ಕೆಲಸ. ಪ್ರತಿಯೊಂದು ವಸ್ತುವಿನ ಮೌಲ್ಯವನ್ನು ಹಣದ ರೂಪದಲ್ಲಿ ಹೇಳಿದಾಗ ಅದರ ಬೆಲೆ ನಮಗೆ ಗೊತ್ತಾಗುತ್ತದೆ. ಗೋಧಿಯ ಬೆಲೆ ಚೀಲಕ್ಕೆ 700 ರೂಪಾಯಿಗಳು. ಒಂದು ಅಂಗಿಯ ಬೆಲೆ 200 ರೂಪಾಯಿಗಳು. ಒಂದು ಸಿನಿಮಾ ಟಿಕೆಟ್ಟಿನ ಬೆಲೆ 10 ರೂಪಾಯಿಗಳು. ಹೀಗೆ ಪ್ರತಿಯೊಂದು ವಸ್ತು ಹಾಗೂ ಸೇವೆಯ ಬೆಲೆಯನ್ನು ನಾವು ತಿಳಿದುಕೊಳ್ಳಬಹುದು.

೩) ಮೌಲ್ಯ ಸಂಗ್ರಹ

ಹಣವನ್ನು ಜನರು ಸಂಗ್ರಹಿಸಿ ಇಡಬಹುದು. ಅದರಿಂದ ಅದು ನಾಶವಾಗುವದಿಲ್ಲ. ಹಿಂದಿನ ಕಾಲದಲ್ಲಿ ದನಕರುಗಳನ್ನು ಜನರು ಹಣವೆಂದು

ತಿಳಿಯುತ್ತಿದ್ದರೆಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಆದರೆ ದನ ಕರುಗಳು ನಾಶವಾಗುವದರಿಂದ ಅದು ಒಳ್ಳೆಯ ಹಣವಾಗಿರಲಿಲ್ಲ. ಈಗಿನ ಕಾಲದಲ್ಲಿ ಜನರು ತಮ್ಮಲ್ಲಿಯ ಹೆಚ್ಚಿನ ಹಣವನ್ನು ಬ್ಯಾಂಕುಗಳಲ್ಲಿ ಇಡಬಹುದು. ಮತ್ತೆ ತಮಗೆ ಹಣ ಬೇಕೆಂದಾಗ ಅದನ್ನು ಅವರು ಪಡೆಯ ಬಹುದು. ಬೆಳ್ಳಿ ಬಂಗಾರದ ನಾಣ್ಯಗಳಿದ್ದ ಕಾಲದಲ್ಲಿ ಜನರು ತಮ್ಮಲ್ಲಿಯೇ ಹಣವನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದರು. ಬೆಳ್ಳಿ - ಬಂಗಾರದ ನಾಣ್ಯಗಳನ್ನು ಜನರು ನೂರಾರು ವರುಷಗಳವರೆಗಿಟ್ಟರೂ ಅವುಗಳು ನಾಶ ಹೊಂದುವದಿಲ್ಲ.

ಳ) ಭವಿಷ್ಯತ್ತಿನ ಕೊಡುಗೆಯ ಪ್ರಮಾಣ

ಹಣವನ್ನು ಜನರು ಬೇರೆಯವರಿಂದ ಸಾಲವಾಗಿ ಪಡೆಯಬಹುದು ಮತ್ತು ಕೊಡಬಹುದು. ಹಣದ ಮೌಲ್ಯವು ಸರ್ವಸಾಧಾರಣವಾಗಿ ಬದಲಿಯಾಗದೆ ಇರುವದರಿಂದ ಹಣ ಹೆಚ್ಚಿಗಿದ್ದ ಮನುಷ್ಯನು ಹಣ ಬೇಕಾದ ಮತ್ತೊಬ್ಬನಿಗೆ ಸಾಲ ಕೊಡುತ್ತಾನೆ. ಸಾಲ ಪಡೆದವನು ಕೆಲವು ಸಮಯದ ನಂತರ ಹಣವನ್ನು ತಿರುಗಿ ಕೊಡುತ್ತಾನೆ. ಈ ರೀತಿಯ ಸಾಲ ಕೊಡುವ, ತೆಗೆದುಕೊಳ್ಳುವ ವ್ಯವಹಾರ ಹಣದ ಮೊತ್ತದಲ್ಲಿ ನಡೆಯುತ್ತದೆ.

ಖ) ಮೌಲ್ಯದ ಸ್ಥಳಾಂತರ

ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುವದು ಸುಲಭವಾಗಿದೆ. ಜನರು ಒಂದು ಊರಿನಿಂದ ಮತ್ತೊಂದು ಊರಿಗೆ ವಲಸೆ ಹೋಗುವ ಪ್ರಸಂಗದಲ್ಲಿ ತಮ್ಮ ಆಸ್ತಿಯನ್ನು ಮಾರಿ ಬಂದ ಹಣದಿಂದ ಹೊಸ ಊರಿನಲ್ಲಿ ಆಸ್ತಿ ಪಡೆಯಬಹುದು.

ಹಣದ ಉಪಯೋಗದಿಂದ ಈ ರೀತಿ ಅನೇಕ ಅನುಕೂಲತೆಗಳಿರುವದರಿಂದ ಈಗಿನ ಕಾಲದಲ್ಲಿ ಪ್ರತಿಯೊಬ್ಬನೂ ಹಣವನ್ನು ಉಪಯೋಗಿಸುತ್ತಾನೆ. ವಸ್ತುಗಳ ನೇರ ವಿನಿಮಯ ಈಗ ಇಲ್ಲ.

ಯಾವದೇ ವಸ್ತುವನ್ನು ಹಣವೆಂದು ಉಪಯೋಗಿಸಬೇಕಾದರೆ ಅದಕ್ಕೆ ನಾಲ್ಕು ಗುಣಗಳು ಅವಶ್ಯವಾಗಿರುತ್ತವೆ. ಅದು ವಿಭಜಿಸಲು ಅನುಕೂಲವಾಗಿರಬೇಕು. ಏಕರೂಪತೆ ಹೊಂದಿರಬೇಕು. ಬಹುಕಾಲ ಬಾಳಿಕೆ ಬರುವಂತಿರಬೇಕು ಮತ್ತು ಸುಲಭವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಅನುಕೂಲವಾಗಿರಬೇಕು. ಇಂತಹ ಗುಣಗಳನ್ನು ಹೊಂದಿದ ವಸ್ತುವು ಒಳ್ಳೆಯ ಹಣವಾಗುತ್ತದೆ. ಬೆಳ್ಳಿ, ಬಂಗಾರ, ತಾಮ್ರ ಮುಂತಾದ ಲೋಹಗಳಿಗೆ ಈ ಎಲ್ಲ ಗುಣಗಳಿರುವದರಿಂದ ಅವು ಒಳ್ಳೆಯ ಹಣದ ವಸ್ತುಗಳಾಗಿದ್ದವು.

### *೬.೧ ಬ್ಯಾಂಕುಗಳು*

ಜನರು ತಮ್ಮಲ್ಲಿಯ ಹೆಚ್ಚಿನ ಹಣವನ್ನು ಸುರಕ್ಷಿತೆಗಾಗಿ ಸಾಹುಕಾರರಲ್ಲಾಗಲಿ ಅಥವಾ ವ್ಯಾಪಾರಿಯ ಬಳಿಯಾಗಲಿ ಇಡಲು ಪ್ರಾರಂಭಿಸಿದರು. ಹಣ ಸ್ವೀಕರಿಸಿದ ಸಾಹುಕಾರ ಹಣ ತನ್ನಲ್ಲಿದೆ ಎಂದು ಒಂದು ರಶೀದಿಯನ್ನು ಹಣವಿಟ್ಟವನಿಗೆ ಕೊಡುತ್ತಿದ್ದನು. ಈ ರಶೀದಿಯ ಮೇಲೆ ಹಣವಿಟ್ಟವನ ಹೆಸರು ಇರುತ್ತಿದ್ದುದರಿಂದ ಅವು ಒಂದು ವೇಳೆ ಕಳುವಾದರೂ ಕದ್ದ ವ್ಯಕ್ತಿ ಈ ರಶೀದಿ ತನ್ನದೆಂದು ಸಿದ್ಧಮಾಡಿ ತೋರಿಸಬೇಕಾಗುತ್ತಿತ್ತು. ಹಣವನ್ನು ಠೇವಣಿಯಾಗಿಟ್ಟ ವ್ಯಕ್ತಿ ತನಗೆ ಬೇಕಾದಾಗ ಹಣವನ್ನು ತೆಗೆದು ಕೊಳ್ಳಬಹುದಾಗಿತ್ತು. ಮತ್ತು ಠೇವಣಿ ಮಾಡಬಹುದಾಗಿತ್ತು.

### ಪತ್ತಿನ ಗುಣಕ

ಹಣವನ್ನು ಠೇವಣಿಯಾಗಿಟ್ಟುಕೊಂಡ ಸಾಹುಕಾರರೇ ಮುಂದೆ ಬ್ಯಾಂಕುಗಳಾಗಿ ಪರಿವರ್ತನಗೊಂಡರು. ತಮ್ಮಲ್ಲಿ ಹಣವನ್ನು ಠೇವಣಿಯಾಗಿಟ್ಟ ವ್ಯಕ್ತಿಗಳು ತಾವು ಬೇರೆಯವರಿಗೆ ಹಣ ಕೊಡಬೇಕಾದಾಗ ತಮ್ಮ ಠೇವಣಿ ಹಣದ ಮೇಲೆ ಟಿಪ್ಪಣಿ ಕೊಡಲು ಪ್ರಾರಂಭಿಸಿದರು. ಎಷ್ಟೋ ವೇಳೆ ಇಂತಹ ಟಿಪ್ಪಣಿಗಳೇ ವ್ಯವಹಾರದಲ್ಲಿ ಉಪಯೋಗವಾಗಹತ್ತಿದವು. ನಿಜವಾದ ಹಣ ಸುರಕ್ಷಿತ ಠೇವಣಿಯಿಂದ ಹೊರ ಬರುತ್ತಿರಲಿಲ್ಲ. ಹೀಗಾಗಿ ಬ್ಯಾಂಕುಗಳಲ್ಲಿ ಎಷ್ಟೋ ಹಣ ಹೊರ ಹೋಗದೆ ಅಲ್ಲೇ ಇರುತ್ತಿತ್ತು. ಇಂತಹ ಹಣವನ್ನು ಬ್ಯಾಂಕುಗಳು ಬೇರೆಯವರಿಗೆ ಸಾಲವಾಗಿ

ಕೊಡಲು ಪ್ರಾರಂಭಿಸಿದವು. ಹಣದ ಮಾಲೀಕರಿಗೆ ಈ ವಿಷಯ ಗೊತ್ತೇ ಆಗುತ್ತಿರಲಿಲ್ಲ. ಯಾಕೆಂದರೆ ತಮಗೆ ಹಣ ಬೇಕೆಂದಾಗ ಬ್ಯಾಂಕುಗಳು ಅವರಿಗೆ ಹಣ ಕೊಡುತ್ತಿದ್ದವು. ಹೀಗಾಗಿ ಬ್ಯಾಂಕಿನಲ್ಲಿದ್ದ ಹಣದ ಮೇಲೆ ಪತ್ತು ನಿರ್ಮಾಣ ವಾಗತೊಡಗಿತು. ಇದನ್ನು ನಾವು ಒಂದು ಉದಾಹರಣೆಯಿಂದ ತಿಳಿದುಕೊಳ್ಳೋಣ. ಒಬ್ಬ ವ್ಯಕ್ತಿ ಬ್ಯಾಂಕಿನಲ್ಲಿ 100 ರೂಪಾಯಿಗಳನ್ನು ಠೇವಣಿಯಾಗಿಟ್ಟನೆಂದು ನಾವು ಭಾವಿಸುವಾ. ಎಷ್ಟೋ ವೇಳೆಗಳಲ್ಲಿ ಅವನು ಬೇರೆಯವರಿಗೆ ಹಣ ಕೊಡಬೇಕಾದರೆ ಚೆಕ್ಕುಗಳ ಮುಖಾಂತರ ಕೊಡುತ್ತಾನೆ. ಒಮ್ಮೊಮ್ಮೆ ಬ್ಯಾಂಕಿನಿಂದ ಹಣವನ್ನು ತೆಗೆದು ಬೇರೆಯವರಿಗೆ ಕೊಡುತ್ತಾನೆ. ಅವನು 10 ಪ್ರಸಂಗಗಳಲ್ಲಿ 9 ಸಾರೆ ಚೆಕ್ಕಿನಿಂದ, ಕೇವಲ ಒಂದು ಸಾರೆ ಹಣದಿಂದ ಬೇರೆಯವರ ಜೊತೆ ವ್ಯವಹರಿಸುತ್ತಾನೆಂದು ಬ್ಯಾಂಕಿಗೆ ಅನುಭವದ ಮೂಲಕ ಗೊತ್ತಾಗುತ್ತದೆ. ಆದ್ದರಿಂದ ಅವನು ಬ್ಯಾಂಕಿನಲ್ಲಿಟ್ಟ 100 ರೂಪಾಯಿಗಳಲ್ಲಿ ಕೇವಲ 10 ರೂಪಾಯಿ ಕ್ರಿಯಾತ್ಮಕವಾಗಿರುತ್ತದೆ. 90 ರೂಪಾಯಿ ನಿಷ್ಕ್ರಿಯವಾಗಿರುತ್ತದೆ. ಬ್ಯಾಂಕು ಈ 90 ರೂಪಾಯಿಗಳನ್ನು ಬೇರೆಯವರಿಗೆ ಹೆಚ್ಚಿನ ಬಡ್ಡಿಯಂತೆ ಸಾಲ ಕೊಡುತ್ತದೆ. ಆ ಸಾಲ ತೆಗೆದುಕೊಂಡ ವ್ಯಕ್ತಿಯೂ 81 ರೂಪಾಯಿಗಳನ್ನು ಚೆಕ್ಕಿನ ಮುಖಾಂತರ, ಕೇವಲ 9 ರೂಪಾಯಿಗಳನ್ನು ಹಣದ ಮುಖಾಂತರ ಬೇರೆಯವರಿಗೆ ಕೊಡುತ್ತಾನೆ. ಆ ೮೧ರೂಪಾಯಿಗಳನ್ನು ಬ್ಯಾಂಕು ಬೇರೆಯವರಿಗೆ ಸಾಲ ಕೊಡುತ್ತದೆ. ಈ ಕ್ರಿಯೆ ಹೀಗೆ ಮುಂದುವರಿದು 100 ರೂಪಾಯಿಗಳ ಠೇವಣಿ ಕೊನೆಗೆ 1000 ರೂಪಾಯಿಗಳಿಗೆ ಏರುತ್ತದೆ. ಮೂಲ 100 ರೂಪಾಯಿ 10 ಪಟ್ಟು ಹೆಚ್ಚಾಗುತ್ತದೆ. ಯಾಕೆಂದರೆ ಜನರು ಬ್ಯಾಂಕಿನಿಂದ ಹಣವನ್ನು ಪಡೆಯದೆ ಚೆಕ್ಕುಗಳ ಮುಖಾಂತರ ವ್ಯವಹರಿಸುತ್ತಾರೆ. ಆದ್ದರಿಂದ ಬ್ಯಾಂಕುಗಳು ಪತ್ತನ್ನು ನಿರ್ಮಿಸುತ್ತವೆ.

### *೬.೨ ಕಾನೂನುಬದ್ಧ ಹಣ*

ಕಾನೂನಿನ ಪ್ರಕಾರ ಪ್ರತಿಯೊಬ್ಬರೂ ಮನ್ನಿಸಿ ಸ್ವೀಕರಿಸಬೇಕಾದ ಹಣಕ್ಕೆ ಕಾನೂನು ಬದ್ಧ ಹಣವೆಂದು ಹೆಸರು. ಇಂತಹ ಹಣವನ್ನು ವ್ಯವಹಾರದಲ್ಲಿ

ಎಲ್ಲರೂ ಸ್ವೀಕರಿಸಲೇಬೇಕಾಗುತ್ತದೆ. ನಮ್ಮ ದೇಶದಲ್ಲಿ ನಾಣ್ಯಗಳು ಹಾಗೂ ಕರೆನ್ಸಿ ನೋಟುಗಳು ಕಾನೂನುಬದ್ಧ ಹಣವಾಗಿವೆ.

## ೬.೩ *ಗ್ರೇಷಮ್‌ನ ನಿಯಮ*

ಕೆಟ್ಟ ಹಣವು ಒಳ್ಳೆಯ ಹಣವನ್ನು ಚಲಾವಣೆಯಿಂದ ಹೊರದೂಡುತ್ತದೆ ಎಂಬ ನಿಯಮವನ್ನು ಗ್ರೇಷಮ್ ಎಂಬವನು ಪ್ರತಿಪಾದಿಸಿದನು. ಮೊದಲಿನ ಕಾಲದಲ್ಲಿ ಸವಕಳಿ ಬಂದ ನಾಣ್ಯಗಳು ಮತ್ತು ಹೊಸ ನಾಣ್ಯಗಳು ಕೂಡಿಯೇ ಚಲಾವಣೆಯಲ್ಲಿದ್ದಾಗ, ಜನರು ಮೊದಲು ಸವಕಳಿ ಬಂದ ನಾಣ್ಯವನ್ನು ಖರ್ಚು ಮಾಡುತ್ತಿದ್ದರು. ಹೀಗಾಗಿ ಸವಕಳಿ ಬಂದ ನಾಣ್ಯ ಹೆಚ್ಚು ಚಲಾವಣೆ ಯಲ್ಲಿರುತ್ತಿತ್ತು. ಒಳ್ಳೆಯ ನಾಣ್ಯವನ್ನು ಜನರು ತಮ್ಮ ಬಳಿಯೇ ಇಟ್ಟು ಕೊಳ್ಳುತ್ತಿದ್ದರು. ಈ ನಿಯಮ ಈಗಲೂ ಕೆಲಸ ಮಾಡುವದನ್ನು ನಾವು ನೋಡುತ್ತೇವೆ. ನಮ್ಮ ಬಳಿ ಹೊಸ ಮತ್ತು ಮಾಸಿದ ನೋಟುಗಳೆರಡೂ ಇದ್ದಾಗ ಹೊಸ ನೋಟುಗಳನ್ನು ನಮ್ಮ ಬಳಿಯೇ ಇಟ್ಟುಕೊಂಡು ಮೊದಲು ಮಾಸಿದ ನೋಟನ್ನು ನಾವು ಖರ್ಚು ಮಾಡುತ್ತೇವೆ. ಹೀಗಾಗಿ ಮಾಸಿದ ನೋಟು ಹೆಚ್ಚು ಚಲಾವಣೆಯಲ್ಲಿರುತ್ತದೆ.

## ೬.೪ *ಅತಿ ಪ್ರಸರಣ ಅಥವಾ ಹಣದುಬ್ಬರ*

ದೇಶದಲ್ಲಿ ಹಣದ ಪೂರೈಕೆಯು ಒಟ್ಟು ಉತ್ಪಾದನೆಯ ಗತಿಗಿಂತ ಹೆಚ್ಚಿನ ಗತಿಯಲ್ಲಿ ಬೆಳೆದರೆ ಸಾಮಾನ್ಯ ಬೆಲೆಗಳ ಮಟ್ಟ ಏರುತ್ತದೆ. ಇದಕ್ಕೆ ಹಣದುಬ್ಬರವೆಂದು ಹೆಸರು. ಹಣದುಬ್ಬರದಿಂದ ಜನಸಾಮಾನ್ಯನಿಗೆ ತೊಂದರೆಯಾಗುತ್ತದೆ. ಕಡಿಮೆ ಗತಿಯ ಹಣದುಬ್ಬರ ಉತ್ಪಾದನೆಗೆ ಪ್ರೋತ್ಸಾಹದಾಯಕವಾಗಬಹುದೆಂದು ಕೆಲ ಅರ್ಥಶಾಸ್ತ್ರಜ್ಞರ ವಾದ. ಬೆಲೆಗಳ ಮಟ್ಟ ಏರುತ್ತಿದ್ದಾಗ ಉತ್ಪಾದಕನ ಲಾಭ ಹೆಚ್ಚುವದರಿಂದ ಅವರು ಹೆಚ್ಚಿನ ಉತ್ಪತ್ತಿ ಮಾಡುತ್ತಾರೆ. ಹೀಗಾಗಿ ದೇಶದ ಉತ್ಪಾದನೆ ಹೆಚ್ಚಿಗೆ ಆಗುವದೆಂದು ಅವರ ಅಭಿಪ್ರಾಯ. ಆದರೆ ಹಣಕಾಸುವಾದಿ ಅರ್ಥಶಾಸ್ತ್ರಜ್ಞರ ಪ್ರಕಾರ

ಹಣದುಬ್ಬರವು ಎಷ್ಟೇ ಕಡಿಮೆ ಪ್ರಮಾಣದಲ್ಲಿದ್ದರೂ ಅದು ಕೆಟ್ಟದ್ದು. ಆದ್ದರಿಂದ ಸರಕಾರವು ಹಣದುಬ್ಬರಕ್ಕೆ ಆಸ್ಪದ ಮಾಡಿಕೊಡಬಾರದೆಂದು ಅವರ ಅಭಿಪ್ರಾಯ.

ಸಾಮಾನ್ಯ ಬೆಲೆಗಳ ಮಟ್ಟದಲ್ಲಿ ಬದಲಾವಣೆಯಾದಾಗ ಕೆಲವೊಂದು ವರ್ಗದ ಜನರು ಲಾಭ ಪಡೆದುಕೊಳ್ಳಬಹುದು ಅಥವಾ ನಷ್ಟಕ್ಕೊಳಗಾಗಬಹುದು. ಬಹಳ ಕಾಲದವರೆಗಿನ ಒಪ್ಪಂದ ಮಾಡಿಕೊಂಡ ವ್ಯಾಪಾರಸ್ಥರು ಬೆಲೆಗಳ ಬದಲಾವಣೆಯಿಂದ ತೊಂದರೆಗೊಳಗಾಗಬಹುದು. ಒಬ್ಬ ವ್ಯಾಪಾರಿ ತನ್ನ ಅಂಗಡಿಯ ಬಾಡಿಗೆಯ ಬಗ್ಗೆ ಕಟ್ಟದ ಮಾಲಿಕನ ಜೊತೆ ಒಪ್ಪಂದ ಮಾಡಿಕೊಂಡಿದ್ದಾನೆಂದು ನಾವು ಭಾವಿಸೋಣ. ಅವನು ಕಟ್ಟಡದ ಮಾಲಿಕನಿಗೆ ನಿಗದಿತ ಬಾಡಿಗೆ ಕೊಡಲು ಒಪ್ಪಿರುತ್ತಾನೆ. ಆದರೆ ವಸ್ತುಗಳ ಬೆಲೆಗಳು ಇಳಿದು ವ್ಯಾಪಾರಿಯ ಆದಾಯವು ಇಳಿದಾಗ ಆ ಬಾಡಿಗೆಯನ್ನು ಕೊಡುವದು ಅವನಿಗೆ ತೊಂದರೆಯಾಗುತ್ತದೆ. ಒಬ್ಬ ಮನುಷ್ಯ ತನ್ನ ಹಣವನ್ನು ದೀರ್ಘ ಕಾಲಾವಧಿಯ ಸಾಲದಲ್ಲಿ ತೊಡಗಿಸಿದ್ದರೆ ಬೆಲೆಗಳ ಇಳಿಕೆಯಿಂದ ಅವನಿಗೆ ಲಾಭವಾಗುತ್ತದೆ. ಯಾಕೆಂದರೆ ಅವನ ಬಂಡವಾಳ ಜೋಡಣೆಯಿಂದ ಬರುವ ಸ್ಥಿರ ಆದಾಯ ಬೆಲೆಗಳ ಇಳಿಕೆಯಿಂದ ಹೆಚ್ಚಿನ ವಿನಿಮಯ ಶಕ್ತಿಯನ್ನು ಪಡೆಯುತ್ತದೆ. ಅವನು ತನ್ನ ಹಣವನ್ನು ಮರಳಿ ಪಡೆದರೆ ಆ ಹಣವು ಬೆಲೆ ಇಳಿದಾಗ ಹೆಚ್ಚಿನ ಕೊಳ್ಳುವ ಶಕ್ತಿಯನ್ನು ಪಡೆದಿರುತ್ತದೆ.

ಬೆಲೆಗಳ ಮಟ್ಟ ಇಳಿದರೆ ಸಾಲ ಕೊಟ್ಟವರಿಗೆ ಲಾಭ ಮತ್ತು ಸಾಲಗಾರರಿಗೆ ನಷ್ಟವಾಗುತ್ತದೆ. ಆದರೆ ಬೆಲೆಗಳ ಮಟ್ಟ ಏರುತ್ತಿದ್ದರೆ ಸಾಲಗಾರರಿಗೆ ಲಾಭವಾಗುತ್ತದೆ ಮತ್ತು ಸಾಲಕೊಟ್ಟವರಿಗೆ ನಷ್ಟವಾಗುತ್ತದೆ. ಸ್ಥಿರ ಆದಾಯ ಹೊಂದಿದ ಜನರಿಗೆ ಬೆಲೆಗಳ ಏರಿಕೆಯಿಂದ ನಷ್ಟವಾಗುತ್ತದೆ. ಆದರೆ ಆದಾಯ ಹೆಚ್ಚುತ್ತಿರುವ ಜನರಿಗೆ ಬೆಲೆ ಏರಿಕೆಯಿಂದ ನಷ್ಟವೇನೂ ಇಲ್ಲ.

ಉತ್ಪಾದಕ ವರ್ಗವು ಸರ್ವಸಾಮಾನ್ಯವಾಗಿ ಬೆಲೆಗಳ ಏರಿಕೆಯಿಂದ ಲಾಭ ಪಡೆಯುತ್ತದೆ. ಬೆಲೆಗಳು ಏರಿದಂತೆ ಶ್ರಮಿಕರ ಕೂಲಿ ತಕ್ಷಣ ಏರದೆ

ಇರುವದರಿಂದ, ಶ್ರಮಿಕರಿಗೆ ಕೊಡುವ ಕೂಲಿಯ ಮೊತ್ತ ಬೆಲೆಗಳು ಏರಿದ ಪ್ರಮಾಣದಲ್ಲಿ ಹೆಚ್ಚಾಗದೆ ಇರುವದರಿಂದ, ಉತ್ಪಾದಕರು ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಿದಾಗ ಹೆಚ್ಚಿನ ಲಾಭ ಪಡೆಯುತ್ತಾರೆ. ಅವರ ಇನ್ನುಳಿದ ಉತ್ಪಾದನಾ ವೆಚ್ಚಗಳು ಬೆಲೆ ಏರಿದ ಪ್ರಮಾಣದಲ್ಲಿ ಏರದೆ ಇದ್ದಾಗ ಅವರು ಗಳಿಸುವ ಲಾಭ ಹೆಚ್ಚಿಗೆ ಆಗುತ್ತದೆ.

### *೬.೫ ಹಣದ ಮೊತ್ತದ ಸಿದ್ಧಾಂತ ಹಾಗೂ ಬೆಲೆಗಳು.*

ನಿಗದಿತ ಹಣದ ಮೊತ್ತ ನಿಗದಿತ ವಸ್ತುಗಳ ಜೊತೆ ವಿನಿಮಯವಾದಾಗ ಒಂದು ಸಾಮಾನ್ಯ ಬೆಲೆಗಳ ಮಟ್ಟ ಅಸ್ತಿತ್ವದಲ್ಲಿ ಬರುತ್ತದೆ. ಹಣದ ಮೊತ್ತದಲ್ಲಿ ಹೆಚ್ಚಳವಾದರೆ ಮತ್ತು ವಸ್ತುಗಳ ಮೊತ್ತ ಅಷ್ಟೇ ಉಳಿದರೆ, ಬೆಲೆಗಳ ಮಟ್ಟದಲ್ಲಿ ಹೆಚ್ಚಳವಾಗಿ, ಹಣದ ಬೆಲೆ ಕಡಿಮೆಯಾಗುತ್ತದೆ. ಹಣದ ಮೊತ್ತ ಕಡಿಮೆಯಾಗಿ ವಸ್ತುಗಳ ಮೊತ್ತ ಅಷ್ಟೇ ಉಳಿದಾಗ ಬೆಲೆಗಳ ಮಟ್ಟದಲ್ಲಿ ಕಡಿಮೆಯಾಗಿ ಹಣದ ಬೆಲೆ ಏರುತ್ತದೆ. ಈ ರೀತಿಯ ಹಣದ ಮೊತ್ತ ಹಾಗೂ ಬೆಲೆಯ ಮಟ್ಟದ ನಡುವಿನ ಸಂಬಂಧದ ವಿವರಣೆಯನ್ನು ಮೊತ್ತದ ಸಿದ್ಧಾಂತವೆಂದು ಕರೆಯಲಾಗುತ್ತದೆ. ಇದರ ಪ್ರಕಾರ ಚಲಾವಣೆಯಲ್ಲಿರುವ ಹಣದ ಮೊತ್ತ ಬೆಲೆಯ ಮಟ್ಟವನ್ನು ನಿರ್ಧರಿಸುತ್ತದೆ. ಹಣದ ಪೂರೈಕೆ ಹೆಚ್ಚಾದಾಗ ಬೆಲೆಗಳ ಮಟ್ಟ ಏರುತ್ತದೆ. ಹಣದ ಪೂರೈಕೆ ಕಡಿಮೆಯಾದಾಗ ಬೆಲೆಗಳ ಮಟ್ಟ ಇಳಿಯುತ್ತದೆ.

ಹಣದ ಉಪಯೋಗದಲ್ಲಿಯ ಇನ್ನೊಂದು ಸಂಗತಿಯನ್ನು ನಾವಿಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ನಾಣ್ಯ ಅಥವಾ ನೋಟು ಮೇಲಿಂದ ಮೇಲೆ ಒಬ್ಬರಿಂದ ಮತ್ತೊಬ್ಬರಿಗೆ ವರ್ಗವಾಗಿ ಹೋಗುವದರಿಂದ ಅದರ ಉಪಯೋಗದ ಗತಿ ಹೆಚ್ಚು ಕಡಿಮೆಯಾಗಬಹುದು. ಇಂತಹ ಚಲಾವಣೆಯ ಗತಿಯು ಹೆಚ್ಚಿಗೆ ಆದಾಗ ಅದರ ಪರಿಣಾಮ ಹಣದ ಪೂರೈಕೆಯಲ್ಲಿ ಹೆಚ್ಚಿಗೆ ಆದ ಪರಿಣಾಮಕ್ಕೆ ಸಮವಾಗುತ್ತದೆ. ಅದೇ ರೀತಿಯಾಗಿ ಹಣದ ಚಲಾವಣೆಯ ಗತಿಯು

ಕಡಿಮೆಯಾದಾಗ ಅದರ ಪರಿಣಾಮ ಹಣದ ಪೂರೈಕೆ ಕಡಿಮೆಯಾದಾಗಿನ ಪರಿಣಾಮಕ್ಕೆ ಸಮನಾಗಿರುತ್ತದೆ.

ನಾವು ನಾಣ್ಯಗಳು, ನೋಟುಗಳು ಮತ್ತು ಸಾಲದ ಸಾಧನಗಳನ್ನು ಅವುಗಳ ಚಲಾವಣೆಯ ಗುಣಕದಿಂದ ಗುಣಿಸಿದಾಗ ಹಣದ ಪೂರೈಕೆಯ ಒಟ್ಟು ಮೊತ್ತ ನಮಗೆ ಸಿಗುತ್ತದೆ. ಹಣದ ಬೇಡಿಕೆ ಉತ್ಪಾದಿತ ವಸ್ತುಗಳ ಮೊತ್ತವನ್ನು ಅವಲಂಬಿಸಿದೆ. ಹಣದ ವಿನಿಮಯ ಬೆಲೆ ಅಥವಾ ಬೆಲೆಗಳ ಮಟ್ಟ ಹಣದ ಬೇಡಿಕೆ ಹಾಗೂ ಪೂರೈಕೆಯನ್ನು ಅವಲಂಬಿಸಿರುತ್ತದೆ. ಹಣದ ಪೂರೈಕೆ ಹೆಚ್ಚಿಗೆ ಇದ್ದಾಗ ಅದರ ಬೆಲೆ ಕಡಿಮೆ ಇರುತ್ತದೆ. ಅದರ ಪೂರೈಕೆ ಕಡಿಮೆ ಇದ್ದಾಗ ಅದರ ಬೆಲೆ ಹೆಚ್ಚಿಗೆ ಇರುತ್ತದೆ.

### ೬.೬ *ಬೆಲೆಗಳ ಸಾಮಾನ್ಯ ಮಟ್ಟವನ್ನು ಅಳೆಯುವುದು.*

ಹಣದ ವಿನಿಮಯ ಶಕ್ತಿಯಲ್ಲಿಯ ಬದಲಾವಣೆಗಳನ್ನು ಸೂಚ್ಯಾಂಕದಿಂದ ಅಳೆಯಲಾಗುತ್ತದೆ. ಈ ಸೂಚ್ಯಾಂಕದ ಸಹಾಯದಿಂದ, ಒಂದು ಅವಧಿಯಿಂದ ಮತ್ತೊಂದು ಅವಧಿಯವರೆಗಿನ ಬೆಲೆಗಳ ಮಟ್ಟದಲ್ಲಿ ಆದ ಬದಲಾವಣೆಯನ್ನು ತಿಳಿಯಬಹುದು. ಸೂಚ್ಯಾಂಕವನ್ನು ತಯಾರಿಸುವಾಗ ಒಂದು ವರುಷವನ್ನು ತಳಹದಿ ವರುಷವೆಂದು ತಿಳಿದು ಆ ವರುಷದಲ್ಲಿದ್ದ ಬೆಲೆಯ ಮಟ್ಟವನ್ನು ಒಂದು ನೂರಕ್ಕೆ ಸಮವೆಂದು ತಿಳಿಯಲಾಗುವುದು. ಮುಂದಿನ ವರುಷದಲ್ಲಿ ಬೆಲೆಗಳ ಮಟ್ಟ ಶೇಕಡಾ 15ರಷ್ಟು ಹೆಚ್ಚಾದರೆ ಆ ವರುಷದ ಸೂಚ್ಯಂಕ 115 ಆಗಿದೆಯೆಂದು ತಿಳಿಯಲಾಗುತ್ತದೆ. ಸೂಚ್ಯಂಕಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ತಯಾರಿಸಲಾಗುತ್ತದೆ. ಠೋಕ ವ್ಯಾಪಾರದ ಸೂಚ್ಯಂಕ ಮತ್ತು ಚಿಲ್ಲರೆ ವ್ಯಾಪಾರದ ಸೂಚ್ಯಂಕ. ಜನಸಾಮಾನ್ಯರ ಜೀವನ ನಿರ್ವಹಣೆಯ ವೆಚ್ಚದಲ್ಲಾಗುವ ಬದಲಾವಣೆಗಳನ್ನು ತಿಳಿಯಬೇಕಾದರೆ ನಾವು ಚಿಲ್ಲರೆ ವ್ಯಾಪಾರದ ಸೂಚ್ಯಂಕವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಸಾಮಾನ್ಯ ಬೆಲೆಗಳ ಮಟ್ಟ ಏರಿದಾಗ ಎಲ್ಲ ವಸ್ತುಗಳ ಬೆಲೆಗಳೂ ಏರಿವೆಯೆಂದು ಹೇಳಲಾಗದು. ಕೆಲವೊಂದು ವಸ್ತುಗಳ ಬೆಲೆಗಳು ಇಳಿದಿರಲೂ ಬಹುದು. ಆದ್ದರಿಂದ ಬೆಲೆಗಳ ಸೂಚ್ಯಂಕವನ್ನು ತಯಾರಿಸುವಾಗ ಎಲ್ಲ ಪ್ರತಿನಿಧಿ ವಸ್ತುಗಳ ಬೆಲೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅದೂ ಅಲ್ಲದೆ ಎಲ್ಲ ವಸ್ತುಗಳನ್ನೂ ನಾವು ಒಂದೇ ಪ್ರಮಾಣದಲ್ಲಿ ಉಪಯೋಗಿಸುವದಿಲ್ಲ. ಒಂದು ಸಾಮಾನ್ಯ ಕುಟುಂಬ ತಿಂಗಳಿಗೆ ಇಪ್ಪತ್ತು ಕೆ.ಜಿ. ಅಕ್ಕಿಯನ್ನು ಉಪಯೋಗಿಸುತ್ತದೆಯೆಂದು ನಾವು ಭಾವಿಸೋಣ. ಅದೇ ಕುಟುಂಬ ತಿಂಗಳಿಗೆ ಒಂದು ಕೆ. ಜಿ. ಉಪ್ಪನ್ನು ಬಳಸಬಹುದು. ಅಕ್ಕಿಯ ಬೆಲೆ ಶೇಕಡಾ 25ರಷ್ಟು ಹೆಚ್ಚಾಗಿ, ಉಪ್ಪಿನ ಬೆಲೆ 25ರಷ್ಟು ಇಳಿದರೆ ಆ ಕುಟುಂಬದ ಮೇಲೆ ಈ ಬೆಲೆಗಳ ಏರಿಳಿಕೆಯಿಂದ ಯಾವ ಪರಿಣಾಮವೂ ಆಗಿಲ್ಲವೆಂದು ನಾವು ಭಾವಿಸಿದರೆ ತಪ್ಪಾಗುತ್ತದೆ. ಬೇರೆ ಬೇರೆ ವಸ್ತುಗಳಿಗೆ ಆ ಕುಟುಂಬ ಬೇರೆ ಬೇರೆ ಮಹತ್ವವನ್ನು ಕೊಡುತ್ತದೆ. ಆದ್ದರಿಂದ ನಾವು ವಸ್ತುಗಳಿಗೆ ಬೇರೆ ಬೇರೆ ಭಾರವನ್ನು ಕೊಡಬೇಕಾಗುತ್ತದೆ. ಅಕ್ಕಿಗೆ ಹೆಚ್ಚಿನ ಭಾರ, ಉಪ್ಪಿಗೆ ಅತೀ ಕಡಿಮೆ ಭಾರವನ್ನು ಹಿಡಿದು ನಾವು ಬೆಲೆ ಸೂಚ್ಯಂಕವನ್ನು ತಯಾರಿಸಿದರೆ, ಬೆಲೆಯ ಏರಿಳಿಕೆಯಿಂದ ಆ ಕುಟುಂಬದ ಮೇಲಾದ ಪರಿಣಾಮವನ್ನು ನಾವು ತಿಳಿದುಕೊಳ್ಳಬಹುದು.

●

## ೭. ಅಂತರ ರಾಷ್ಟ್ರೀಯ ವ್ಯಾಪಾರ

ದೇಶ ದೇಶಗಳ ನಡುವೆ ನಡೆಯುವ ವಸ್ತುಗಳ ಹಾಗೂ ಸೇವೆಗಳ ವಿನಿಮಯಕ್ಕೆ ಅಂತರರಾಷ್ಟ್ರೀಯ ವ್ಯಾಪಾರವೆಂದು ಕರೆಯಲಾಗುತ್ತದೆ. ದೇಶ ದೇಶಗಳ ನಡುವೆ ವ್ಯಾಪಾರವೇಕೆ ನಡೆಯುತ್ತದೆ ಎಂಬುದನ್ನು ವಿವರಿಸಲು ಅರ್ಥಶಾಸ್ತ್ರಜ್ಞರು ಮೊದಲಿನಿಂದಲೂ ಪ್ರಯತ್ನಿಸಿದ್ದಾರೆ. ತೀರ ಹಳೆಯ ಸಿದ್ಧಾಂತ ವೆಂದರೆ ವ್ಯಾಪಾರಿ ಪಂಥದ ಸಿದ್ಧಾಂತ. ಅವರ ಪ್ರಕಾರ ಜಗತ್ತಿನ ಐಶ್ವರ್ಯದ ಮೊತ್ತ ಸ್ಥಿರವಾಗಿದ್ದು ಅದರಲ್ಲಿ ಹೆಚ್ಚಿನ ಪಾಲು ಪಡೆಯಲು ದೇಶಗಳು ತಮ್ಮ ತಮ್ಮಲ್ಲಿ ಸ್ಪರ್ಧಿಸುತ್ತವೆ. ಈ ಸ್ಪರ್ಧೆ ಅಂತರರಾಷ್ಟ್ರೀಯ ವ್ಯಾಪಾರದ ಮುಖಾಂತರ ನಡೆಯುತ್ತದೆ. ವ್ಯಾಪಾರಿ ಪಂಥದ ಅರ್ಥಶಾಸ್ತ್ರಜ್ಞರ ಪ್ರಕಾರ ದೇಶದ ಐಶ್ವರ್ಯವನ್ನು ಆ ದೇಶದಲ್ಲಿಯ ಬಂಗಾರದ ಮೊತ್ತದಿಂದ ಅಳೆಯಲಾಗುತ್ತಿತ್ತು. ಹೆಚ್ಚಿಗೆ ಬಂಗಾರವಿದ್ದ ವ್ಯಕ್ತಿಯನ್ನು ಶ್ರೀಮಂತನೆಂದು ಪರಿಗಣಿಸುವಂತೆ ಹೆಚ್ಚಿಗೆ ಬಂಗಾರ ಹೊಂದಿದ ದೇಶವೂ ಶ್ರೀಮಂತ ದೇಶವೆಂದು ಅವರು ತಿಳಿದಿದ್ದರು. ಆದ್ದರಿಂದ ದೇಶ ಬಂಗಾರ ಗಳಿಸಬೇಕಾದರೆ ಹೆಚ್ಚಿಗೆ ರಫ್ತು ಮಾಡಬೇಕು ಮತ್ತು ಕಡಿಮೆ ಆಮದು ಮಾಡಿಕೊಳ್ಳಬೇಕು. ಹೆಚ್ಚು ರಫ್ತು ಮಾಡುವ ದೇಶ ಪ್ರತಿಫಲವಾಗಿ ಬಂಗಾರವನ್ನು ಆಮದು ಮಾಡಿಕೊಳ್ಳುತ್ತದೆ. ಆದರೆ ವ್ಯಾಪಾರಿ ಪಂಥದ ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಅಷ್ಟು ಸಮಂಜಸವಲ್ಲವೆಂಬುದನ್ನು ಮುಂದಿನ ಅರ್ಥಶಾಸ್ತ್ರ ಸಿದ್ಧಾಂತಗಳು ಸಿದ್ಧಮಾಡಿ ತೋರಿಸಿವೆ.

1776 ರಲ್ಲಿಯೇ ಆಡಂ ಸ್ಮಿಥರು ಅಂತರ ರಾಷ್ಟ್ರೀಯ ವ್ಯಾಪಾರ ಸ್ಥಿರ ಐಶ್ವರ್ಯವನ್ನು ದೇಶಗಳಲ್ಲಿ ಹಂಚುವ ಬದಲು ಜಾಗತಿಕ ಐಶ್ವರ್ಯವನ್ನು ಹೆಚ್ಚಿಸುತ್ತದೆಯೆಂದು ಹೇಳಿದರು. ಅವರ ಪ್ರಕಾರ ದೇಶದ ಐಶ್ವರ್ಯ ಕೇವಲ

ಬಂಗಾರದಲ್ಲಿಲ್ಲ, ಆದರೆ ಆ ದೇಶ ಉತ್ಪಾದಿಸುವ ವಸ್ತುಗಳ ಹಾಗೂ ಸೇವೆಗಳ ಮೌಲ್ಯದಲ್ಲಿದೆ. ಈ ಐಶ್ವರ್ಯ ಅಂತರರಾಷ್ಟ್ರೀಯ ವ್ಯಾಪಾರದಿಂದ ಹೇಗೆ ಅಭಿವೃದ್ಧಿಯಾಗುತ್ತದೆಯೆಂಬುದನ್ನು ಅವರು ವಿವರಿಸಿದರು.

## *೭.೧ ನಿರಪೇಕ್ಷ ವೆಚ್ಚದ ಸಿದ್ಧಾಂತ*

ಆಡಂ ಸ್ಮಿಥರ ಪ್ರಕಾರ ದೇಶಗಳು ಕೆಲವೊಂದು ವಸ್ತುಗಳನ್ನು ಅತೀ ಕಡಿಮೆ ವೆಚ್ಚದಲ್ಲಿ ಉತ್ಪಾದಿಸುತ್ತವೆ. ಆದ್ದರಿಂದ ದೇಶಗಳು ಅಂತಹ ವಸ್ತುಗಳನ್ನು ಮಾತ್ರ ತಮ್ಮಲ್ಲಿ ಉತ್ಪಾದಿಸಬೇಕು. ಇದನ್ನು ನಾವು ಒಂದು ಉದಾಹರಣೆಯಿಂದ ತೋರಿಸಬಹುದು. ನಾವು ಭಾರತ ಮತ್ತು ಇಂಗ್ಲಂಡ ಎರಡು ದೇಶಗಳನ್ನು ತೆಗೆದುಕೊಳ್ಳೋಣ, ಮತ್ತು ಲೋಹ ಹಾಗೂ ಅಕ್ಕಿ ಹೀಗೆ ಎರಡು ವಸ್ತುಗಳನ್ನು ತೆಗೆದುಕೊಳ್ಳೋಣ. ಈ ಎರಡೂ ದೇಶಗಳಲ್ಲಿ ಉತ್ಪಾದನೆಯನ್ನು ಕೇವಲ ಶ್ರಮದಿಂದ ಮಾತ್ರ ಮಾಡಲಾಗುತ್ತದೆಯೆಂದು ನಾವು ಭಾವಿಸೋಣ.

**ಶ್ರಮದ ಆವಶ್ಯಕತೆ**


| | ಭಾರತ | ಇಂಗ್ಲಂಡ |
|---|---|---|
| ಅಕ್ಕಿ | 20 ಮಂದಿ/ಟನ್ | 40 ಮಂದಿ/ಟನ್ |
| ಲೋಹ | 40 ಮಂದಿ/ಟನ್ | 20 ಮಂದಿ/ಟನ್ |

ಭಾರತವು 20 ಶ್ರಮಿಕರಿಂದ ಒಂದು ಟನ್ ಅಕ್ಕಿ ಬೆಳೆದರೆ ಇಂಗ್ಲಂಡ 40 ಶ್ರಮಿಕರಿಂದ ಒಂದು ಟನ್ ಅಕ್ಕಿ ಬೆಳೆಯುತ್ತದೆಯೆಂದು ನಾವು ಭಾವಿಸೋಣ. ಅದೇ ರೀತಿಯಾಗಿ ಒಂದು ಟನ್ ಲೋಹ ಉತ್ಪಾದಿಸಲು ಭಾರತಕ್ಕೆ 40 ಶ್ರಮಿಕರು ಬೇಕು. ಆದರೆ ಇಂಗ್ಲಂಡ 30 ಶ್ರಮಿಕರಿಂದ ಒಂದು ಟನ್ ಲೋಹ ಉತ್ಪಾದಿಸಬಲ್ಲದು.

## *೭.೨ ಉತ್ಪಾದನಾ ಸಾಧ್ಯತಾ ಗಡಿಗಳು*

ನಾವೀಗ ಭಾರತ ಮತ್ತು ಇಂಗ್ಲಂಡ ಎಷ್ಟು ಅಕ್ಕಿ ಮತ್ತು ಲೋಹಗಳನ್ನು ಉತ್ಪಾದಿಸಬಲ್ಲವೆಂಬುದನ್ನು ನೋಡೋಣ. ಪ್ರತಿಯೊಂದು ದೇಶದಲ್ಲಿ 800

ಶ್ರಮಿಕರು ಇದ್ದಾರೆಂದು ನಾವು ಭಾವಿಸಿದರೆ, ಇಂಗ್ಲಂಡ 40 ಟನ್ ಲೋಹ ಅಥವಾ 20 ಟನ್ ಅಕ್ಕಿ ಉತ್ಪಾದಿಸಬಹುದು. ಅದೇ ರೀತಿಯಾಗಿ ಭಾರತ 800 ಶ್ರಮಿಕರಿಂದ 20 ಟನ್ ಲೋಹ ಅಥವಾ 40 ಟನ್ ಅಕ್ಕಿ ಉತ್ಪಾದಿಸಬಹುದು.




ಇಂಗ್ಲಂಡ್ ಭಾರತ

ಈ ದೇಶಗಳು ವಿದೇಶಿ ವ್ಯಾಪಾರದಲ್ಲಿ ಪಾಲ್ಗೊಳ್ಳದೆ ಇದ್ದಾಗ, ಇಂಗ್ಲಂಡ 400 ಶ್ರಮಿಕರನ್ನು ಅಕ್ಕಿ ಉತ್ಪಾದನೆಗೆ ಹಾಗೂ ಇನ್ನುಳಿದ 400 ಶ್ರಮಿಕರನ್ನು ಲೋಹ ಉತ್ಪಾದನೆಗೆ ತೊಡಗಿಸಿದರೆ ಅದು 10 ಟನ್ ಅಕ್ಕಿ, 20 ಟನ್ ಲೋಹ ಉತ್ಪಾದಿಸಬಹುದು. ಅದೇ ರೀತಿಯಾಗಿ ಭಾರತ, 400 ಶ್ರಮಿಕರನ್ನು ಅಕ್ಕಿ ಬೆಳೆಯಲು ಹಾಗೂ 400 ಶ್ರಮಿಕರನ್ನು ಲೋಹ ಉತ್ಪಾದಿಸಲು ತೊಡಗಿಸಿದರೆ ಅದು 20 ಟನ್ ಅಕ್ಕಿ 10 ಟನ್ ಲೋಹ ಉತ್ಪಾದಿಸಬಹುದು. ಇದರಿಂದ ಈ ಎರಡೂ ದೇಶಗಳ ಒಟ್ಟು ಉತ್ಪಾದನೆ ಈ ಕೆಳಗಿನಂತಿರುತ್ತದೆ.

30 ಟನ್ ಅಕ್ಕಿ = ೨೦ಟನ್ ಭಾರತ = 10 ಟನ್ ಇಂಗ್ಲಂಡ

30 ಟನ್ ಲೋಹ = 20 ಟನ್ ಇಂಗ್ಲಂಡ + 10 ಟನ್ ಭಾರತ. ಮುಂದೆ ಆ ದೇಶಗಳು ವಿದೇಶಿ ವ್ಯಾಪಾರ ಪ್ರಾರಂಭಿಸಿದವೆಂದು ನಾವು

ತಿಳಿಯೋಣ. ಆಡಂ ಸ್ಮಿಥರ ಪ್ರಕಾರ ಪ್ರತಿ ದೇಶವು ತನಗೆ ಹೆಚ್ಚು ಲಾಭ ದಾಯಕವಾದ ವಸ್ತುವನ್ನು ಬೆಳೆಯುವಲ್ಲಿ ಪ್ರಾವೀಣ್ಯ ಪಡೆಯುತ್ತದೆ. ಇಂಗ್ಲಂಡ ದೇಶ ಲೋಹ ಉತ್ಪಾದನೆಯಲ್ಲಿ ಮತ್ತು ಭಾರತ ಅಕ್ಕಿಯನ್ನು ಬೆಳೆಯುವಲ್ಲಿ ಪ್ರಾವೀಣ್ಯ ಪಡೆಯುತ್ತವೆ. ಹೀಗೆ ಆದಾಗ ಒಟ್ಟು ಉತ್ಪಾದನೆ ಹೆಚ್ಚಾಗುವದನ್ನು ನಾವು ನೋಡಬಹುದು.

| | ಭಾರತ | ಇಂಗ್ಲಂಡ | ಒಟ್ಟು |
|---|---|---|---|
| ಅಕ್ಕಿ | 40 ಟನ್ | 0 | 40 ಟನ್ |
| ಲೋಹ | 0 | 40 ಟನ್ | 40 ಟನ್ |

ಇಂಗ್ಲಂಡ ಮತ್ತು ಭಾರತ ದೇಶಗಳಲ್ಲಿ ಈಗ 40 ಟನ್ ಅಕ್ಕಿ ಹಾಗೂ 40 ಟನ್ ಲೋಹ ಉತ್ಪಾದನೆಯಾಗಿರುವದನ್ನು ನಾವು ನೋಡಬಹುದು.

### *೭.೩ ರಿಕಾರ್ಡೋ ಮತ್ತು ತುಲನಾತ್ಮಕ ಸಿದ್ಧಾಂತ*

ಆಡಂ ಸ್ಮಿಥರ ಪುಸ್ತಕ ಪ್ರಕಟವಾದ ಸುಮಾರು 50ವರುಷಗಳ ನಂತರ ಡೇವಿಡ್ ರಿಕಾರ್ಡೋ ಅವರು ಇಂಗ್ಲಂಡ ಎರಡೂ ವಸ್ತುಗಳನ್ನು ಭಾರತಕ್ಕಿಂತ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಿದರೂ ಪರದೇಶಿ ವ್ಯಾಪಾರ ಲಾಭದಾಯಕ ವಾಗುತ್ತದೆಯೆಂಬುದನ್ನು ತೋರಿಸಿಕೊಟ್ಟರು. ಇದು ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ನಾವು ಉದಾಹರಣೆಯಿಂದ ಕಂಡುಕೊಳ್ಳೋಣ. ಇಂಗ್ಲಂಡ ದೇಶದಲ್ಲಿ ಒಂದು ಟನ್ ಲೋಹ ಉತ್ಪಾದಿಸಲು ಕೇವಲ 8 ಶ್ರಮಿಕರು ಮತ್ತು ಒಂದು ಟನ್ ಅಕ್ಕಿ ಉತ್ಪಾದಿಸಲು 16 ಶ್ರಮಿಕರು ಸಾಕೆಂದು ನಾವು ತಿಳಿಯೋಣ. ಆದರೆ ಭಾರತದಲ್ಲಿ ಮಾತ್ರ ಒಂದು ಟನ್ ಲೋಹಕ್ಕೆ 40 ಶ್ರಮಿಕರು ಮತ್ತು ಒಂದು ಟನ್ ಅಕ್ಕಿಗೆ 20 ಶ್ರಮಿಕರು ಬೇಕಾಗುತ್ತಾರೆಂದು ನಾವು ತಿಳಿಯೋಣ.

ಭಾರತ ಮತ್ತು ಇಂಗ್ಲಂಡ ತಮ್ಮ ತಮ್ಮ ದೇಶಗಳಲ್ಲಿ ಅರ್ಧ ಶ್ರಮಿಕರನ್ನು ಅಕ್ಕಿ ಉತ್ಪಾದನೆಗೆ ಮತು ಇನ್ನರ್ಧ ಶ್ರಮಿಕರನ್ನು ಲೋಹ ಉತ್ಪಾದನೆಗೆ ತೊಡಗಿಸಿದರೆ ಅವರ ಒಟ್ಟು ಉತ್ಪಾದನೆ ಕೆಳಗಿನಂತಾಗುತ್ತದೆ.

**ಉತ್ಪಾದನೆ**

| ಭಾರತ | ಇಂಗ್ಲಂಡ | ಒಟ್ಟು | |
|---|---|---|---|
| ಅಕ್ಕಿ | 20 ಟನ್ | 25 ಟನ್ | 45 ಟನ್ |
| ಲೋಹ | 10 ಟನ್ | 50 ಟನ್ | 60 ಟನ್ |

ಇಂಗ್ಲಂಡ ಮತ್ತು ಭಾರತದ ನಡುವೆ ವ್ಯಾಪಾರವಿಲ್ಲದೆ ಇದ್ದಾಗ ಭಾರತವು ಒಂದು ಟನ್ ಹೆಚ್ಚು ಅಕ್ಕಿಯನ್ನು ಬೆಳೆಯಬೇಕಾದರೆ ಅರ್ಧ ಟನ್ ಲೋಹದ ಉತ್ಪಾದನೆಯನ್ನು ಕಡಿಮೆ ಮಾಡಬೇಕಾಗುತ್ತದೆ. ಆದ್ದರಿಂದ ಭಾರತದಲ್ಲಿ ಒಂದು ಟನ್ ಅಕ್ಕಿಯನ್ನು ಬೆಳೆಯುವ ಅವಕಾಶ ವೆಚ್ಚ ಅರ್ಧ ಟನ್ ಲೋಹ. ಭಾರತದಲ್ಲಿ ಅಕ್ಕಿ ಹಾಗೂ ಲೋಹಗಳ ಅವಕಾಶ ವೆಚ್ಚ :

1 ಟನ್ ಅಕ್ಕಿ = ಅರ್ಧ ಟನ್ ಲೋಹ

1 ಟನ್ ಲೋಹ = 2 ಟನ್ ಅಕ್ಕಿ.

ಇಂಗ್ಲಂಡಿನಲ್ಲಿ ಒಂದು ಟನ್ ಹೆಚ್ಚು ಅಕ್ಕಿ ಬೆಳೆಯಬೇಕಾದರೆ 2 ಟನ್ ಲೋಹದ ಉತ್ಪಾದನೆ ಕಡಿಮೆ ಮಾಡಬೇಕು.

ಇಂಗ್ಲಂಡಿನ ಅವಕಾಶ ವೆಚ್ಚಗಳು :

1 ಟನ್ ಅಕ್ಕಿ = 2 ಟನ್ ಲೋಹ

1 ಟನ್ ಲೋಹ = ಅರ್ಧ ಟನ್ ಅಕ್ಕಿ.

ಈ ದೇಶಗಳ ಮಧ್ಯೆ ವ್ಯಾಪಾರ ನಡೆಯಬೇಕಾದರೆ ಅವಕಾಶ ವೆಚ್ಚಗಳು ಈ ದೇಶಗಳಲ್ಲಿ ಬೇರೆ ಬೇರೆಯಾಗಿರಬೇಕು. ಇದನ್ನು ಸಾಪೇಕ್ಷ ಅನುಕೂಲತೆಯೆಂದು ಹೇಳಬಹುದು. ಒಂದು ಟನ್ ಅಕ್ಕಿ ಬೆಳೆಯಲು ಭಾರತ ಅರ್ಧ ಟನ್ ಲೋಹದ ಉತ್ಪಾದನೆ ಕಡಿಮೆ ಮಾಡಬೇಕು. ಆದರೆ ಇಂಗ್ಲಂಡ ಒಂದು ಟನ್ ಹೆಚ್ಚು ಅಕ್ಕಿ ಬೆಳೆಯಲು 2 ಟನ್ ಲೋಹದ ಉತ್ಪಾದನೆ ಕಡಿಮೆ ಮಾಡಬೇಕು. ಆದ್ದರಿಂದ ಭಾರತಕ್ಕೆ ಅಕ್ಕಿಯನ್ನು ಬೆಳೆಯುವಲ್ಲಿ ಸಾಪೇಕ್ಷ ಅನುಕೂಲತೆಯಿದೆ.

ಅದೇ ರೀತಿಯಾಗಿ ಇಂಗ್ಲಂಡಿಗೆ ಲೋಹದ ಉತ್ಪಾದನೆಯಲ್ಲಿ ಸಾಪೇಕ್ಷ ಅನುಕೂಲತೆ ಇದೆ. ಇದರ ಪರಿಣಾಮವಾಗಿ ಇಂಗ್ಲಂಡಿಗೆ ಒಂದು ಟನ್ ಹೆಚ್ಚಿಗೆ ಅಕ್ಕಿ ಬೇಕಾದರೆ $1^1/_2$ ಟನ್ ಲೋಹವನ್ನು ಭಾರತಕ್ಕೆ ಕೊಟ್ಟು ಒಂದು ಟನ್ ಅಕ್ಕಿ ಪಡೆಯುವದು ಲಾಭದಾಯಕವಾಗುತ್ತದೆ. ಒಂದುವೇಳೆ ತಾನೇ ಅಕ್ಕಿಯನ್ನು ಬೆಳೆದರೆ 2 ಟನ್ ಲೋಹದ ಉತ್ಪಾದನೆ ಕಡಿಮೆಯಾಗುತ್ತದೆ. ಅಂತರ ರಾಷ್ಟ್ರೀಯ ವ್ಯಾಪಾರದಿಂದ ಎರಡೂ ದೇಶಗಳಿಗೆ ಲಾಭವಾಗುತ್ತದೆ. ಅಂತರ ರಾಷ್ಟ್ರೀಯ ವ್ಯಾಪಾರದಿಂದಾಗಿ ಉತ್ಪಾದನೆ ಅಧಿಕವಾಗುತ್ತದೆ. ತನಗೆ ಅನುಕೂಲಕರವಾದ ಸರಕುಗಳನ್ನೇ ರಾಷ್ಟ್ರಗಳು ಉತ್ಪಾದಿಸುವದರಿಂದ ಉತ್ಪಾದನೆ ಅಧಿಕವಾಗುತ್ತದೆ.

ಜನರಿಗೆ ವೈವಿಧ್ಯಮಯವಾದ ಸರಕುಗಳು ಲಭ್ಯವಾಗುವದರಿಂದ ಅವರ ಬೇಡಿಕೆಯಲ್ಲಿ ಬದಲಾವಣೆಗಳಾಗುತ್ತವೆ. ಅನೇಕ ರಾಷ್ಟ್ರಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಯಾಗಲು ಅಂತರ ರಾಷ್ಟ್ರೀಯ ವ್ಯಾಪಾರವೇ ಕಾರಣವಾಗಿದೆ. ವ್ಯಾಪಾರವಿಲ್ಲದೆ ಕೈಗಾರಿಕೀಕರಣ ಸಾಧ್ಯವಿರಲಿಲ್ಲ. ಪೇಟೆಗಳು ವಿಸ್ತಾರವಾಗುವದರಿಂದ ಅಂತರ ರಾಷ್ಟ್ರೀಯ ವ್ಯಾಪಾರವು ಯಾಂತ್ರೀಕರಣ ಮತ್ತು ಬೃಹತ್ಪ್ರಮಾಣದ ಉತ್ಪಾದನೆಗೆ ಎಡೆಮಾಡಿಕೊಟ್ಟಿದೆ.

### *೭.೪ ಪಾವತಿ ಶೇಷ*

ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಪಾಲ್ಗೊಳ್ಳುವ ಪ್ರತಿಯೊಂದು ರಾಷ್ಟ್ರವು ತನ್ನಲ್ಲಿಯ ವಸ್ತುಗಳನ್ನು ಬೇರೆ ರಾಷ್ಟ್ರಗಳಿಗೆ ರಫ್ತುಮಾಡಿ ವಿದೇಶಿ ವಿನಿಮಯವನ್ನು ಗಳಿಸುತ್ತದೆ. ಅದೇ ರೀತಿಯಾಗಿ ತಾನು ಪರದೇಶಗಳಿಂದ ಆಮದು ಮಾಡಿಕೊಂಡು ವಸ್ತುಗಳಿಗೆ ಹಾಗೂ ಸೇವೆಗಳಿಗೆ ವಿದೇಶಿ ವಿನಿಮಯ ಕೊಡಬೇಕಾಗುತ್ತದೆ. ಒಂದು ರಾಷ್ಟ್ರವು ನಿರ್ದಿಷ್ಟ ಅವಧಿಯಲ್ಲಿ ಪರ ರಾಷ್ಟ್ರಗಳಿಗೆ ಮಾಡಿದ ಪಾವತಿ ಮತ್ತು ಪರ ರಾಷ್ಟ್ರಗಳಿಂದ ತಾನು ಸ್ವೀಕರಿಸಿದ ಪಾವತಿಯನ್ನು ಪಾವತಿ ಶೇಷ ತೋರಿಸುತ್ತದೆ. ಪಾವತಿ ಶೇಷ ಎರಡು ಭಾಗಗಳನ್ನು ಹೊಂದಿರುತ್ತದೆ. ಒಂದು

ಭಾಗವು ರಾಷ್ಟ್ರದ ಬಾಹ್ಯ ಆದಾಯವನ್ನೂ, ಇನ್ನೊಂದು ಭಾಗವು ಬಾಹ್ಯ ವೆಚ್ಚವನ್ನೂ ತೋರಿಸುತ್ತವೆ. ಅವೆರಡೂ ಸಮಾನವಾಗಿರಬೇಕೆಂದು ಸಾಮಾನ್ಯ ನಿಯಮ. ರಫ್ತು ಮೌಲ್ಯವು ಆಮದು ಮೌಲ್ಯಕ್ಕಿಂತ ಅಧಿಕವಿದ್ದರೆ, ಅನುಕೂಲ ಪಾವತಿ ಶೇಷ ಎಂತಲೂ, ರಫ್ತು ಮೌಲ್ಯವು ಆಮದು ಮೌಲ್ಯಕ್ಕಿಂತ ಕಡಿಮೆ ಇದ್ದರೆ ಪ್ರತಿಕೂಲ ಪಾವತಿ ಶೇಷ ಎಂತಲೂ ಹೇಳಲಾಗುತ್ತದೆ. ಪಾವತಿ ಶೇಷ ಅನುಕೂಲವಿದ್ದರೆ ಸಮಸ್ಯೆಗಳಿರುವದಿಲ್ಲ. ಅದು ಪ್ರತಿಕೂಲವಿದ್ದರೆ ಆ ರಾಷ್ಟ್ರವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

### ೭.೫ ವಾಣಿಜ್ಯ ನೀತಿ

ಪರದೇಶಗಳೊಡನೆ ಮಾಡುವ ವ್ಯಾಪಾರಕ್ಕೆ ಸಂಬಂಧಿಸಿದ ನೀತಿಗೆ ವಾಣಿಜ್ಯ ನೀತಿಯೆಂದು ಹೆಸರು. ಅಂತರ ರಾಷ್ಟ್ರೀಯ ವ್ಯಾಪಾರದ ಮೇಲೆ ಯಾವ ನಿರ್ಬಂಧವಿಲ್ಲದ ಧೋರಣೆಗೆ ಮುಕ್ತ ವ್ಯಾಪಾರ ನೀತಿಯೆಂದು ಹೆಸರು. ಈ ಮುಕ್ತ ವಾಣಿಜ್ಯ ನೀತಿಯಲ್ಲಿ ದೇಶೀಯ ಹಾಗೂ ಪರದೇಶೀಯ ವಸ್ತುಗಳಲ್ಲಿ ಹಾಗೂ ಸೇವೆಗಳಲ್ಲಿ ಸರಕಾರವು ಯಾವ ಭೇದ ಭಾವವನ್ನೂ ಮಾಡುವದಿಲ್ಲ. ವಸ್ತುಗಳ ಆಮದು ಹಾಗೂ ರಫ್ತು ಯಾವ ಅಡೆತಡೆ ಇಲ್ಲದೆ ನಡೆದಿರುತ್ತದೆ.

ರಕ್ಷಣಾ ವಾಣಿಜ್ಯ ನೀತಿಯಲ್ಲಿ ಒಂದು ರಾಷ್ಟ್ರವು ತನ್ನ ಕೈಗಾರಿಕೆಗಳ ಬೆಳವಣಿಗೆಗಾಗಿ ಮತ್ತು ದೇಶದ ಆರ್ಥಿಕಾಭಿವೃದ್ಧಿಗಾಗಿ ಆಮದು ಹಾಗೂ ರಫ್ತುಗಳ ಮೇಲೆ ವಿವಿಧ ರೀತಿಯ ನಿರ್ಬಂಧಗಳನ್ನು ಹೇರುತ್ತದೆ. ಆರ್ಥಿಕ ಅಭಿವೃದ್ಧಿಗಾಗಿ ಒಂದು ರಾಷ್ಟ್ರವು ರಕ್ಷಣಾ ನೀತಿಯನ್ನು ಅಳವಡಿಸಿಕೊಳ್ಳಬಹುದೆಂಬ ವಾದವನ್ನು ಅಮೆರಿಕಾದ ಅರ್ಥಶಾಸ್ತ್ರಜ್ಞನಾದ ಅಲೆಕ್ಸಾಂಡರ ಹ್ಯಾಮಿಲ್ಟನ್ 1791ರಲ್ಲಿ ಮೊಟ್ಟ ಮೊದಲ ಬಾರಿಗೆ ಮಂಡಿಸಿದನು. ಮುಂದೆ ಜರ್ಮನಿಯ ಅರ್ಥಶಾಸ್ತ್ರಜ್ಞ ಫೆಡರಿಕ್ ಲಿಸ್ಟ್ ಈ ವಾದವನ್ನು ಸಮರ್ಥಿಸಿದನು.

# ೮. ಆರ್ಥಿಕ ಅಭಿವೃದ್ಧಿ ಹಾಗೂ ಬೆಳವಣಿಗೆಯ ಸಮಸ್ಯೆಗಳು

ನಾವು ಜಗತ್ತಿನ ಎಲ್ಲ ರಾಷ್ಟ್ರಗಳನ್ನು ಗಣನೆಗೆ ತೆಗೆದುಕೊಂಡಾಗ, ಆ ರಾಷ್ಟ್ರಗಳು ಒಂದೇ ಆರ್ಥಿಕ ಅಭಿವೃದ್ಧಿಯ ಮಟ್ಟದಲ್ಲಿಲ್ಲವೆಂಬುದನ್ನು ಮನಗಾಣುತ್ತೇವೆ. ಪಶ್ಚಿಮ ಯುರೋಪಿನ ರಾಷ್ಟ್ರಗಳು, ಉತ್ತರ ಅಮೇರಿಕೆಯ ರಾಷ್ಟ್ರಗಳು, ಆಸ್ಟ್ರೇಲಿಯ, ನ್ಯೂಝಿಲಂಡ, ಜಪಾನ ಇವು ಅಭಿವೃದ್ಧಿ ಹೊಂದಿದ ದೇಶಗಳೆಂದು ತಿಳಿಯಲಾಗುತ್ತದೆ. ಈ ದೇಶಗಳಲ್ಲಿ ವ್ಯಕ್ತಿಯ ತಲಾ ಆದಾಯ ಹೆಚ್ಚಾಗಿದ್ದು ಅವರೆಲ್ಲರೂ ಸುಖಿ ಜೀವನವನ್ನು ನಡೆಸುತ್ತಾರೆ. ಏಶಿಯಾ ಖಂಡದಲ್ಲಿಯ ಬಹುತೇಕ ರಾಷ್ಟ್ರಗಳು, ಆಫ್ರಿಕಾ ಖಂಡದಲ್ಲಿಯ ರಾಷ್ಟ್ರಗಳು ಮತ್ತು ದಕ್ಷಿಣ ಅಮೇರಿಕಾದಲ್ಲಿಯ ಬಹುತೇಕ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದು ಕರೆಯಲಾಗುತ್ತದೆ. ಈ ದೇಶಗಳಲ್ಲಿ ವ್ಯಕ್ತಿಯ ತಲಾ ವರಮಾನ ಕಡಿಮೆ ಇದ್ದು, ಈ ದೇಶಗಳು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಈಗ ಅಭಿವೃದ್ಧಿ ಹೊಂದಿದ ದೇಶಗಳು ಹಿಂದೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಾಗಿದ್ದವು. ಈಗ ಎರಡು ನೂರು ವರುಷಗಳ ಪೂರ್ವದಲ್ಲಿ ಔದ್ಯಮಿಕ ಕ್ರಾಂತಿ ಇಂಗ್ಲಂಡಿನಲ್ಲಿ ಪ್ರಾರಂಭವಾಯಿತು. ಮುಂದೆ ಯುರೋಪಿನ ಉಳಿದ ರಾಷ್ಟ್ರಗಳಲ್ಲಿ ಮತ್ತು ಅಮೇರಿಕಾದಲ್ಲಿ ಪ್ರಾರಂಭವಾಯಿತು. ಈಗ ಅಭಿವೃದ್ಧಿ ಹೊಂದಿದ ಈ ದೇಶಗಳು ಕಳೆದ ಎರಡು ಶತಮಾನಗಳಿಂದ ಔದ್ಯಮಿಕ ಪ್ರಗತಿ ಸಾಧಿಸುತ್ತಾ ಬಂದಿವೆ. ಹೀಗಾಗಿ ಈಗ ಅವುಗಳನ್ನು ಅಭಿವೃದ್ಧಿ ಹೊಂದಿದ ದೇಶಗಳೆಂದು ಗುರುತಿಸಲಾಗುತ್ತಿದೆ.

## ೮.೧ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಲಕ್ಷಣಗಳು

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವ್ಯಕ್ತಿಯ ತಲಾ ಆದಾಯ ಕಡಿಮೆ ಇರುತ್ತದೆ. ಇವೆಲ್ಲವುಗಳು ಬಡರಾಷ್ಟ್ರಗಳೇ. ಬಡರಾಷ್ಟ್ರಗಳೆಂದು ಕರೆಯುವ ಬದಲು ಅವುಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದು ಕರೆಯಲಾಗುತ್ತದೆ. ತಲಾ ಆದಾಯ ಕಡಿಮೆ ಇರುವದರಿಂದ ಜನರ ಜೀವನ ಮಟ್ಟ ಕಡಿಮೆಯಾಗಿರುತ್ತದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಬೇಸಾಯದಲ್ಲಿ ಹೆಚ್ಚಿಗೆ ಜನರು ತೊಡಗಿರುತ್ತಾರೆ. ಭಾರತದಲ್ಲಿ ಈಗ ಸುಮಾರು ಶೇಕಡಾ 70ರಷ್ಟು ಜನರು ಬೇಸಾಯವನ್ನವಲಂಬಿಸಿ ಜೀವಿಸುತ್ತಾರೆ. ಆದರೆ ಮುಂದುವರಿದ ರಾಷ್ಟ್ರಗಳಲ್ಲಿ ಬೇಸಾಯದಲ್ಲಿ ಶೇಕಡಾ 10ಕ್ಕಿಂತಲೂ ಕಡಿಮೆ ಜನರು ಇರುತ್ತಾರೆ. ಆರ್ಥಿಕ ಅಭಿವೃದ್ಧಿಯಾದಂತೆ ಬೇಸಾಯದಿಂದ ಜನರು ಉದ್ದಿಮೆಗಳಿಗೆ ಸ್ಥಳಾಂತರ ಗೊಳ್ಳುತ್ತಾರೆ. ಯುರೋಪ ಮತ್ತು ಉತ್ತರ ಅಮೇರಿಕಾದಲ್ಲಿ ಈ ಪ್ರಕ್ರಿಯೆ ಕಳೆದ ಎರಡು ನೂರು ವರುಷಗಳಿಂದ ನಡೆದೇ ಇದೆ. ಆರ್ಥಿಕ ಅಭಿವೃದ್ಧಿಯಾದಂತೆ ಬೇಸಾಯದಲ್ಲಿ ಸುಧಾರಣೆಗಳಾಗಿ ಉತ್ಪಾದನೆ ಹೆಚ್ಚುವ ಜೊತೆಗೆ ಕಡಿಮೆ ಜನರು ಬೇಸಾಯದಲ್ಲಿ ನಿಲ್ಲುತ್ತಾರೆ. ಬೇಸಾಯದಿಂದ ಹೊರಬಂದ ಜನರು ಉದ್ದಿಮೆಯಲ್ಲಿ ಮತು ಇನ್ನುಳಿದ ಸೇವೆಗಳಲ್ಲಿ ನಿರತರಾಗಿರುತ್ತಾರೆ. ಆದ್ದರಿಂದ ಯಾವದೇ ದೇಶದಲ್ಲಿ ಬೇಸಾಯದಲ್ಲಿ ಹೆಚ್ಚಿಗೆ ಜನರು ನಿರತರಾಗಿದ್ದರೆ ಆ ದೇಶ ಆರ್ಥಿಕವಾಗಿ ಹಿಂದುಳಿದ ದೇಶವೆಂದು ಸರ್ವೆಸಾಮಾನ್ಯವಾಗಿ ನಾವು ಹೇಳಬಹುದು.

ಹಿಂದುಳಿದ ರಾಷ್ಟ್ರಗಳಲ್ಲಿ ನಿರಕ್ಷರತೆಯೂ ಹೆಚ್ಚಿಗಿದೆ. ಆರ್ಥಿಕ ಅಭಿವೃದ್ಧಿ ಯಾದಂತೆ ಹೆಚ್ಚಿನ ಜನರು ಸಾಕ್ಷರರಾಗುತ್ತಾರೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಾಕ್ಷರತೆ ಹೆಚ್ಚಿಗಿರುತ್ತದೆ. ಪ್ರತಿಯೊಬ್ಬ ನಾಗರಿಕನೂ ಪ್ರಜ್ಞಾವಂತ ನಾಗಿರುತ್ತಾನೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿಯೂ ಹೆಚ್ಚಿಗಿದೆ. ಈ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವುದರಿಂದ ಪ್ರತಿಯೊಂದು ಕುಟುಂಬದಲ್ಲಿ ಹುಟ್ಟುವ ಮಕ್ಕಳ ಪ್ರಮಾಣ ಹೆಚ್ಚಿಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿ ಅತೀ ಕಡಿಮೆ ಇದೆ. ಜನಸಂಖ್ಯೆ ಬೆಳೆಯುವದು ಜನನ ಮತ್ತು ಮರಣ ಪ್ರಮಾಣಗಳಲ್ಲಿಯ ಅಂತರದಿಂದ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಈಗ ಕಳೆದ ನಲವತ್ತು ವರುಷಗಳಲ್ಲಿ ಮರಣ ಪ್ರಮಾಣದಲ್ಲಿ ಇಳಿಕೆಯನ್ನು ಸಾಧಿಸುವಲ್ಲಿ ಸಫಲಗೊಂಡಿವೆ. ಸಾರ್ವಜನಿಕ ಆರೋಗ್ಯದಲ್ಲಿ ಸುಧಾರಣೆ, ಔಷಧೋಪಚಾರದಲ್ಲಿ ಸುಧಾರಣೆಯಿಂದಾಗಿ ಈ ದೇಶಗಳು ಮರಣ ಪ್ರಮಾಣವನ್ನು ಒಂದು ಸಾವಿರಕ್ಕೆ ಮೊದಲು 48 ಇದ್ದದನ್ನು ಈಗ 12, 13ಕ್ಕೆ ಇಳಿಸಿರುತ್ತವೆ. ಆದರೆ ಈ ದೇಶಗಳಲ್ಲಿ ಜನನ ಪ್ರಮಾಣದಲ್ಲಿ ಗಣನೀಯ ಇಳಿತ ಸಾಧಿಸಿಲ್ಲ.

ಭಾರತದಲ್ಲಿ ಜನನ ಪ್ರಮಾಣ ಮೊದಲು ಸಾವಿರ ಜನಸಂಖ್ಯೆಗೆ ಸುಮಾರು 47, 48 ಇದ್ದದ್ದು ಈಗ 30ಕ್ಕೆ ಇಳಿದಿದೆ. ಆದರೆ ಜನನ ಮತ್ತು ಮರಣ ಪ್ರಮಾಣಗಳಲ್ಲಿಯ ಅಂತರ ಇನ್ನೂ ಹೆಚ್ಚಿಗೆ ಇದ್ದು ಇದು ಜನಸಂಖ್ಯೆ ಬೆಳೆಯುವ ಗತಿಯನ್ನು ಸೂಚಿಸುತ್ತದೆ. ಭಾರತದ ಜನಸಂಖ್ಯೆಯನ್ನು ನಾವು ತೆಗೆದುಕೊಂಡರೆ, ಅದು ವರುಷಕ್ಕೆ ಪ್ರತಿಶತ ಎರಡರಷ್ಟು ಹೆಚ್ಚಾಗುವದನ್ನು ನಾವು ಕಾಣುತ್ತೇವೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳೆರಡೂ ಸಾವಿರ ಜನಸಂಖ್ಯೆಗೆ 10ಕ್ಕಿಂತ ಕಡಿಮೆ ಇವೆ. ಹೀಗಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿ ತೀರ ಕಡಿಮೆ.

### *೮.೨ ಆರ್ಥಿಕ ಅಭಿವೃದ್ಧಿಯನ್ನು ವಿವರಿಸುವ ಕಲ್ಪನೆಗಳು*

ಎರಡನೆಯ ಮಹಾಯುದ್ಧದ ನಂತರ ಅರ್ಥಶಾಸ್ತ್ರಜ್ಞರು ಆರ್ಥಿಕ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಹೀಗಾಗಿ ಆರ್ಥಿಕ

ಅಭಿವೃದ್ಧಿಯ ಅನೇಕ ಸಿದ್ಧಾಂತಗಳು ರೂಪಿಸಲ್ಪಟ್ಟಿವೆ ಮತ್ತು ಆರ್ಥಿಕ ಅಭಿವೃದ್ಧಿಯ ಮಾದರಿಗಳು ರೂಪುಗೊಂಡಿವೆ. ನಾವಿಲ್ಲಿ ಆರ್ಥಿಕ ಅಭಿವೃದ್ಧಿಯ ಕೆಲವೊಂದು ಪರಿಕಲ್ಪನೆಗಳನ್ನು ಮಾತ್ರ ನೋಡೋಣ.

**ಆರ್ಥಿಕ ಬೆಳವಣಿಗೆಯ ಅವಶ್ಯಕತೆಗಳು**

ಮಾನವನ ಇತಿಹಾಸದಲ್ಲಿ ಆರ್ಥಿಕ ಅಭಿವೃದ್ಧಿ ತೀರ ಇತ್ತೀಚಿನ ಸಂಗತಿಯಾಗಿ ಕಾಣುತ್ತದೆ. ಮಾನವನ ಇತಿಹಾಸದುದ್ದಕ್ಕೂ ಮಾನವನ ಜೀವನ ತೀರಾ ಸಾಮಾನ್ಯ ಮಟ್ಟದ್ದಿತ್ತು. ಜನಸಾಮಾನ್ಯನ ಆಯುಷ್ಯ ಕಡಿಮೆ ಇರುತ್ತಿತ್ತು. ಜೀವನ ಒಂದು ಸಂಘರ್ಷವಾಗಿತ್ತು. ಆದರೆ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಆರ್ಥಿಕ ಅಭಿವೃದ್ಧಿಗೆ ಬೇಕಾದ ಅನುಕೂಲತೆಗಳು ಕಾಣಿಸಿಕೊಂಡವು. ಯುದ್ಧಗಳು ಕಡಿಮೆಯಾಗಿ ಶಾಂತಿ ನೆಲೆಸಿತು. ಉತ್ಪಾದನೆಯಲ್ಲಿ ಸುಧಾರಿತ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಹೆಚ್ಚಿನ ಉತ್ಪಾದನೆ ಮಾಡಲು ಸಾಧ್ಯವಾಯಿತು. ಜೀವನಾವಶ್ಯಕತೆಗಿಂತ ಹೆಚ್ಚಿನ ಉತ್ಪಾದನೆ ಮಾಡಲು ಇದರಿಂದ ಸಾಧ್ಯವಾಯಿತು. ಮೇಲಾಗಿ ಐಶ್ವರ್ಯವು ಅಸಮಾನವಾಗಿ ಹಂಚಿಹೋಗಿದ್ದರಿಂದ ಶ್ರೀಮಂತವರ್ಗದ ಜನರು ಉಳಿತಾಯ ಮಾಡಲು ಸಾಧ್ಯವಾಯಿತು. ಈ ಉಳಿತಾಯವನ್ನು ಬಂಡವಾಳ ಜೋಡಣೆಗೆ ಉಪಯೋಗಿಸಿದ್ದರಿಂದ ಆರ್ಥಿಕ ಅಭಿವೃದ್ಧಿ ಪ್ರಾರಂಭವಾಯಿತು.

**ಮೇಲ್ಜಿಗಿತ ಮಟ್ಟ**

ಆರ್ಥಿಕ ಅಭಿವೃದ್ಧಿಯ ತೀವ್ರಗತಿಯನ್ನು ಅರ್ಥಶಾಸ್ತ್ರಜ್ಞರು ಮೇಲ್ಜಿಗಿತ, ಅತಿದೂಡಿಕೆ ಮುಂತಾದ ಶಬ್ದಗಳಿಂದ ವಿವರಿಸಿದ್ದಾರೆ. ರೋಸ್ಟೋವ್ ಎಂಬ ಅರ್ಥಶಾಸ್ತ್ರಜ್ಞನ ಪ್ರಕಾರ ಆರ್ಥಿಕ ಅಭಿವೃದ್ಧಿ ಒಂದು ತೀವ್ರಗತಿಯನ್ನು ಮುಟ್ಟಿದಾಗ ವಿಮಾನವು ಮೇಲೇಳುವಂತೆ ಆರ್ಥಿಕವಾಗಿ ಒಂದು ದೇಶ ಮೇಲೇಳುತ್ತದೆ. ಒಮ್ಮೆ ವಿಮಾನವು ನೆಲಬಿಟ್ಟು ಮೇಲೆದ್ದಮೇಲೆ ಸಹಜವಾಗಿಯೇ ಅದು ಒಂದು ವೇಗವನ್ನು ಕಾಪಾಡಿಕೊಳ್ಳುತ್ತದೆ. ಅದೇ ರೀತಿಯಾಗಿ ಒಂದು

ದೇಶ ಒಂದು ತೀವ್ರಗತಿಯ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ಮೇಲೆದ್ದಮೇಲೆ ಅಭಿವೃದ್ಧಿಯ ಗತಿಯನ್ನು ಕಾಪಾಡಿಕೊಂಡು ಹೋಗುತ್ತದೆ.

### ಸಾಮಾಜಿಕ ಸ್ಥಿರ ಬಂಡವಾಳ ಮತ್ತು ಬಾಹ್ಯ ಅನುಕೂಲತೆಗಳು

ರೊಜೆಸ್ಟಿನ್ ರೊಡಾನ್‌ನೆಂಬ ಅರ್ಥಶಾಸ್ತ್ರಜ್ಞನು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾಮಾಜಿಕ ಸ್ಥಿರ ಬಂಡವಾಳ ಬಹಳ ಮಹತ್ವದ ಪಾತ್ರ ವಹಿಸುತ್ತದೆಯೆಂದು ಅಭಿಪ್ರಾಯಪಟ್ಟಿದ್ದಾನೆ. ದೇಶವು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಅದಕ್ಕೆ ಸಾರ್ವಜನಿಕ ಮಾರ್ಗಗಳು, ರೇಲ್ವೆಗಳು, ನೀರಾವರಿ ಯೋಜನೆಗಳು, ಸಾರ್ವಜನಿಕ ಆರೋಗ್ಯ ರಕ್ಷಣೆ ಮುಂತಾದ ಸಾರ್ವಜನಿಕ ಬಂಡವಾಳದ ಅವಶ್ಯಕತೆ ಇದೆ. ಈ ಅನುಕೂಲತೆಗಳಿಂದ ಸಾರ್ವಜನಿಕರೆಲ್ಲರೂ ಲಾಭ ಪಡೆಯುವದರಿಂದ ಅವುಗಳನ್ನು ಸಾರ್ವಜನಿಕ ಬಂಡವಾಳವೆಂದು ಕರೆಯಲಾಗುತ್ತದೆ. ಇಂತಹ ಬಂಡವಾಳಗಳಲ್ಲಿ ಖಾಸಗಿ ವ್ಯಕ್ತಿಗಳಾರೂ ಹಣ ತೊಡಗಿಸಲು ಸಾಧ್ಯವಿಲ್ಲ. ಯಾಕೆಂದರೆ ಇಂತಹ ಯೋಜನೆಗಳಲ್ಲಿ ಲಾಭ ಕಡಿಮೆ ಮತ್ತು ಅದು ದೀರ್ಘ ಅವಧಿಯಲ್ಲಿ ಸಿಗುವಂತಹದು. ಮೇಲಾಗಿ ಇವುಗಳಲ್ಲಿ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ತೊಡಗಿಸ ಬೇಕಾಗುವದರಿಂದ ಖಾಸಗಿ ವ್ಯಕ್ತಿಗಳಿಂದ ಇದು ಸಾಧ್ಯವಾಗಲಾರದು.

### *೮.೩ ಔದ್ಯಮೀಕರಣ ಹಾಗೂ ಸಮತೋಲ ಬೆಳವಣಿಗೆ*

ಆರ್ಥಿಕ ಅಭಿವೃದ್ಧಿ ಸಮತೋಲವುಳ್ಳದ್ದಾಗಿರಬೇಕೆಂದು ಕೆಲವು ಅರ್ಥ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಸಮತೋಲ ಆಹಾರವು ಮನುಷ್ಯನಿಗೆ ಅವಶ್ಯವಿದ್ದಂತೆ ಆರ್ಥಿಕ ಅಭಿವೃದ್ಧಿಯಲ್ಲಿ ಎಲ್ಲ ರಂಗಗಳು ಸಮತೋಲವಾಗಿ ಬೆಳೆಯಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ.

ಜನರು ಉಪಯೋಗಿಸುವ ವಸ್ತುಗಳ ಉತ್ಪಾದನೆ ಸಮತೋಲ ರೀತಿಯಲ್ಲಿ ಆಗಬೇಕು.

ಸಮತೋಲ ಬೆಳವಣಿಗೆಯ ಬಗೆಗೆ ಮಹತ್ವ ಕೊಟ್ಟಾಗಲೂ ಸಹಿತ ಕೋಲಿನ್ ಕ್ಲಾರ್ಕ ಮತ್ತು ಇನ್ನುಳಿದ ಅರ್ಥಶಾಸ್ತ್ರಜ್ಞರು ಆರ್ಥಿಕ ಅಭಿವೃದ್ಧಿಯಲ್ಲಿ ಮೂರು ಬಹು ಮುಖ್ಯ ಹಂತಗಳಿವೆಯೆಂದು ಹೇಳುತ್ತಾರೆ. ಅವರ ಪ್ರಕಾರ ಆರ್ಥಿಕ ಅಭಿವೃದ್ಧಿಯ ಮೊದಲ ಹಂತದಲ್ಲಿ ಬೇಸಾಯ ಪ್ರಮುಖ ಪಾತ್ರ ವಹಿಸುತ್ತದೆ. ಎರಡನೆಯ ಹಂತದಲ್ಲಿ ಔದ್ಯಮಿಕ ವಸ್ತುಗಳ ಉತ್ಪಾದನೆ ಮತ್ತು ಮೂರನೆಯ ಹಾಗೂ ಕೊನೆಯ ಹಂತದಲ್ಲಿ ಸೇವೆಗಳು ಪ್ರಮುಖ ಪಾತ್ರ ವಹಿಸುತ್ತವೆ.

ಆರ್ಥಿಕ ಅಭಿವೃದ್ಧಿ ಹೊಂದುತ್ತಿರುವ ಪ್ರತಿಯೊಂದು ಪ್ರಾಂತಕ್ಕೆ ಸಮ ತೋಲನಾ ಬೆಳವಣಿಗೆಯ ನಿಯಮ ಅನ್ವಯವಾಗುವದೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಆರ್ಥಿಕ ಅಭಿವೃದ್ಧಿಯ ಇತಿಹಾಸವನ್ನು ನಾವು ನೋಡಿದಾಗ ಸಮತೋಲನಾ ಬೆಳವಣಿಗೆ ಪ್ರತಿಯೊಂದು ಪ್ರಾಂತಕ್ಕೆ ಮತ್ತು ದೇಶಕ್ಕೆ ಅನ್ವಯವಾಗುವದಿಲ್ಲವೆಂದು ತೋರುತ್ತದೆ. ಅಮೇರಿಕಾ ದೇಶವು ಬೇಸಾಯ ಉತ್ಪಾದನೆಯನ್ನು ರಫ್ತುಮಾಡಿ ಆರ್ಥಿಕ ಅಭಿವೃದ್ಧಿ ಸಾಧಿಸಿತು. ಬೆಲ್ಜಿಯಮ್ ದೇಶವು ಗ್ಲಾಸ ಮತ್ತು ಉಣ್ಣೆಯ ಬಟ್ಟೆಗಳ ಉತ್ಪಾದನೆಯಲ್ಲಿ ಪ್ರಾವೀಣ್ಯ ಪಡೆದು ಅಭಿವೃದ್ಧಿ ಸಾಧಿಸಿತು. ಆದ್ದರಿಂದ ಆರ್ಥಿಕ ಅಭಿವೃದ್ಧಿ ಪ್ರತಿಯೊಂದು ಭಾಗದಲ್ಲಿಯೂ ಸಮತೋಲವಾಗಿರಬೇಕೆಂದಿಲ್ಲ.

### *೮.೪ ಬೇಸಾಯ ಮತ್ತು ಔದ್ಯಮೀಕರಣ*

ನ್ಯೂಝಿಲಂಡ, ಡೆನ್ಮಾರ್ಕ, ಹಾಲಂಡ ಮತ್ತು ಅರ್ಜೆಂಟೈನಾ ದೇಶಗಳಲ್ಲಿ ಬೇಸಾಯದಲ್ಲಿಯ ಉತ್ಪತ್ತಿ ಉದ್ದಿಮೆಗಳಲ್ಲಿಯ ಉತ್ಪತ್ತಿಗಿಂತ ಕಡಿಮೆ ಇಲ್ಲ. ಅವು ಅಪವಾದಗಳಾಗಿವೆ. ಆದರೆ ಉಳಿದ ದೇಶಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿಯ ಜನರ ಆದಾಯ ಗ್ರಾಮೀಣ ಪ್ರದೇಶದ ಜನರ ಆದಾಯಕ್ಕಿಂತ ಬಹಳ ಹೆಚ್ಚಿಗಿದೆ. ಶ್ರೀಮಂತ ದೇಶಗಳಲ್ಲಿ ಹೆಚ್ಚಿನ ಸಂಪನ್ಮೂಲಗಳನ್ನು ಉದ್ದಿಮೆಗಳಲ್ಲಿ ತೊಡಗಿಸಲಾಗಿರುತ್ತದೆ. ಆದ್ದರಿಂದ ಔದ್ಯಮೀಕರಣವೇ ಐಶ್ವರ್ಯಕ್ಕೆ ಕಾರಣವೆಂದು ತಿಳಿಯುತ್ತಾರೆ. ಆದರೆ ಔದ್ಯಮೀಕರಣ ಐಶ್ವರ್ಯದ ಪರಿಣಾಮವಾಗಿದೆ.

ಇಂತಹ ಅಭಿಪ್ರಾಯಗಳನ್ನು ಹೇಳುವಾಗ ನಾವು ಬಹಳ ಎಚ್ಚರ ವಹಿಸ ಬೇಕಾಗುತ್ತದೆ. ಶ್ರೀಮಂತನೊಬ್ಬ ದುಬಾರಿ ಸಿಗರೇಟ್ ಸೇದಬಹುದು. ಆದರೆ ದುಬಾರಿಯ ಸಿಗರೇಟ ಸೇದುವವರೆಲ್ಲರೂ ಶ್ರೀಮಂತರೆಂದು ಭಾವಿಸುವದು ತಪ್ಪು. ಬೇಸಾಯದಿಂದ ಅಭಿವೃದ್ಧಿ ಸಾಧ್ಯವೋ ಅಥವಾ ಉದ್ದಿಮೆಯಿಂದ ಸಾಧ್ಯವೋ ಎಂಬ ಪ್ರಶ್ನೆಗೆ ಉತ್ತರ ಆಯಾ ದೇಶಗಳ ಸಂಪನ್ಮೂಲಗಳ ಮತ್ತು ಸ್ವಾಭಾವಿಕ ಅನುಕೂಲತೆಗಳ ಮೇಲೆ ಅವಲಂಬಿಸಿದೆ. ಕೆಲವೊಂದು ದೇಶಗಳಲ್ಲಿ ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದರಿಂದಲೂ ಅಭಿವೃದ್ಧಿ ಸಾಧ್ಯ.

### *೮.೫ ಆಮದು ಬದಲೀಕರಣ ಮತ್ತು ರಫ್ತು ಉತ್ತೇಜನ*

ದೇಶಗಳು ಔದ್ಯಮೀಕರಣಗೊಳ್ಳಬೇಕಾದರೆ ಆಮದು ಬದಲೀಕರಣ ನೀತಿಯನ್ನು ಅನುಸರಿಸಬೇಕೋ ಅಥವಾ ರಫ್ತು ಉತ್ತೇಜನ ನೀತಿಯನ್ನು ಅನುಸರಿಸಬೇಕೋ ಎಂಬುದು ಒಂದು ಸಮಸ್ಯೆ. ರೇಲ್ ಪ್ರೆಬಿಶ್ಚ ಎಂಬ ಅರ್ಥಶಾಸ್ತ್ರಜ್ಞರು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕೇವಲ ಬೇಸಾಯದ ಮೇಲೆ ಅವಲಂಬಿಸಿರದೆ ಔದ್ಯಮೀಕರಣಗೊಳ್ಳಬೇಕೆಂದು ಪ್ರತಿಪಾದಿಸಿದರು. ಈ ದೇಶಗಳು ಔದ್ಯಮೀಕರಣಗೊಳ್ಳುವಾಗ ಅಭಿವೃದ್ಧಿ ಹೊಂದಿದ ದೇಶಗಳ ಉದ್ದಿಮೆಗಳ ಜೊತೆ ಪೈಪೋಟಿ ನಡೆಸಲು ಸಾಧ್ಯವಾಗುವದಿಲ್ಲ. ಆದ್ದರಿಂದ ಈ ಉದ್ದಿಮೆಗಳನ್ನು ಸಂರಕ್ಷಿಸಲು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಆಮದುಗಳ ಮೇಲೆ ಹೆಚ್ಚಿನ ಸುಂಕ ಹೇರಿ, ಪರದೇಶದ ವಸ್ತುಗಳು ದುಬಾರಿಯಾಗುವಂತೆ ಮಾಡಬೇಕೆಂದು ಹೇಳಿದರು. ಹೆಚ್ಚಿನ ಆಮದು ಸುಂಕದಿಂದ ಪರದೇಶಿ ವಸ್ತುಗಳು ದುಬಾರಿಯಾದಾಗ, ಸ್ವದೇಶಿ ಉದ್ದಿಮೆಯ ವಸ್ತುಗಳು ದೇಶದಲ್ಲಿ ಮಾರಾಟವಾಗುವವು. ಈ ರೀತಿಯ ಆಮದು ಬದಲೀ ನೀತಿಯಿಂದ ಜನರ ತಲಾ ಆದಾಯ ಕಡಿಮೆಯಾಗುವದೆಂದು ಈ ನೀತಿಯ ಟೀಕಾಕಾರರು ವಾದಿಸುತ್ತಾರೆ. ಇದರ ಬದಲಾಗಿ ರಫ್ತು ಉತ್ತೇಜನ ನೀತಿಯನ್ನು ದೇಶಗಳು ಅಳವಡಿಸಿಕೊಂಡರೆ ಬಳಕೆದಾರನಿಗೂ ದೇಶಕ್ಕೂ ಲಾಭವಾಗು ತ್ತದೆಯೆಂದು ಅವರು ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಕೊರಿಯಾ, ತೈವಾನ, ಸಿಂಗಪೂರ, ಹಾಂಗ್‌ಕಾಂಗ ಮುಂತಾದ ದೇಶಗಳು ರಫ್ತು ಉತ್ತೇಜನ ನೀತಿಯಿಂದ

ಆರ್ಥಿಕ ಅಭಿವೃದ್ಧಿ ಸಾಧಿಸಿರುವದು ಇದಕ್ಕೆ ನಿದರ್ಶನವೆಂದು ಅವರು ಹೇಳುತ್ತಾರೆ.

### *೮.೬ ಜನಸಂಖ್ಯಾ ಸಮಸ್ಯೆ*

ಕೇವಲ ಜನಸಂಖ್ಯೆ ಬೆಳೆದರೆ ಅಭಿವೃದ್ಧಿಯೆಂದು ಹೇಳಲಾಗದು. ಮಾಲ್ಥಸ್ ಹೇಳಿದಂತೆ ಹತೋಟಿ ಮೀರಿ ಜನಸಂಖ್ಯೆ ಬೆಳೆದರೆ ಇಳಿಮುಖ ಪ್ರತಿಫಲ ನಿಯಮ ಕೆಲಸ ಮಾಡಲು ಪ್ರಾರಂಭಿಸಿ ಜನರ ಜೀವನ ಮಟ್ಟದ ಸುಧಾರಣೆಗೆ ಆತಂಕವೊಡ್ಡುವ ಭಯವಿದೆ. ಈಗ ಅಭಿವೃದ್ಧಿ ಹೊಂದುತ್ತಿರುವ ಏಶಿಯಾ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದ ಬಹುತೇಕ ರಾಷ್ಟ್ರಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿಯು ಹೆಚ್ಚಿಗಿದೆ. ಈ ದೇಶಗಳು 18 ಮತ್ತು 19ನೇ ಶತಮಾನಗಳಲ್ಲಿ ಈಗ ಅಭಿವೃದ್ಧಿ ಹೊಂದಿದ ದೇಶಗಳು ಎದುರಿಸಿದ್ದ ಸಮಸ್ಯೆಗಳನ್ನು ಈಗ ಎದುರಿಸುತ್ತಿವೆ. ಮರಣ ಪ್ರಮಾಣಗಳು ಈ ದೇಶಗಳಲ್ಲಿ ತೀವ್ರಗತಿಯಿಂದ ಇಳಿದಿವೆ. ಆದರೆ ಜನನ ಪ್ರಮಾಣ ಇನ್ನೂ ಹೆಚ್ಚಿಗೆ ಇರುವದರಿಂದ ಈ ದೇಶಗಳಲ್ಲಿ ಜನಸಂಖ್ಯೆ ಬೆಳೆಯುವ ಗತಿಯು ಹೆಚ್ಚಿಗಿದೆ. ಈ ದೇಶಗಳ ಅಭಿವೃದ್ಧಿಯ ಅನುಭವದ ಎರಡು ಪಾಠಗಳನ್ನು ನಾವಿಲ್ಲಿ ಗಮನಿಸಬಹುದು.

ಮೊದಲನೆಯದು : ಅಜ್ಜಿ ನೂತಿದ್ದೆಲ್ಲ ಮೊಮ್ಮಗನ ಉಡದಾರಕ್ಕೆ ಎಂಬ ಗಾದೆಯಂತೆ ಈ ದೇಶಗಳಲ್ಲಿ ಮುಂದುವರಿದ ತಾಂತ್ರಿಕತೆಯಿಂದ ಹೆಚ್ಚಾದ ಉತ್ಪಾದನೆ ಹೆಚ್ಚಿನ ಜನಸಂಖ್ಯೆಯಲ್ಲಿ ಹಂಚಿ ಹೋಗುತ್ತದೆ.

ಎರಡನೆಯದು : ಆಧುನಿಕ ವಿಜ್ಞಾನ ಆಹಾರ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದ ಗತಿಗಿಂತ ರೋಗ ರುಜಿನಗಳನ್ನು ಗೆಲ್ಲುವಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿವೆ. ಆದ್ದರಿಂದ ಜನಸಂಖ್ಯೆಯನ್ನು ನಿಯಂತ್ರಣದಲ್ಲಿ ತರದೇ ಹೋದಲ್ಲಿ ಜನರು ಆಹಾರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಜನನ ಪ್ರಮಾಣಗಳು ಈ ದೇಶಗಳಲ್ಲಿಯೂ ಈಗ ಇಳಿಮುಖವಾಗಿದ್ದರೂ ಇನ್ನೂ ಸಮಾಧಾನಕರವಾದಂತಹ ಮಟ್ಟವನ್ನು ಮುಟ್ಟಿಲ್ಲ. ಆದ್ದರಿಂದ ೨೧ನೆಯ ಶತಮಾನದಲ್ಲಿ

ಏಶಿಯಾ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದ ದೇಶಗಳು ಜನಸಂಖ್ಯಾ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

### *೮.೭ ಮಾನವ ಸಂಪನ್ಮೂಲ ಸುಧಾರಣೆ*

ಶ್ರಮವು ಬಹು ಮುಖ್ಯ ಉತ್ಪಾದನಾ ಸಾಧನವಾಗಿರುವದರಿಂದ ಶ್ರಮಿಕರ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಬೇಕಾದಾಗ ಕೆಳಗಿನ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

೧) ರೋಗಗಳನ್ನು ನಿಯಂತ್ರಿಸಿ, ಸಾರ್ವಜನಿಕ ಆರೋಗ್ಯ ರಕ್ಷಣಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವದು. ಪೌಷ್ಟಿಕ ಆಹಾರ ಒದಗಿಸುವ ಕಾರ್ಯಕ್ರಮಗಳು. ಇದರಿಂದ ಜನರ ಆರೋಗ್ಯದ ಮಟ್ಟ ಹೆಚ್ಚಿ ಉತ್ಪಾದನೆ ಹೆಚ್ಚುವುದಲ್ಲದೇ ಜನರ ಸುಖ ಸಂತೋಷವೂ ವೃದ್ಧಿಯಾಗುತ್ತದೆ. ಈ ದೃಷ್ಟಿಯಿಂದ ಆರೋಗ್ಯ ಕೇಂದ್ರಗಳು ಸಾಮಾಜಿಕ ಬಂಡವಾಳವಾಗಿವೆಯೆಂದು ಹೇಳಬಹುದು.

೨) ಸುಶಿಕ್ಷಿತ ಜನರು ಉತ್ಪಾದನೆಯನ್ನು ಅಧಿಕಗೊಳಿಸುವ ಶ್ರಮಿಕ ರಾಗಿರುತ್ತಾರೆ. ಆದ್ದರಿಂದ ಹೆಚ್ಚಿನ ಶಾಲೆಗಳನ್ನು ತೆಗೆಯುವದರಿಂದ ನಿರಕ್ಷರಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಓದು ಬರಹ ಕಲಿಯುವದರ ಜೊತೆಗೆ ಹೊಸ ಹೊಸ ತಂತ್ರಗಳನ್ನು ಉತ್ಪಾದನೆಯಲ್ಲಿ ಅಳವಡಿಸಿಕೊಳ್ಳುವದು ಬಹು ಮುಖ್ಯ. ಈ ದಿಸೆಯಲ್ಲಿ ತಾಂತ್ರಿಕ ಶಿಕ್ಷಣ ಬಹಳ ಪ್ರಮುಖ ಪಾತ್ರ ವಹಿಸುತ್ತದೆ.

### *೮.೮ ಮರೆಮಾಚಿದ ನಿರುದ್ಯೋಗ*

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಗ್ರಾಮೀಣ ಪ್ರದೇಶಗಳಲ್ಲಿ ಮರೆಮಾಚಿದ ನಿರುದ್ಯೋಗ ಹೆಚ್ಚಿಗಿದೆ. ಯಾರು ನಿರುದ್ಯೋಗಿಗಳು ಯಾರು ಉದ್ಯೋಗಿಗಳು ಎಂಬುದನ್ನು ಹೇಳುವದು ಕಷ್ಟ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿಯ ಕೆಲವು ಜನರನ್ನು ಬೇಸಾಯ ರಂಗದಿಂದ ಬೇರೆ ರಂಗಕ್ಕೆ ವರ್ಗಾವಣೆ ಮಾಡಬೇಕಾಗುತ್ತದೆ. ಬೇಸಾಯದಲ್ಲಿ ಜನರು ಕಡಿಮೆ

ಯಾದರೂ ಉತ್ಪಾದನೆ ಅಷ್ಟಕ್ಕೇ ಉಳಿಯುತ್ತದೆ. ಈ ಹೆಚ್ಚಿನ ಜನರನ್ನು ಬೇರೆ ರಂಗಗಳಲ್ಲಿ ಉತ್ಪಾದನೆಗೆ ತೊಡಗಿಸಿದರೆ ದೇಶದ ಒಟ್ಟು ಉತ್ಪಾದನೆ ಹೆಚ್ಚಾಗುತ್ತದೆ. ಹೀಗೆ ಶ್ರಮದ ಸರಿಯಾದ ಉಪಯೋಗದಿಂದ ಅಭಿವೃದ್ಧಿಯನ್ನು ಸಾಧಿಸಿದಂತಾಗುತ್ತದೆ.

### *೮.೯ ನೈಸರ್ಗಿಕ ಸಂಪನ್ಮೂಲಗಳು*

ಕೆಲವೊಂದು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ನೈಸರ್ಗಿಕ ಸಂಪನ್ಮೂಲಗಳ ಕೊರತೆಯನ್ನು ಅನುಭವಿಸುತ್ತವೆ. ಮತ್ತೆ ಕೆಲವು ದೇಶಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸರಿಯಾದ ಉಪಯೋಗವಾಗದೆ ಇರಬಹುದು. ಸಂಪನ್ಮೂಲಗಳ ಸರಿಯಾದ ಉಪಯೋಗದಿಂದ ಬಡದೇಶಗಳು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ. ಕೆಲವು ದಶಕಗಳ ಹಿಂದೆ ಬಡ ರಾಷ್ಟ್ರಗಳಾಗಿದ್ದ ಅರಬ ದೇಶಗಳು ತೈಲ ಉತ್ಪಾದನೆಯಿಂದ ಈಗ ಅಭಿವೃದ್ಧಿಯನ್ನು ಸಾಧಿಸುತ್ತಿವೆ.

### ಬಂಡವಾಳ ನಿರ್ಮಾಣ

ಅಭಿವೃದ್ಧಿ ಹೊಂದುತ್ತಿರುವ ಬಡರಾಷ್ಟ್ರಗಳಲ್ಲಿ ಜನರ ತಲಾ ಆದಾಯ ಕಡಿಮೆ ಇರುವದರಿಂದ ಅವರಿಗೆ ಹೆಚ್ಚು ಉಳಿತಾಯ ಮಾಡಲು ಸಾಧ್ಯವಾಗುವದಿಲ್ಲ. ಉಳಿತಾಯ ಕಡಿಮೆ ಇದ್ದಾಗ ಬಂಡವಾಳ ನಿರ್ಮಾಣವೂ ಕಡಿಮೆಯಾಗುತ್ತದೆ. ಅಭಿವೃದ್ಧಿ ಹೊಂದಿದ ಶ್ರೀಮಂತ ರಾಷ್ಟ್ರಗಳಲ್ಲಿ ಜನರ ಆದಾಯದ ಶೇಕಡಾ 20 ರಿಂದ 25ರಷ್ಟು ಭಾಗ ಬಂಡವಾಳ ನಿರ್ಮಾಣಕ್ಕೆ ಹೋಗುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಕಡಿಮೆ ಇರುತ್ತದೆ. ಅದೂ ಅಲ್ಲದೆ ಬಡರಾಷ್ಟ್ರಗಳಲ್ಲಿ ಬಂಡವಾಳ ನಿರ್ಮಾಣ ಕೆಲವೊಂದು ತಪ್ಪು ದಿಸೆಯಲ್ಲಿಯೂ ಹೋಗಬಹುದು. ಉದಾಹರಣೆಗೆ ಭಾರತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಜನರು ತಮ್ಮ ಉಳಿತಾಯದಿಂದ ಬಂಗಾರವನ್ನು ಖರೀದಿಸಿ ಇಡುವದು. ಬಂಗಾರವು ಉತ್ಪಾದನೆಗೆ ಸಹಾಯವಾಗುವದಿಲ್ಲ.

### ೮.೧೦ ಪರದೇಶದ ಬಂಡವಾಳ

ಈಗ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಅಭಿವೃದ್ಧಿಯ ಪಥದಲ್ಲಿ ಪರದೇಶದ ಬಂಡವಾಳವನ್ನು ಉಪಯೋಗಿಸಿದ್ದವು. 19ನೆಯ ಶತಮಾನದಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯಾ ಮುಂತಾದ ದೇಶಗಳು ಇಂಗ್ಲಂಡದಿಂದ ಬಂಡವಾಳ ಪಡೆದಿದ್ದವು. ಆದ್ದರಿಂದ ಈಗ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೆಲವೊಂದು ರಂಗಗಳಲ್ಲಿ ಪರದೇಶಿ ಬಂಡವಾಳವನ್ನು ಉಪಯೋಗಿಸಿದರೆ ಅನುಕೂಲವಾಗುತ್ತದೆ.

### ೮.೧೧ ತಾಂತ್ರಿಕ ಬದಲಾವಣೆ

ತಾಂತ್ರಿಕ ಬದಲಾವಣೆಯೂ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮುಂದುವರಿದ ದೇಶಗಳ ಸುಧಾರಿತ ತಂತ್ರಜ್ಞಾನವನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅನುಕರಣೆ ಮಾಡುವದರಿಂದ ಲಾಭ ಪಡೆಯ ಬಹುದು. ಜಪಾನ, ಜರ್ಮನಿ ಮತ್ತು ರಶಿಯಾ ದೇಶಗಳು ಅಭಿವೃದ್ಧಿ ಹೊಂದುವಾಗ ತಮ್ಮ ವಿದ್ಯಾರ್ಥಿಗಳನ್ನು ಪಾಶ್ಚಿಮಾತ್ಯ ದೇಶಗಳಿಗೆ ಕಳಿಸಿ ಅಲ್ಲಿಯ ತಾಂತ್ರಿಕತೆಯನ್ನು ತಮ್ಮ ಅಭಿವೃದ್ಧಿಗೆ ಬಳಸಿಕೊಂಡವು. ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳೂ ಸಹಿತ ಸುಧಾರಿಸಿದ ತಾಂತ್ರಿಕತೆಯನ್ನು ಹೊರ ದೇಶಗಳಿಂದ ಪಡೆದರೆ ಅಭಿವೃದ್ಧಿಗೆ ಅದು ಅನುಕೂಲವಾಗುತ್ತದೆ.

### ೮.೧೨ ಉದ್ಯಮ ಸಾಹಸತ್ವ

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಉದ್ಯಮ ಸಾಹಸತ್ವದ ಕೊರತೆ ಇರುವದರಿಂದ ಅವುಗಳ ಅಭಿವೃದ್ಧಿಗೆ ಇದೊಂದು ಆತಂಕವಾಗಿದೆ. ಆದ್ದರಿಂದ ಜನರಲ್ಲಿ ಉದ್ಯಮ ಸಾಹಸತ್ವವನ್ನು ಬೆಳೆಸಲು ಆ ದೇಶಗಳು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

●

# ೯. ರಾಷ್ಟ್ರೀಯ ಆದಾಯ ಮತ್ತು ಉತ್ಪನ್ನ

ಒಂದು ರಾಷ್ಟ್ರವು ಆರ್ಥಿಕವಾಗಿ ಪ್ರಬಲವಾಗಿದೆಯೋ ಅಥವಾ ದುರ್ಬಲವಾಗಿದೆಯೋ ಎಂಬುದನ್ನು ತಿಳಿಯಲು ಅದರ ರಾಷ್ಟ್ರೀಯ ವರಮಾನವನ್ನು ನೋಡಬೇಕಾಗುತ್ತದೆ. ರಾಷ್ಟ್ರೀಯ ಆದಾಯ ಹೆಚ್ಚಾಗಿದ್ದ ಶ್ರೀಮಂತ ರಾಷ್ಟ್ರಗಳಲ್ಲಿಯ ಜನರು ಹೆಚ್ಚಿನ ಸುಖ ಸಂಪತ್ತನ್ನು ಅನುಭವಿಸಿ ಸುಖಿಯಾದ ಜೀವನವನ್ನು ನಡೆಸುತ್ತಿರುತ್ತಾರೆ. ಬಡ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಆದಾಯ ಕಡಿಮೆ ಇರುವದರಿಂದ ಅಲ್ಲಿಯ ಜನರು ಸಾಧಾರಣ ಜೀವನ ಮಟ್ಟವನ್ನು ಹೊಂದಿದವರಾಗಿರುತ್ತಾರೆ. ರಾಷ್ಟ್ರೀಯ ವರಮಾನ ಎಲ್ಲ ಜನರಲ್ಲಿ ಹಂಚಿ ಹೋಗುವದರಿಂದ ಅವರ ತಲಾ ವರಮಾನವನ್ನು ನೋಡುವದು ಮುಖ್ಯ. ತಲಾವರಮಾನವು ಹೆಚ್ಚಿಗಿದ್ದರೆ ಮಾತ್ರ ಜನರ ಆರ್ಥಿಕ ಮಟ್ಟ ಸುಧಾರಿಸಿದೆ ಎಂದು ನಾವು ಹೇಳಬಹುದು.

ರಾಷ್ಟ್ರೀಯ ವರಮಾನ ಒಂದು ದೇಶದ ಆರ್ಥಿಕ ಪ್ರಗತಿಯ ಕೈಗನ್ನಡಿಯಾಗಿದೆ. ಅದು ಒಂದು ವರುಷದಲ್ಲಿ ಆ ದೇಶದಲ್ಲಿ ಉತ್ಪಾದಿಸಿದ ಸರಕು ಸೇವೆಗಳ ಪ್ರಮಾಣವನ್ನು ಸೂಚಿಸುವದರಿಂದ ಆ ದೇಶದ ಆರ್ಥಿಕ ಪ್ರಗತಿಯ ಮಟ್ಟವನ್ನು ಅಳೆಯುವ ಮಾಪಕವಾಗಿದೆಯೆಂದು ತಿಳಿಯಬಹುದು.

ರಾಷ್ಟ್ರೀಯ ವರಮಾನವನ್ನು ಮೂರು ರೀತಿಯ ಮಾಪಕಗಳಿಂದ ಅಳೆಯಬಹುದು. ಅವು ಯಾವುವೆಂದರೆ :

## ೯.೧ ವಾರ್ಷಿಕ ಉತ್ಪನ್ನದ ಮೌಲ್ಯ

ಈ ಮಾಪಕದ ಪ್ರಕಾರ ರಾಷ್ಟ್ರೀಯ ವರಮಾನವು ಒಂದು ದೇಶದಲ್ಲಿ ಒಂದು ವರುಷದಲ್ಲಿ ಉತ್ಪಾದಿಸುವ ಸರಕು ಸೇವೆಗಳ ಮೌಲ್ಯವಾಗಿದೆ. ದೇಶದಲ್ಲಿ ಉತ್ಪಾದಿಸಿದ ಸರಕು ಸೇವೆಗಳನ್ನು ಅಳೆಯುವಾಗ ಕೇವಲ ಅಂತಿಮ ಬಳಕೆಯ ಸರಕು ಹಾಗೂ ಸೇವೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಬ್ರೆಡ್ಡಿನ ಉತ್ಪಾದನೆಯನ್ನು ನಾವು ಲೆಕ್ಕಕ್ಕೆ ಹಿಡಿದಾಗ, ಆ ಬ್ರೆಡ್ಡನ್ನು ತಯಾರಿಸುವಲ್ಲಿ ಉಪಯೋಗಿಸಿದ ಹಿಟ್ಟಿನ ಬೆಲೆಯನ್ನು ಮತ್ತು ಗೋಧಿಯ ಬೆಲೆಯನ್ನು ಲೆಕ್ಕಕ್ಕೆ ಹಿಡಿದರೆ, ಒಂದು ವಸ್ತುವನ್ನು ಎರಡು ಅಥವಾ ಮೂರು ಬಾರಿ ಲೆಕ್ಕಕ್ಕೆ ಹಿಡಿದಂತೆ ಆಗುತ್ತದೆ. ಆದ್ದರಿಂದ ನಾವು ಕೇವಲ ಅಂತಿಮ ಬಳಕೆಯ ಸರಕುಗಳನ್ನು ಹಾಗೂ ಸೇವೆಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ದೇಶದ ಎಲ್ಲ ಉತ್ಪಾದನಾ ರಂಗಗಳಲ್ಲಿಯ ಉತ್ಪಾದನೆಯನ್ನು ಗಣನೆಗೆ ತೆಗೆದುಕೊಂಡಾಗ ರಾಷ್ಟ್ರೀಯ ಉತ್ಪನ್ನ ಬರುತ್ತದೆ. ಇದರಿಂದ ರಾಷ್ಟ್ರೀಯ ಆದಾಯವು ಯಾವ ಯಾವ ರಂಗಗಳಿಂದ ಎಷ್ಟು ಬರುತ್ತದೆಯೆಂಬುದನ್ನು ನಾವು ತಿಳಿಯಬಹುದು. ಅಂದರೆ ಬೇಸಾಯ ರಂಗದಿಂದ ಎಷ್ಟು ರಾಷ್ಟ್ರೀಯ ಉತ್ಪನ್ನ ಬರುತ್ತದೆ, ಉದ್ದಿಮೆ ರಂಗದಿಂದ ಎಷ್ಟು ಬರುತ್ತದೆ ಹಾಗೂ ವಿವಿಧ ಸೇವೆಗಳಿಂದ ಎಷ್ಟು ಬರುತ್ತದೆ ಎಂಬುದನ್ನು ನಾವು ತಿಳಿಯಬಹುದು. ಭಾರತದಲ್ಲಿ ಬೇಸಾಯ ರಂಗದಿಂದ ಈಗ ಸುಮಾರು ೧/೩ರಷ್ಟು ರಾಷ್ಟ್ರೀಯ ಆದಾಯ ಬರುತ್ತದೆಯೆಂದು ಅಂದಾಜು ಮಾಡಲಾಗಿದೆ

## ೯.೨ ರಾಷ್ಟ್ರೀಯ ವರಮಾನ

ಈ ವಿಧಾನದ ಪ್ರಕಾರ ರಾಷ್ಟ್ರದ ಎಲ್ಲ ವ್ಯಕ್ತಿಗಳ ವರಮಾನವನ್ನು ನಾವು ಕೂಡಿಸುವದರಿಂದ ರಾಷ್ಟ್ರೀಯ ವರಮಾನವನ್ನು ಲೆಕ್ಕ ಹಾಕಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನಲ್ಲಿಯ ಉತ್ಪಾದನಾ ಸಾಧನಗಳನ್ನು ಪೂರೈಸಿ ಅದರ ಪ್ರತಿಫಲವಾಗಿ ಆದಾಯವನ್ನು ಪಡೆಯುತ್ತಾನೆ. ಕೆಲವು ಜನರು ಆದಾಯವನ್ನು ಕೂಲಿಯ ರೂಪವಾಗಿ ಪಡೆಯಬಹುದು, ಮತ್ತೆ ಕೆಲವರು ಲಾಭದ ರೂಪವಾಗಿ

ಪಡೆಯಬಹುದು. ಆದರೆ ಇದರಲ್ಲಿ ನಾವು ಜನರಿಗೆ ಸಿಗುವ ವಿಶ್ರಾಂತಿ ವೇತನ ಮುಂತಾದ ವರ್ಗಾವಣೆಯ ಕೊಡುಗೆಯನ್ನು ಕೂಡಿಸುವದಿಲ್ಲ. ರಾಷ್ಟ್ರೀಯ ವರಮಾನದ ಮೂಲಕ ನಾವು ಪ್ರತಿಯೊಂದು ಉತ್ಪಾದನಾಂಗದ ಪಾಲು ಇದರಲ್ಲಿ ಎಷ್ಟಿದೆಯೆಂಬುದನ್ನು ಕಂಡುಹಿಡಿಯಬಹುದು. ರಾಷ್ಟ್ರೀಯ ವರಮಾನದಲ್ಲಿ ಲಾಭದ ಅಂಶವೆಷ್ಟು, ಕಾರ್ಮಿಕರ ಶ್ರಮದ ಅಂಶವೆಷ್ಟು ಎಂಬುದನ್ನು ತಿಳಿಯಬಹುದು.

### *೯.೩ ವಾರ್ಷಿಕ ವೆಚ್ಚ*

ಒಂದು ರಾಷ್ಟ್ರದಲ್ಲಿ ಎಲ್ಲ ಜನರು ಒಂದು ವರುಷದ ಅವಧಿಯಲ್ಲಿ ಮಾಡಿದ ಒಟ್ಟು ವೆಚ್ಚವನ್ನು ಕೂಡಿಸಿದರೆ ರಾಷ್ಟ್ರೀಯ ವರಮಾನ ಬರುತ್ತದೆ. ಜನರು ತಮ್ಮ ಆದಾಯದ ಒಂದು ಭಾಗವನ್ನು ಉಪಭೋಗಿ ಸರಕುಗಳ ಮೇಲೆ ಖರ್ಚು ಮಾಡಬಹುದು. ಕೆಲವೊಂದು ಭಾಗವನ್ನು ಉಳಿತಾಯ ಮಾಡಬಹುದು. ಕೆಲವೊಂದು ಭಾಗವನ್ನು ಬಂಡವಾಳ ಸರಕುಗಳ ಮೇಲೆ ವೆಚ್ಚ ಮಾಡಬಹುದು. ಖಾಸಗಿ ವ್ಯಕ್ತಿಗಳ ಒಟ್ಟು ವೆಚ್ಚ ಮತ್ತು ಸರಕಾರದ ವೆಚ್ಚವನ್ನು ಕೂಡಿಸಿದರೆ ರಾಷ್ಟ್ರೀಯ ವರಮಾನದ ಲೆಕ್ಕ ಸಿಗುತ್ತದೆ.

### *೯.೪ ನಿವ್ವಳ ರಾಷ್ಟ್ರೀಯ ಉತ್ಪನ್ನ*

ಒಂದು ವರುಷದ ಅವಧಿಯಲ್ಲಿ ಉತ್ಪಾದಿಸಿದ ಅಂತಿಮ ಬಳಕೆಯ ಸರಕು ಸೇವೆಗಳ ಒಟ್ಟು ಮೌಲ್ಯದಲ್ಲಿ ಅವುಗಳ ಉತ್ಪಾದನೆಗೆ ಉಪಯೋಗಿಸಿದ ಬಂಡವಾಳ ಸರಕುಗಳ ಸವಕಳಿಯ ಮೊತ್ತವನ್ನು ಕಳೆದರೆ ನಿವ್ವಳ ರಾಷ್ಟ್ರೀಯ ಉತ್ಪನ್ನ ನಮಗೆ ಸಿಗುತ್ತದೆ.

### *೯.೫ ತಲಾ ವರಮಾನ*

ತಲಾ ವರಮಾನವು ಬಹಳ ಉಪಯುಕ್ತವಾದಂತಹ ಭಾವನೆಯಾಗಿದೆ. ಒಟ್ಟು ರಾಷ್ಟ್ರೀಯ ವರಮಾನವನ್ನು ದೇಶದಲ್ಲಿರುವ ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ ತಲಾ ವರಮಾನ ಬರುತ್ತದೆ. ತಲಾವರಮಾನವನ್ನು ಹಣದಲ್ಲಿ

ವ್ಯಕ್ತಪಡಿಸಿದಾಗ ಹಣದ ರೂಪದ ತಲಾ ವರಮಾನವೆಂದು ಕರೆಯಲಾಗುತ್ತದೆ. ಬೆಲೆಗಳು ಏರುತ್ತಿರುವಾಗ ಹಣದ ರೂಪದಲ್ಲಿ ವರಮಾನ ಹೆಚ್ಚಿದರೂ ನಿಜವಾದ ರೂಪದಲ್ಲಿ ಅಂದರೆ ಸರಕು, ಸೇವೆಗಳ ರೂಪದಲ್ಲಿ ಅದು ಬದಲಾಗುತ್ತಿರುವದಿಲ್ಲ. ಆದ್ದರಿಂದ ಹಣದ ರೂಪದ ತಲಾ ವರಮಾನಕ್ಕಿಂತ ನಿಜ ತಲಾ ವರಮಾನ ಹೆಚ್ಚಿಗೆ ಉಪಯುಕ್ತವಾಗಿದೆ. ವ್ಯಕ್ತಿಯ ವಾಸ್ತವ ತಲಾ ವರಮಾನ ಹೆಚ್ಚುತ್ತಿದ್ದರೆ, ಆ ರಾಷ್ಟ್ರವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುತ್ತದೆಯೆಂದು ನಾವು ತಿಳಿಯಬಹುದು.

### ೯.೬ ಒಟ್ಟು ರಾಷ್ಟ್ರೀಯ ಉತ್ಪನ್ನ ಹಾಗೂ ಆರ್ಥಿಕ ಬೆಳವಣಿಗೆ

ಒಟ್ಟು ರಾಷ್ಟ್ರೀಯ ಉತ್ಪನ್ನವು ದೇಶದ ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಹೀಗಾಗಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕಾದರೆ ಒಟ್ಟು ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬೇಕೆಂದು ಆರ್ಥಿಕ ಬೆಳವಣಿಗೆಯ ಬಗ್ಗೆ ಬರೆಯುವ ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದರು. ರಾಷ್ಟ್ರೀಯ ಉತ್ಪನ್ನ ಹೆಚ್ಚಿದಂತೆ ಜನರ ತಲಾ ಆದಾಯ ಹೆಚ್ಚುವದರಿಂದ ಬಡತನವು ತನ್ನಿಂದ ತಾನೇ ಕಡಿಮೆಯಾಗುತ್ತದೆಯೆಂದು ಅವರು ಭಾವಿಸಿದ್ದರು.

ಆದರೆ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸಿದಾಗ್ಯೂ ಬಡತನ ಕಡಿಮೆಯಾಗದಿರುವದನ್ನು ನಾವು ಅನೇಕ ದೇಶಗಳ ಅನುಭವದಿಂದ ಕಂಡುಕೊಂಡಿದ್ದೇವೆ. ಡಡ್ಲೆ ಸೀಯರ್ಸ ಎಂಬ ಆಂಗ್ಲ ಅರ್ಥಶಾಸ್ತ್ರಜ್ಞನ ಪ್ರಕಾರ ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅರವತ್ತರ ದಶಕದಲ್ಲಿ ತಮ್ಮ ರಾಷ್ಟ್ರೀಯ ಉತ್ಪನ್ನವನ್ನು ವರುಷಕ್ಕೆ ಶೇಕಡಾ 5ರಷ್ಟು ಹೆಚ್ಚಿಸಿದರೂ ಆ ದೇಶಗಳಲ್ಲಿ ಬಡತನ, ನಿರಕ್ಷರತೆ ಕಡಿಮೆಯಾಗಲಿಲ್ಲವೆಂದು ತಮ್ಮ ಅಭ್ಯಾಸದಿಂದ ತೋರಿಸಿಕೊಟ್ಟಿದ್ದಾರೆ. ನಮ್ಮ ದೇಶದ ಅರ್ಥಶಾಸ್ತ್ರಜ್ಞರಾದ, ಪ್ರೊಫೆಸರ ದಾಂಡೇಕರ ಮತ್ತು ರಥ್ ರವರು ಸಹಿತ ದೇಶದ ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ 40ರಷ್ಟು ಜನರು ಬಡತನ ರೇಖೆಯ ಕೆಳಗೆ ಇದ್ದಾರೆಂದು ಅಂದಾಜು ಮಾಡಿದ್ದಾರೆ. ಆದ್ದರಿಂದ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕೇವಲ ರಾಷ್ಟ್ರೀಯ

ಉತ್ಪನ್ನವನ್ನು ಹೆಚ್ಚಿಸುವದರ ಕಡೆಗೆ ಗಮನ ಕೊಡದೆ ಆ ರಾಷ್ಟ್ರೀಯ ಉತ್ಪನ್ನ ಹೇಗೆ ಹಂಚಿ ಹೋಗುತ್ತದೆಯೆಂಬುದನ್ನೂ ಗಮನಿಸಬೇಕೆಂದು ಗುನ್ನಾರ ಮಿರ್ಡಾಲ್ ಎಂಬ ಸ್ವೀಡನ್ನಿನ ಅರ್ಥಶಾಸ್ತ್ರಜ್ಞ ಸೂಚಿಸಿದ್ದಾನೆ. ಮಹಬೂಬ ಹಕ್‌ನೆಂಬ ಪಾಕಿಸ್ಥಾನದ ಅರ್ಥಶಾಸ್ತ್ರಜ್ಞನೂ ಸಹಿತ ಇದನ್ನೇ ಹೇಳುತ್ತಾನೆ. ಕೇವಲ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸಿದರೆ ಸಾಲದು. ಆ ರಾಷ್ಟ್ರೀಯ ಉತ್ಪನ್ನದಲ್ಲಿ ಯಾವ ಯಾವ ವಸ್ತುಗಳು ಅಡಕವಾಗಿವೆಯೆಂಬುದು ಮುಖ್ಯವೆಂದು ಅವನು ಹೇಳುತ್ತಾನೆ. ರಾಷ್ಟ್ರೀಯ ಉತ್ಪನ್ನವನ್ನು ನಾವು ಶ್ರೀಮಂತ ವರ್ಗದ ಜನರು ಉಪಯೋಗಿಸುವ ವಸ್ತುಗಳ ಉತ್ಪಾದನೆಯನ್ನು ಮಾಡಿ ಹೆಚ್ಚಿಸಬಹುದು ಅಥವಾ ಬಡವರ್ಗದ ಜನರಿಗೆ ಬೇಕಾದ ವಸ್ತುಗಳ ಉತ್ಪಾದನೆ ಯನ್ನು ಮಾಡಿ ಹೆಚ್ಚಿಸಬಹುದು. ಶ್ರೀಮಂತ ವರ್ಗದ ಜನರಿಗೆ ಬೇಕಾದ ವಸ್ತುಗಳ ಉತ್ಪಾದನೆಯಿಂದ ರಾಷ್ಟ್ರೀಯ ಉತ್ಪನ್ನ ಹೆಚ್ಚಿದರೂ ಬಡತನ ಕಡಿಮೆಯಾಗದು. ಆದರೆ ಬಡಜನರು ಉಪಯೋಗಿಸುವ ಆಹಾರಧಾನ್ಯ, ಸಾದಾ ಬಟ್ಟೆ ಬರೆಗಳು ಮುಂತಾದ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯಿಂದ ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುವದರ ಜೊತೆಗೆ ಬಡತನವೂ ಕಡಿಮೆಯಾಗುತ್ತದೆ. ಆದ್ದರಿಂದ ಹೆಚ್ಚಿನ ಉತ್ಪಾದನೆಯ ಜೊತೆಗೆ ಸಮಾನವಾದ ಹಂಚಿಕೆಯೂ ಬಹಳ ಮುಖ್ಯವಾಗಿದೆ.

●

# ೧೦. ಸರಕಾರದ ಹಸ್ತಕ್ಷೇಪ

ಸರಕಾರವು ದೇಶದ ಆದಾಯದ ಉತ್ಪಾದನೆಯಲ್ಲಿ ಹಾಗೂ ಅದರ ವಿತರಣೆಯಲ್ಲಿ ಹಸ್ತಕ್ಷೇಪವನ್ನು ಮಾಡುತ್ತದೆ. ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳು ಒಂದರಮೇಲೊಂದು ಅವಲಂಬಿತವಾಗಿರುತ್ತವೆ. ಸಾರ್ವಜನಿಕ ವಲಯದಲ್ಲಾಗುವ ಬದಲಾವಣೆಗಳು ಖಾಸಗಿ ರಂಗದ ಮೇಲೆ ಪರಿಣಾಮ ಬೀರುತ್ತವೆ. ಮತ್ತು ಖಾಸಗಿ ರಂಗದಲ್ಲಾಗುವ ಬದಲಾವಣೆಗಳು ಸಾರ್ವಜನಿಕ ರಂಗದ ಮೇಲೆ ಪರಿಣಾಮ ಬೀರುತ್ತವೆ. ಯಾಕೆಂದರೆ ಸಾರ್ವಜನಿಕ ರಂಗ ಮತ್ತು ಖಾಸಗಿ ರಂಗಗಳೆರಡೂ ಒಂದೇ ಆರ್ಥಿಕ ವ್ಯವಸ್ಥೆಯ ಭಾಗಗಳಾಗಿರುತ್ತವೆ. ಸಾರ್ವಜನಿಕ ರಂಗದಲ್ಲಿಯ ವೆಚ್ಚ ಮತ್ತು ಖಾಸಗಿ ರಂಗದಲ್ಲಿಯ ವೆಚ್ಚಗಳೆರಡೂ ಒಟ್ಟು ವೆಚ್ಚವನ್ನು ನಿರ್ಧರಿಸುತ್ರವೆ. ಸಾರ್ವಜನಿಕ ರಂಗದಲ್ಲಿಯ ಉದ್ಯೋಗ ಮತ್ತು ಖಾಸಗಿ ರಂಗದಲ್ಲಿಯ ಉದ್ಯೋಗ ಎರಡೂ ಒಟ್ಟು ಉದ್ಯೋಗವನ್ನು ನಿರ್ಧರಿಸುತ್ತವೆ. ಮತ್ತು ಒಟ್ಟು ರಾಷ್ಟ್ರೀಯ ಆದಾಯದ ಹಂಚುವಿಕೆಯ ಮೇಲೆ ಸಾರ್ವಜನಿಕ ರಂಗವಾದ ಸರಕಾರ ಪ್ರಭಾವ ಬೀರ ಬಲ್ಲದು.

## *೧೦.೧ ಸರಕಾರ ಹಾಗೂ ಉತ್ಪಾದನೆ*

ಸರಕಾರದ ಆದ್ಯ ಕರ್ತವ್ಯ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವದಾಗಿದೆ. ಇದರ ಜೊತೆಗೆ ಕೆಲವೊಂದು ಆರ್ಥಿಕ ಸೇವೆಗಳನ್ನು ಒದಗಿಸುವದೂ ಸರಕಾರದ ಕರ್ತವ್ಯವಾಗಿದೆ. ಯಾಕೆಂದರೆ ಖಾಸಗಿ ವ್ಯಕ್ತಿಗಳು ಈ ಸೇವೆಗಳನ್ನು ಒದಗಿಸುವದು ಸಾಧ್ಯವಾಗಲಾರದು. ರಸ್ತೆ ನಿರ್ಮಾಣ,

ಸೇತುವೆಗಳ್ನು ಕಟ್ಟುವದು, ಬಂದರುಗಳ ನಿರ್ಮಾಣ ಮುಂತಾದ ಆರ್ಥಿಕ ಸೇವೆಗಳನ್ನು ಸರಕಾರವೇ ಒದಗಿಸಬೇಕಾಗುತ್ತದೆ. ಅರ್ಥಶಾಸ್ತ್ರದ ಪಿತಾಮಹನಾದ ಆಡಮ್‌ಸ್ಮಿಥ ಒಳ್ಳೆಯ ಸರಕಾರ ಮೂರು ಬಹುಮುಖ್ಯ ಕಾರ್ಯಗಳನ್ನು ಮಾಡಬೇಕಾಗುತ್ತದೆಯೆಂದು ಹೇಳಿದನು. ಅವು ಯಾವವೆಂದರೆ ಪರದೇಶದ ಆಕ್ರಮಣದಿಂದ ದೇಶವನ್ನು ರಕ್ಷಿಸುವದು, ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವದು ಮತ್ತು ಖಾಸಗಿ ರಂಗದವರು ಮಾಡಲು ಸಾಧ್ಯವಾಗದ ಕೆಲಸಗಳಾದ ರಸ್ತೆ ನಿರ್ಮಾಣ, ಸೇತುವೆಗಳ ನಿರ್ಮಾಣ, ಬಂದರುಗಳ ನಿರ್ಮಾಣ ಮುಂತಾದವುಗಳನ್ನು ಮಾಡುವದು. ಈ ಮೂರು ಮುಖ್ಯ ಕೆಲಸಗಳನ್ನು ಬಿಟ್ಟರೆ ಸರಕಾರ ಮತ್ತಾವ ಕೆಲಸಗಳನ್ನೂ ಮಾಡಬಾರದೆಂದು ಆಡಮ್ ಸ್ಮಿಥರು ವಾದಿಸಿದರು. ಸರಕಾರವು ಆರ್ಥಿಕ ರಂಗದಲ್ಲಿ ಹಸ್ತಕ್ಷೇಪ ಮಾಡಬಾರದು. ಎಲ್ಲವನ್ನೂ ಖಾಸಗಿ ರಂಗವೇ ನಿರ್ಧರಿಸಬೇಕೆಂದು ಅವರು ಹೇಳುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಸರಕಾರ ಆರ್ಥಿಕ ರಂಗದಲ್ಲಿ ಹಸ್ತಕ್ಷೇಪ ಮಾಡ ಬೇಕೆಂದು ಜನರು ಅಪೇಕ್ಷಿಸುತ್ತಾರೆ. ಅಷ್ಟೇ ಅಲ್ಲ ಕೆಲವೊಂದು ಆರ್ಥಿಕ ಸೇವೆಗಳನ್ನು ಒದಗಿಸುವದು ಸರಕಾರದ ಕರ್ತವ್ಯವಾಗಿದೆಯೆಂದು ಈಗ ಜನರು ತಿಳಿಯುತ್ತಾರೆ. ಕೆಲವೊಂದು ಆವಶ್ಯಕ ವಸ್ತುಗಳ ಉತ್ಪಾದನೆಯನ್ನು ಖಾಸಗಿ ರಂಗ ಮಾಡದೇ ಹೋಗಬಹುದು. ಅಂತಹ ಸಂದರ್ಭದಲ್ಲಿ ಸರಕಾರ ಆ ವಸ್ತುವಿನ ಉತ್ಪಾದನೆಯಲ್ಲಿ ಹಸ್ತಕ್ಷೇಪ ಮಾಡಬೇಕಾಗುತ್ತದೆ. ಉದಾಹರಣೆಗೆ ಕಟ್ಟಿಗೆ ಉತ್ಪಾದನೆಯಲ್ಲಿ ಖಾಸಗಿ ರಂಗ ಅಲ್ಪಾವಧಿಯ ಆಸಕ್ತಿಯನ್ನು ತೋರಿಸಬಹುದು. ಅಡವಿಯ ಸಂರಕ್ಷಣೆಯನ್ನು ಖಾಸಗಿ ರಂಗ ಮಾಡದೇ ಹೋಗಬಹುದು. ಆದರೆ ಸರಕಾರ ಇದನ್ನು ಕಡೆಗಣಿಸಲು ಸಾಧ್ಯವಿಲ್ಲ. ಸರಕಾರ ದೂರದೃಷ್ಟಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಗಿಡಗಳನ್ನು ಬೆಳೆಸಿ ಸಂರಕ್ಷಿಸುತ್ತದೆ. ಅದೇ ರೀತಿಯಾಗಿ ಖಾಸಗಿ ರಂಗ ಕೆಲವೊಂದು ವಸ್ತುಗಳ ಉತ್ಪಾದನೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳದೇ ಹೋಗಬಹುದು. ಔಷಧ ಮತ್ತು ಖಾದ್ಯ ಪದಾರ್ಥಗಳ ಉತ್ಪಾದನೆಯಲ್ಲಿ ಗುಣಮಟ್ಟವನ್ನು ಕಾಪಾಡಿ ಕೊಂಡು ಹೋಗುವಂತೆ ಸರಕಾರ ಕಾನೂನನ್ನು ಪಾಸುಮಾಡಬಹುದು. ವಸ್ತುವಿನ

ಉತ್ಪಾದನೆ ಹಾಗೂ ವಿತರಣೆಯಲ್ಲಿ ಏಕಸ್ವಾಮ್ಯ ಧೋರಣೆ ತಲೆದೋರಿದಾಗ ಮತ್ತು ಆ ವಸ್ತುವು ಸಾರ್ವಜನಿಕ ದೃಷ್ಟಿಯಿಂದ ಅವಶ್ಯಕವೆನಿಸಿದಾಗ, ಸರಕಾರ ಆ ವಸ್ತುವಿನ ಉತ್ಪಾದನೆಯನ್ನು ಹಾಗೂ ವಿತರಣೆಯನ್ನು ನಿಯಂತ್ರಿಸಲು ಕಾನೂನನ್ನು ಪಾಸು ಮಾಡಬಹುದು. ಕೆಲವೊಂದು ಸೇವೆಗಳನ್ನು ಸರಕಾರಿ ರಂಗವೇ ಒದಗಿಸಲು ಸಾಧ್ಯವಾಗುತ್ತದೆ. ಅಂಚೆ ತಂತಿ ಸೇವೆ, ರೇಲ್ವೆ ಸೇವೆ ಮುಂತಾದವುಗಳನ್ನು ಖಾಸಗಿ ರಂಗಕ್ಕೆ ಬಿಟ್ಟುಕೊಡುವದು ಒಳ್ಳೆಯದಲ್ಲ. ಹೀಗಾಗಿ ಈ ಸೇವೆಗಳು ಸಾರ್ವಜನಿಕ ರಂಗದಲ್ಲಿರಬೇಕಾಗುತ್ತದೆ.

### *೧೦.೨ ಸರಕಾರ ಮತ್ತು ವಿತರಣೆ*

ಸರಕಾರ ಹಸ್ತಕ್ಷೇಪ ಮಾಡದೇ ಇದ್ದಾಗ ಆದಾಯದ ಹಂಚುವಿಕೆಯಲ್ಲಿ ಬಹಳ ಅಸಮಾನತೆ ಇರುವದನ್ನು ನಾವು ನೋಡಬಹುದು. ಅಭಿವೃದ್ಧಿ ಹೊಂದುತ್ತಿರುವ ಹಿಂದುಸ್ಥಾನದಂತಹ ದೇಶಗಳಲ್ಲಿ ಬಡವ ಮತ್ತು ಶ್ರೀಮಂತರಲ್ಲಿ ವಿಪರೀತ ಅಂತರವಿದೆ. ಕೇವಲ ಕೆಲವು ಶ್ರೀಮಂತ ಜನರು ಅತೀ ಹೆಚ್ಚಿನ ಆದಾಯ ಹಾಗೂ ಐಶ್ವರ್ಯವನ್ನು ಹೊಂದಿ ಸುಖ ಸಮೃದ್ಧಿಯಿಂದ ಇರುವದರ ಜೊತೆಗೆ ಕೋಟಿಗಟ್ಟಲೆ ಜನರು ಹೊಟ್ಟೆ ತುಂಬ ಅನ್ನ ಸಿಗಲಾರದಂತಹ ಬಡತನದಲ್ಲಿರುವರು. ಈಗಿನ ನಾಗರಿಕ ಸಮಾಜ ಇಂತಹ ಅತೀವ ವ್ಯತ್ಯಾಸವನ್ನು ಒಪ್ಪಿಕೊಳ್ಳುವದಿಲ್ಲ. ಹೀಗಾಗಿ ಸರಕಾರ ಆದಾಯದ ಹಂಚುವಿಕೆಯಲ್ಲಿ ಹಸ್ತಕ್ಷೇಪ ಮಾಡಬೇಕಾಗುತ್ತದೆ. ಸರಕಾರಗಳು ಈಗ ಕನಿಷ್ಟ ಕೂಲಿಯ ಕಾಯ್ದೆ, ವೃದ್ಧಾಪ್ಯವೇತನ ಮತ್ತು ಇನ್ನೂ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಕೊಂಡಿರುತ್ತದೆ. ಈ ಕಾರ್ಯಕ್ರಮಗಳು ಬಡ ಜನರ ಜೀವನ ಮಟ್ಟವನ್ನು ಕಾಪಾಡಿಕೊಂಡು ಹೋಗುವಲ್ಲಿ ಸಹಾಯಕವಾಗುತ್ತವೆ.

### *೧೦.೩ ಸಾರ್ವಜನಿಕ ಆದಾಯ*

ಸಾರ್ವಜನಿಕ ಆದಾಯವೆಂದರೆ ಸರಕಾರದ ಆದಾಯ. ಸರಕಾರಗಳು ತಮ್ಮ ವೆಚ್ಚವನ್ನು ನಿರ್ವಹಿಸಲು ವಿವಿಧ ಮೂಲಗಳಿಂದ ಆದಾಯವನ್ನು ಪಡೆಯುತ್ತವೆ.

ಈ ಮೂಲಗಳನ್ನು ಎರಡು ಪ್ರಕಾರವಾಗಿ ವಿಂಗಡಿಸಬಹುದು.

೧) ತೆರಿಗೆ ಆದಾಯ

೨) ತೆರಿಗೆಯೇತರ ಆದಾಯ

ಸರಕಾರವು ತನ್ನ ವೆಚ್ಚಕ್ಕಾಗಿ ಸಾರ್ವಜನಿಕರಿಂದ ಕಡ್ಡಾಯವಾಗಿ ಸಂಗ್ರಹಿಸುವ ಹಣವೇ ತೆರಿಗೆ. ತೆರಿಗೆಯನ್ನು ವಿಧಿಸುವ ಹಕ್ಕು ಸರಕಾರಕ್ಕಿದೆ. ಯಾರಮೇಲೆ ಸರಕಾರ ತೆರಿಗೆಯನ್ನು ವಿಧಿಸುತ್ತದೆಯೋ ಅವರು ಅದನ್ನು ಕಡ್ಡಾಯವಾಗಿ ಸರಕಾರಕ್ಕೆ ಸಂದಾಯ ಮಾಡಬೇಕಾಗುತ್ತದೆ. ಸರಕಾರ ತೆರಿಗೆಯನ್ನು ವಿಧಿಸುವಾಗ ತನಗೆ ಬೇಕಾದ ಆದಾಯವನ್ನು ಸಂಗ್ರಹಿಸುವದೊಂದೇ ಅದರ ಉದ್ದೇಶವೆಂದು ಭಾವಿಸಬಾರದು. ಜನರ ಅನಾವಶ್ಯಕ ಉಪಭೋಗವನ್ನು ನಿಯಂತ್ರಿಸುವದೂ ಇಲ್ಲಿ ಒಂದು ಉದ್ದೇಶವಾಗಿರಬಹುದು. ಸರಕಾರ ಕೆಲವೊಂದು ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಬಹುದು. ಮದ್ಯದ ಮೇಲೆ ವಿಧಿಸಿದ ಅಬಕಾರಿ ಸುಂಕ ರಾಜ್ಯ ಸರಕಾರಕ್ಕೆ ಆದಾಯ ತರುವದರ ಜೊತೆಗೆ ಜನರ ಮದ್ಯದ ಸೇವನೆಯನ್ನು ಕಡಿಮೆ ಮಾಡುವದೂ ಅದರ ಉದ್ದೇಶವಾಗಿರುತ್ತದೆ. ಸರಕಾರ ತೆರಿಗೆ ವಿಧಿಸುವದರಿಂದ ವಸ್ತುಗಳ ಬೆಲೆಗಳಲ್ಲಿ ಹೆಚ್ಚಳವಾಗುತ್ತದೆ. ವಸ್ತುಗಳ ಬೆಲೆಗಳಲ್ಲಿ ಹೆಚ್ಚಳವಾದಾಗ ಆ ವಸ್ತುಗಳ ಉಪಭೋಗ ಕಡಿಮೆಯಾಗಬಹುದು. ಪರ ದೇಶದಿಂದ ವಸ್ತುಗಳನ್ನು ಆಮದು ಮಾಡಿಕೊಂಡಾಗ ಸರಕಾರ ಆ ವಸ್ತುವಿನ ಮೇಲೆ ಆಮದು ಸುಂಕವನ್ನು ವಿಧಿಸಬಹುದು. ಇದರಿಂದ ಸರಕಾರಕ್ಕೆ ಆದಾಯ ಬರುವದರ ಜೊತೆಗೆ ದೇಶದಲ್ಲಿ ಉತ್ಪಾದಿಸಿದ ವಸ್ತುಗಳಿಗೆ ಪ್ರೇರಣೆ ಕೊಡುವದೂ ಒಂದು ಉದ್ದೇಶವಾಗಿರಬಹುದು. ಆಮದುಗಳ ಮೇಲೆ ಸುಂಕ ವಿಧಿಸುವದರಿಂದ ದೇಶದಲ್ಲಿಯ ಉದ್ದಿಮೆಗಳಿಗೆ ರಕ್ಷಣೆ ಒದಗುತ್ತದೆ.

ಸರಕಾರ ತೆರಿಗೆಗಳನ್ನು ವಿಧಿಸಿ ಆದಾಯವನ್ನು ಹೊಂದುವದರ ಜೊತೆಗೆ ಹಣವನ್ನು ಜನರಿಂದ ಹಾಗೂ ಸಂಸ್ಥೆಗಳಿಂದ ಸಾಲರೂಪವಾಗಿ ಪಡೆಯಬಹುದು. ಈ ಸಾಲರೂಪವಾಗಿ ಪಡೆದ ಹಣವನ್ನು ಬಂಡವಾಳ ಜೋಡಣೆಗೆ ಉಪಯೋಗಿಸಲಾಗುತ್ತದೆ.

## *೧೦.೪ ತೆರಿಗೆಯ ಸ್ವರೂಪ*

ತೆರಿಗೆಗಳನ್ನು ಪ್ರತ್ಯಕ್ಷ ತೆರಿಗೆಗಳು ಹಾಗೂ ಪರೋಕ್ಷ ತೆರಿಗೆಗಳೆಂದು ವಿಂಗಡಿಸಲಾಗುತ್ತದೆ. ತೆರಿಗೆಯನ್ನು ಕೊಡುವವನು ಯಾವಾಗಲೂ ಅದರ ಭಾರವನ್ನು ಹೊರುತ್ತಾನೆಂದು ಹೇಳಲಿಕ್ಕಾಗದು. ಅಬಕಾರಿ ಸುಂಕವನ್ನು ವಸ್ತುಗಳ ಉತ್ಪಾದನೆಯ ಮೇಲೆ ಹೇರಲಾಗುತ್ತದೆ. ವಸ್ತುವನ್ನು ಉತ್ಪಾದಿಸುವವನು ಆ ತೆರಿಗೆಯನ್ನು ಮೊದಲು ಸರಕಾರಕ್ಕೆ ಸಂದಾಯ ಮಾಡುತ್ತಾನೆ. ಮುಂದೆ ಆ ವಸ್ತುಗಳನ್ನು ಮಾರಿದಾಗ ಆ ತೆರಿಗೆಯನ್ನು ಅವನು ವಸ್ತುಗಳನ್ನು ಕೊಳ್ಳುವವರಿಂದ ವಸೂಲ ಮಾಡುತ್ತಾನೆ. ಹೀಗಾಗಿ ಮೊದಲು ತೆರಿಗೆಯನ್ನು ಕೊಟ್ಟವನು ಅದರ ಭಾರವನ್ನು ಹೊರದೆ ವಸ್ತುಗಳನ್ನು ಉಪಯೋಗಿಸುವವನು ಅದರ ಭಾರವನ್ನು ಹೊರುತ್ತಾನೆ. ಇಂತಹ ತೆರಿಗೆಗಳನ್ನು ಪರೋಕ್ಷ ತೆರಿಗೆಗಳೆಂದು ಕರೆಯಲಾಗುತ್ತದೆ. ನಮ್ಮ ದೇಶದಲ್ಲಿ ವಸ್ತುಗಳ ಮೇಲೆ ವಿಧಿಸುವ ಅಬಕಾರಿ ಸುಂಕ, ಮಾರಾಟ ಕರ ಮುಂತಾದವುಗಳು ಪರೋಕ್ಷ ತೆರಿಗೆಗಳಾಗಿವೆ.

ಅದೇ ರೀತಿಯಾಗಿ ಕೇಂದ್ರ ಸರಕಾರವು ವಿಧಿಸುವ ಆದಾಯ ಕರ, ಕಂಪನಿ ಕರ ಮುಂತಾದವುಗಳು ಪ್ರತ್ಯಕ್ಷ ಕರಗಳಾಗಿವೆ. ಸರಕಾರಕ್ಕೆ ಕರ ಕೊಡುವವನು ಕರದ ಭಾರವನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಬಂದರೆ ಅದು ಪರೋಕ್ಷ ಕರ, ಇಲ್ಲದೆ ಹೋದಲ್ಲಿ ಅದು ಪ್ರತ್ಯಕ್ಷ ಕರವೆಂದು ನಾವು ಭಾವಿಸಬಹುದು.

ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶಗಳಲ್ಲಿ ಸರಕಾರವು ಹೆಚ್ಚಾಗಿ ಪರೋಕ್ಷ ಕರಗಳ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳಲ್ಲಿ ಸರಕಾರಗಳು ಹೆಚ್ಚಾಗಿ ಪ್ರತ್ಯಕ್ಷ ಕರಗಳ ಮೇಲೆ ಅವಲಂಬಿತವಾಗಿರುತ್ತವೆ. ಶ್ರೀಮಂತ ದೇಶಗಳಲ್ಲಿ ವ್ಯಕ್ತಿಯ ತಲಾ ಆದಾಯ ಹೆಚ್ಚಿರುವದರಿಂದ ಬಹಳಷ್ಟು ಜನರು ಆದಾಯ ಕರವನ್ನು ಕೊಡುತ್ತಾರೆ. ಆದರೆ ಬಡದೇಶಗಳಲ್ಲಿ ಆದಾಯ ಕರವನ್ನು ಕೊಡುವವರ ಸಂಖ್ಯೆ ಬಹಳ

ಕಡಿಮೆ. ಭಾರತದಲ್ಲಿ ಒಟ್ಟು ಜನಸಂಖ್ಯೆಯು ಈಗ ಸುಮಾರು 90 ಕೋಟಿ ಇದೆ. ಅದರಲ್ಲಿ ಕೇವಲ 70ಲಕ್ಷ ಜನರು ಮಾತ್ರ ಆದಾಯ ಕರವನ್ನು ಕೊಡುತ್ತಾರೆ. ಮಿಕ್ಕುಳಿದ ಜನ ಪರೋಕ್ಷ ಕರಗಳನ್ನು ಕೊಡುತ್ತಾರೆ.

ಭಾರತದಲ್ಲಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಜನರ ಮೇಲೆ ತೆರಿಗೆಯನ್ನು ಹಾಕುತ್ತವೆ. ನಮ್ಮ ದೇಶದ ಸಂವಿಧಾನದ ಪ್ರಕಾರ ಕೇಂದ್ರ ಸರಕಾರ ಕೆಳಗಿನ ಕರಗಳನ್ನು ಹಾಕಬಹುದು. ಅವು ಯಾವುವೆಂದರೆ:

### ೧೦.೫ ಆದಾಯ ಕರ

ವ್ಯಕ್ತಿಯ ವಾರ್ಷಿಕ ಆದಾಯ 30ಸಾವಿರ ರೂಪಾಯಿಗಳಿಗಿಂತ ಅಧಿಕವಾಗಿದ್ದರೆ ಅವನು ಆದಾಯ ಕರವನ್ನು ಕೊಡಬೇಕಾಗುತ್ತದೆ. ಅವನ ಆದಾಯ ಹೆಚ್ಚಿದಂತೆ ಅವನು ಹೆಚ್ಚಿನ ಭಾಗವನ್ನು ಸರಕಾರಕ್ಕೆ ತೆರಿಗೆಯ ರೂಪದಲ್ಲಿ ಸಂದಾಯ ಮಾಡಬೇಕಾಗುತ್ತದೆ.

### ೧೦.೬ ಕಂಪನಿ ಕರ

ಕಂಪನಿಗಳು ತಾವು ವರುಷದಲ್ಲಿ ಪಡೆಯುವ ಲಾಭದ ಕೆಲವೊಂದು ಭಾಗವನ್ನು ಕೇಂದ್ರ ಸರಕಾರಕ್ಕೆ ಸಂದಾಯ ಮಾಡಬೇಕಾಗುತ್ತದೆ.

### ೧೦.೭ ಅಬಕಾರಿ ಸುಂಕ

ವಸ್ತುಗಳ ಉತ್ಪಾದನೆಯ ಮೇಲೆ ಕೇಂದ್ರ ಸರಕಾರವು ಸುಂಕವನ್ನು ವಿಧಿಸುತ್ತದೆ.

ನಮ್ಮ ದೇಶದಲ್ಲಿ ಅಮಲು ತರಿಸುವ ವಸ್ತುಗಳನ್ನು ಹೊರತುಪಡಿಸಿ ಇನ್ನುಳಿದ ವಸ್ತುಗಳ ಉತ್ಪಾದನೆಯ ಮೇಲೆ ಕೇಂದ್ರ ಸರಕಾರ ಕರವನ್ನು ವಿಧಿಸುತ್ತದೆ. ಅಮಲು ಪಾದಾರ್ಥಗಳ ಮೇಲೆ ರಾಜ್ಯ ಸರಕಾರಗಳು ತೆರಿಗೆಯನ್ನು ವಿಧಿಸುತ್ತವೆ.

### *ವಿದೇಶಿ ವ್ಯಾಪಾರದ ಮೇಲೆ ಸುಂಕ*

ಕೇಂದ್ರ ಸರಕಾರವು ದೇಶದಿಂದ ಪರದೇಶಗಳಿಗೆ ರಫ್ತು ಆಗುವ ವಸ್ತುಗಳ ಮೇಲೆ ಹಾಗೂ ಪರದೇಶದಿಂದ ನಮ್ಮ ದೇಶಕ್ಕೆ ಆಮದು ಆಗುವ ವಸ್ತುಗಳ ಮೇಲೆ ಸುಂಕವನ್ನು ವಿಧಿಸಬಹುದು.

ರಾಜ್ಯ ಸರಾಕಾರಗಳು ಮಾರಾಟಕರ, ಅಮಲು ಪದಾರ್ಥಗಳ ಮೇಲೆ ಉತ್ಪಾದನಾ ಕರ, ವಾಹನ ಕರ, ಮನರಂಜನಾ ಕರ, ಭೂ ತೆರಿಗೆ ಮುಂತಾದ ಕರಗಳನ್ನು ವಿಧಿಸುತ್ತವೆ.

ಭಾರತದಲ್ಲಿ ಕೇಂದ್ರ ಸರಕಾರ ವಿಧಿಸುವ ಕರಗಳು ಹೆಚ್ಚು ಆದಾಯವನ್ನು ತರುವದರಿಂದ, ಕೇಂದ್ರ ಸರಕಾರದಿಂದ ರಾಜ್ಯ ಸರಕಾರಗಳಿಗೆ ಆದಾಯ ಹಂಚಿ ಹೋಗುವಂತೆ ನಮ್ಮ ಸಂವಿಧಾನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಐದು ವರುಷಕ್ಕೊಮ್ಮೆ ರಾಷ್ಟ್ರಪತಿಯವರು ಹಣಕಾಸು ಆಯೋಗವನ್ನು ನೇಮಿಸುತ್ತಾರೆ. ಈ ಹಣಕಾಸು ಆಯೋಗ ಸರಕಾರ ವಿಧಿಸುವ ಆದಾಯ ಕರ ಹಾಗೂ ಅಬಕಾರಿ ಕರಗಳ ಕೆಲವೊಂದು ಭಾಗವನ್ನು ರಾಜ್ಯ ಸರ್ಕಾರಗಳಿಗೆ ಹಂಚುವ ರೀತಿಯನ್ನು ಸೂಚಿಸುತ್ತದೆ. ಇಲ್ಲಿಯವರೆಗೆ ಭಾರತದಲ್ಲಿ ಒಂಬತ್ತು ಹಣಕಾಸು ಆಯೋಗಗಳು ನೇಮಕಗೊಂಡಿವೆ. ಅದರ ವರದಿಯನ್ನು ಅದು ಇನ್ನೂ ಸಲ್ಲಿಸಬೇಕಾಗಿದೆ. ಆದರೆ ಒಂಬತ್ತನೆಯ ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ಆದಾಯ ಕರದ ಶೇಕಡಾ ೮೫ ರಷ್ಟು ಭಾಗ ಮತ್ತು ಅಬಕಾರಿ ಸುಂಕಗಳ ಶೇಕಡಾ ೪೫ ರಷ್ಟು ಭಾಗ ಕೇಂದ್ರ ಸರಕಾರದಿಂದ ರಾಜ್ಯ ಸರಕಾರಗಳಿಗೆ ಹೋಗುತ್ತದೆ. ಈ ಮೊತ್ತವನ್ನು ಎಲ್ಲ ರಾಜ್ಯ ಸರಕಾರಗಳಿಗೆ ಹಣಕಾಸು ಆಯೋಗ ಸೂಚಿಸಿದ ರೀತಿಯಲ್ಲಿ ಹಂಚಲಾಗುತ್ತದೆ.

### *೧೦.೮ ತೆರಿಗೆಯ ಅಧಿಪಾತ*

ತೆರಿಗೆಯ ಅಧಿಪಾತವೆಂದರೆ ತೆರಿಗೆಯ ಭಾರ. ತೆರಿಗೆಯ ಹಣದ ಭಾರವನ್ನು ಅಂತಿಮವಾಗಿ ಯಾರು ಹೊರುತ್ತಾರೆ ಎಂಬುದನ್ನು ಇದು ತೋರಿಸುತ್ತದೆ. ಒಂದು

ವಸ್ತುವಿನ ಉತ್ಪಾದನೆಯ ಮೇಲೆ ಸರಕಾರ ತೆರಿಗೆಯನ್ನು ಹಾಕಿದಾಗ, ಆ ವಸ್ತುವಿನ ಉತ್ಪಾದಕನು ಆ ತೆರಿಗೆಯನ್ನು ಮೊದಲು ಸರಕಾರಕ್ಕೆ ಸಂದಾಯ ಮಾಡುತ್ತಾನೆ. ಆ ವಸ್ತುವನ್ನು ಉತ್ಪಾದಕನು ಠೋಕ ವ್ಯಾಪಾರಿಗೆ ಮಾರುತ್ತಾನೆ. ಆಗ ವಸ್ತುವಿನ ಮೇಲೆ ಹೇರಿದ ತೆರಿಗೆಯನ್ನು ಉತ್ಪಾದಕನು ಠೋಕ ವ್ಯಾಪಾರಿಯಿಂದ ಪಡೆಯುತ್ತಾನೆ. ಮುಂದೆ ಠೋಕ ವ್ಯಾಪಾರಿಯು ವಸ್ತುಗಳನ್ನು ಕಿರುಕುಳ ವ್ಯಾಪಾರಿಗೆ ಮಾರುತ್ತಾನೆ. ಕಿರುಕುಳ ವ್ಯಾಪಾರಿ ಕೊನೆಗೆ ಗ್ರಾಹಕನಿಗೆ ಆ ವಸ್ತುವನ್ನು ಮಾರುತ್ತಾನೆ. ಹೀಗೆ ಸರಕಾರ ವಸ್ತುವಿನ ಉತ್ಪಾದನೆಯ ಮೇಲೆ ವಿಧಿಸಿದ ತೆರಿಗೆ ಕೊನೆಯದಾಗಿ ಗ್ರಾಹಕನ ಮೇಲೆ ಬೀಳುತ್ತದೆ.

## *೧೦.೯ ತೆರಿಗೆ ಮತ್ತು ಉದ್ದಿಮೆ*

ತೆರಿಗೆಯು ವಸ್ತುವಿನ ಉತ್ಪಾದನೆಯ ಮೇಲೆ ಹಾಗೂ ಅದರ ಉಪಭೋಗದ ಮೇಲೆ ಪರಿಣಾಮ ಬೀರುತ್ತದೆ. ಆದಾಯ ಕರದ ದರವು ಬಹಳ ಹೆಚ್ಚಿಗೆ ಇದ್ದರೆ ಅದು ಆದಾಯ ಕರ ಕೊಡುವ ಜನರ ಕೆಲಸಮಾಡುವ ಉತ್ಸಾಹದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಉಳಿತಾಯದ ಮೇಲೆಯೂ ಸಹಿತ ಪ್ರತಿಕೂಲ ಪರಿಣಾಮವಾಗಬಹುದು. ಅದೇ ರೀತಿಯಾಗಿ ಜನಸಾಮಾನ್ಯನು ಬಳಸುವ ವಸ್ತುಗಳ ಮೇಲೆ ಹೆಚ್ಚಿನ ಕರ ವಿಧಿಸುವದರಿಂದ ಆ ವಸ್ತುಗಳ ಬೆಲೆಗಳು ಏರಿ ಜನಸಾಮಾನ್ಯನಿಗೆ ಅದರಿಂದ ತೊಂದರೆಯಾಗಬಹುದು. ಆದ್ದರಿಂದ ವಸ್ತುಗಳ ಮೇಲೆ ಕರ ವಿಧಿಸುವಾಗ ಆ ವಸ್ತುವನ್ನು ಯಾವ ವರ್ಗದ ಜನ ಕೊಂಡುಕೊಳ್ಳುತ್ತಾರೆ ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ. ಶ್ರೀಮಂತ ವರ್ಗದ ಜನ ಉಪಯೋಗಿಸುವ ಐಷಾರಾಮಿ ವಸ್ತುಗಳ ಮೇಲೆ ಕರವನ್ನು ಹಾಕಿದರೆ ಆ ವಸ್ತುಗಳನ್ನು ಕೊಳ್ಳುವ ಜನರಿಗೆ ಕರವನ್ನು ಕೊಡುವ ಸಾಮರ್ಥ್ಯವಿರುವದರಿಂದ ಅವರಿಗೆ ಏನೂ ತೊಂದರೆಯಾಗದು. ಆದರೆ ಬಡ ಜನರು ಉಪಯೋಗಿಸುವ ವಸ್ತುಗಳ ಮೇಲೆ ಕರ ಹಾಕಿದಾಗ ಆ ವಸ್ತುಗಳ ಬೆಲೆ ಏರುವದರಿಂದ ಬಡ ಜನರಿಗೆ ತೊಂದರೆಯಾಗಬಹುದು.

ಕೆಲವೊಂದು ವೇಳೆ ಕರ ವಿಧಿಸಿದ ವಸ್ತುಗಳ ಬೆಲೆ ಏರುವದರಿಂದ ಜನರು ಆ ವಸ್ತುವನ್ನು ಕೊಳ್ಳುವದು ಕಡಿಮೆಯಾಗಿ ಆ ವಸ್ತುವನ್ನು ಉತ್ಪಾದನೆ ಮಾಡುವ ಉದ್ದಿಮೆ ತೊಂದರೆಯಲ್ಲಿ ಸಿಕ್ಕಿಕೊಳ್ಳಬಹುದು.

### *೧೦.೧೦ ಹಣದುಬ್ಬರ ಹಾಗೂ ಕರಾಕರಣೆ*

ಯುದ್ಧ ಮತ್ತು ಇನ್ನುಳಿದ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಸರಕಾರಕ್ಕೆ ಹಣ ಬೇಕಾದಾಗ ಹೆಚ್ಚಿನ ಕರವನ್ನು ವಿಧಿಸದೆ ತನಗೆ ಬೇಕಾದ ಹೆಚ್ಚಿನ ಹಣವನ್ನು ಕೇಂದ್ರ ಬ್ಯಾಂಕಿನಿಂದ ಸಾಲ ಪಡೆದು ಅಥವಾ ತಾನೇ ನೋಟುಗಳನ್ನು ಅಚ್ಚು ಹಾಕಿಸಿ ವೆಚ್ಚ ಮಾಡಬಹುದು. ಇದರಿಂದ ಹಣದ ಚಲಾವಣೆಯಲ್ಲಿ ಹೆಚ್ಚಳವಾಗಿ ಬೆಲೆಗಳು ಏರಲು ಪ್ರಾರಂಭಿಸುತ್ತವೆ. ಇದನ್ನು ಹಣದುಬ್ಬರವೆಂದು ಕರೆಯಲಾಗುತ್ತದೆ. ಹಣದುಬ್ಬರವಾದಾಗ ಜನರ ನಿಜವಾದ ಆದಾಯ ಕಡಿಮೆಯಾಗುತ್ತದೆ. ಇದೂ ಒಂದು ರೀತಿಯ ಕರವೆಂದು ನಾವು ಭಾವಿಸಬಹುದು.

### *೧೦.೧೧ ಸಾರ್ವಜನಿಕ ಸಾಲ*

ಸರಕಾರಗಳು ತಮಗೆ ಬೇಕಾದ ಹಣವನ್ನು ಜನರಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲರೂಪವಾಗಿ ಪಡೆಯಬಹುದು. ಇದನ್ನು ಸಾರ್ವಜನಿಕ ಸಾಲವೆಂದು ಕರೆಯಲಾಗುತ್ತದೆ. ಸರಕಾರ ಈ ರೀತಿಯ ಸಾಲ ಪಡೆದಾಗ ಆ ಹಣಕ್ಕೆ ಪ್ರತಿ ವರುಷ ಬಡ್ಡಿಯನ್ನು ಸಂದಾಯ ಮಾಡ ಬೇಕಾಗುತ್ತದೆ. ಇದು ಸರಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಆದ್ದರಿಂದ ಸರಕಾರ ಸಾಲ ಪಡೆಯುವಾಗ ಆ ಮೊತ್ತವನ್ನು ಉತ್ಪಾದನೆಗೆ ಅನುಕೂಲವಾಗುವ ಬಾಬುಗಳ ಮೇಲೆ ವೆಚ್ಚ ಮಾಡಿದರೆ ಅದರಿಂದ ಸರಕಾರದ ಆದಾಯ ಹೆಚ್ಚುತ್ತದೆ. ಈ ಹೆಚ್ಚಿದ ಆದಾಯದಿಂದ ಸರಕಾರ ತಾನು ಪಡೆದ ಸಾಲವನ್ನು ಬಡ್ಡಿ ಸಹಿತ ಮರುಪಾವತಿ ಮಾಡಲು ಅನುಕೂಲವಾಗುತ್ತದೆ. ಒಂದು ವೇಳೆ ಸರಕಾರಗಳು ತಾವು ಪಡೆದ ಸಾಲವನ್ನು ಅನುತ್ಪಾದನಾ ಬಾಬುಗಳ ಮೇಲೆ

ವೆಚ್ಚ ಮಾಡಿದರೆ ಮುಂದೆ ಆ ಸಾಲವನ್ನು ಮರುಪಾವತಿ ಮಾಡುವುದಕ್ಕೆ ತುಂಬಾ ತೊಂದರೆಯಾಗುತ್ತದೆ.

ಸರಕಾರ ಆಂತರಿಕ ಸಾಲ ಪಡೆಯುವದಲ್ಲದೆ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ಪರರಾಷ್ಟ್ರಗಳಿಂದ ಹಣವನ್ನು ಸಾಲವಾಗಿ ಪಡೆಯಬಹುದು. ಇದನ್ನು ಬಾಹ್ಯ ಸಾಲವೆಂದು ಕರೆಯಲಾಗುತ್ತದೆ. ಇಂತಹ ಸಾಲಗಳ ಮೊತ್ತ ಸದಾ ಹೆಚ್ಚುತ್ತಿರುತ್ತದೆ. ಇದೊಂದು ಅನಿವಾರ್ಯ. ಏಕೆಂದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹಣದ ಅವಶ್ಯಕತೆ ಇದ್ದೇ ಇರುತ್ತದೆ. ಈ ಸಾಲಗಳನ್ನು ಬಹು ಜಾಣ್ಮೆಯಿಂದ ತೀರಿಸದಿದ್ದರೆ ದೇಶವು ಸಾಲಗಾರನಾಗಿ ವಿವಿಧ ಸಮಸ್ಯೆಗಳ ವಿಷವರ್ತುಲದಲ್ಲಿ ಸಿಲುಕಿ ನರಳಬೇಕಾಗುತ್ತದೆ. ಆದ್ದರಿಂದ ವಿದೇಶಿ ಹಾಗೂ ಆಂತರಿಕ ಸಾಲಗಳನ್ನು ತೀರಿಸಲು ತೀವ್ರ ವೇಗದ ಉತ್ಪಾದನೆ, ಅಧಿಕ ಪ್ರಮಾಣದ ರಫ್ತು, ಹೆಚ್ಚಿನ ಉಳಿತಾಯ ಹಾಗೂ ಕಠಿಣ ಪರಿಶ್ರಮಗಳು ಅತ್ಯಗತ್ಯ.

●

ಈ ಮಾಲೆಯ ಪುಸ್ತಕಗಳು ಪಠ್ಯಪುಸ್ತಕಗಳಲ್ಲ, ಶಾಲಾ ಕಾಲೇಜುಗಳಲ್ಲಿ ಅಧ್ಯಯನಕ್ಕೆ ಗೊತ್ತು ಮಾಡಿರುವ ಪಠ್ಯಕ್ರಮಕ್ಕೆ ಸಂಬಂಧಿಸಿದವು. ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕಾದ ಯಾವುದಾದರೊಂದು ವಿಷಯವನ್ನು ವಿಸ್ತಾರವಾಗಿ ಶಾಸ್ತ್ರೀಯ ಅಧ್ಯಯನಕ್ಕೆ ಸರಳವಾಗಿ ನಿರೂಪಿಸುವುದು ಈ ಮಾಲಿಕೆಯ ಪುಸ್ತಕಗಳ ಗುರಿ. ಆದಷ್ಟು ಸುಲಭ ಬೆಲೆಗೆ ಈ ಪುಸ್ತಕಗಳನ್ನು ಲಭ್ಯ ಮಾಡಿಕೊಡಬೇಕೆಂದೂ ಕನ್ನಡ ಪುಸ್ತಕ ಪ್ರಾಧಿಕಾರದ ಅಪೇಕ್ಷೆ. ಕನ್ನಡ ಮಗುವಿಗೆ ಕನ್ನಡದಲ್ಲೇ ಎಲ್ಲಾ ತಿಳುವಳಿಕೆಯೂ ಲಭ್ಯವಾಗಬೇಕು. ಈ ಘನವಾದ ಉದ್ದೇಶದ ಸಾಧನೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರವು ಶ್ರಮಿಸುತ್ತದೆ.